
ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 14 | ಸಂಚಿಕೆ 25 | ಜೂನ್ 15–21, 2020, | ಪುಟ 16 | ರೂ. 10

Web : www.janashakthi.co.in e-mail : js_weekly@yahoo.com



ಕಾಮ್ರೇಡ್ ಎಂ.ಸಿ.ಎನ್. ಲಾಲ್‌ಸಲಾಂ



ಮೂರು ರೈತ-ವಿರೋಧಿ ಸುಗ್ರೀವಾಜ್ಞೆಗಳು



ಕೃಷಿ – ಕಂಪನಿಗಳಿಗೆ ಸ್ವಾತಂತ್ರ್ಯ

ರೈತಾಪಿ ಜನಗಳಿಗೆ ಗುಲಾಮಗಿರಿ

ರಾಜ್ಯ ಸಂಪುಟದ ರೈತ–ವಿರೋಧಿ ದುಷ್ಟ ನಿರ್ಧಾರ





Corona Warrior

ಕೊರೋನಾ ವಾರಿಯರ್ಸ್ ಕಥೆ-ವ್ಯಥೆ





ದಿಲ್ಲಿಯಲ್ಲಿ ಅಧಿಕಾರದ ಭಂಡ ದುರುಪಯೋಗ

ಜುಲೈ 3: ಮತ್ತೆ ಕಾರ್ಮಿಕರ ರಾಷ್ಟ್ರವ್ಯಾಪಿ ಪ್ರತಿಭಟನಾ ದಿನಾಚರಣೆ

ಕೇಂದ್ರ ಕಾರ್ಮಿಕ ಸಂಘಟನೆಗಳ ಕರೆ–ತೀವ್ರತಮ ಹೋರಾಟಗಳಿಗೆ ಸಿದ್ಧತೆ

ಲಾಕ್‌ಡೌನ್ ಮರೆಯಲ್ಲಿ ಕಾರ್ಮಿಕ ಕಾನೂನುಗಳ ರದ್ಧತಿಯ ಪ್ರಯತ್ನಗಳ ವಿರುದ್ಧ ಮೇ 22ರಂದು ಯಶಸ್ವಿ ದೇಶವ್ಯಾಪಿ ಪ್ರತಿಭಟನೆಯ ನಂತರ ಜೂನ್ 3ರಂದು ಸಭೆ ಸೇರಿದ ಹತ್ತು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ಅಖಿಲ ಭಾರತ ನೌಕರರ ಒಕ್ಕೂಟಗಳು ಕೇಂದ್ರ ಸರಕಾರ ತಮ್ಮ ಬೇಡಿಕೆಗಳಿಗೆ ಕಿವುಡಾಗಿರುವ ಹಿನ್ನೆಲೆಯಲ್ಲಿ ಜುಲೈ 3 ರಂದು ಮತ್ತೊಂದು ದೇಶವ್ಯಾಪಿ ಪ್ರತಿಭಟನಾ ದಿನಾಚರಣೆಗೆ ಕರೆ ನೀಡಿವೆ.

ದೇಶಾದ್ಯಂತ ಈಗ ಕಾರ್ಮಿಕರು ಮತ್ತು ನೌಕರರು ಚಳುವಳಿಗಳಿಗೆ ಇಳಿದಿದ್ದಾರೆ. ಜೂನ್ 1 ರಂದು ವಿದ್ಯುತ್ ನೌಕರರು ಮತ್ತು ಇಂಜಿನಿಯರುಗಳು ವಿದ್ಯುಚ್ಛಕ್ತಿ ತಿದ್ದುಪಡಿ ಮಸೂದೆಯ ವಿರುದ್ಧ ಪ್ರತಿಭಟನೆ ನಡೆಸಿದ್ದಾರೆ. ರಕ್ಷಣಾ ಇಲಾಖೆಯ ನೌಕರರ ಒಕ್ಕೂಟಗಳು ವಿವಿಧ ಪ್ರತಿಭಟನೆಗಳನ್ನು ನಡೆಸುತ್ತಿದ್ದಾರೆ, ಒಂದು ಮುಷ್ಕರ ನಡೆಸುವ ಬಗ್ಗೆಯೂ ಅಭಿಪ್ರಾಯ ಸಂಗ್ರಹ ಮಾಡುತ್ತಿದ್ದಾರೆ. ಡಾಕ್ಟರುಗಳೂ ಸೇರಿದಂತೆ ಕೊವಿಡ್ ವಿರುದ್ಧ ಸಮರದಲ್ಲಿ ಮುಂಚೂಣಿಯ ಆರೋಗ್ಯ ಕಾರ್ಯಕರ್ತರೂ ಸುರಕ್ಷಾ ಸಾಧನಗಳಿಗಾಗಿ ಮತಪ್ರದರ್ಶನಕ್ಕೆ ಇಳಿಯಬೇಕಾಗಿ ಬಂದಿದೆ. ವಿವಿಧ ವಲಯಗಳಲ್ಲಿ ಇಂತಹುದೇ ಪ್ರತಿಭಟನೆಗಳು ನಡೆಯುತ್ತಿವೆ.

ವಲಸೆ ಕಾರ್ಮಿಕರ ಪ್ರಶ್ನೆಯನ್ನು ಸ್ವತಃ ಸುಪ್ರಿಂ ಕೋರ್ಟ್ ತಾನಾಗಿಯೇ ಕೈಗೆತ್ತಿಕೊಂಡಿರುವುದು ಕಾರ್ಮಿಕರಿಗೆ ಪರಿಹಾರ ಒದಗಿಸುವಲ್ಲಿ ಮೋದಿ ಸರಕಾರ ವಿಫಲವಾಗಿರುವುದನ್ನು ಎತ್ತಿ ತೋರಿದೆ.

ಜುಲೈ 3 ರ ಪ್ರತಿಭಟನಾ ದಿನಾಚರಣೆಯನ್ನು ಕೂಡ ಮೇ 22ರ ಪ್ರತಿಭಟನೆಯಂತೆ ದೈಹಿಕ ಅಂತರ ಮತ್ತಿತರ ಎಚ್ಚರಿಕೆಗಳನ್ನು ಪಾಲಿಸುತ್ತ ನಡೆಸಲಾಗುವುದು. ಇದೊಂದು ಸಿದ್ಧತೆಯ ಕಾರ್ಯಕ್ರಮ, ಕಾರ್ಮಿಕ ಸಂಘಟನೆಗಳು ದೀರ್ಘ ಕಾಲದ ವರೆಗೆ ನಡೆಸಬೇಕಾದ ಅಸಹಕಾರ, ಸರಕಾರದ ಜನ–ವಿರೋಧಿ, ರಾಷ್ಟ್ರ–ವಿರೋದಿ ಧೋರಣೆಗಳಿಗೆ ತಿರಸ್ಕಾರ ಮತ್ತು ಕಾರ್ಮಿಕರ ಹಕ್ಕುಗಳು ಹಾಗೂ ಅವರಿಗೆ ದಕ್ಕಬೇಕಾದವುಗಳ ರಕ್ಷಣೆಯ ಐಕ್ಯ ಹೋರಾಟಕ್ಕೆ ಪೂರ್ವಭಾವಿ ಕಾರ್ಯಾಚರಣೆಯಾಗಿದೆ ಎಂದು ಅವು ಹೇಳಿವೆ.

ಈ ರಾಷ್ಟ್ರವ್ಯಾಪಿ ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಗೊಳಿಸಬೇಕು ಎಂದು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಸಮಸ್ತ ಕಾಮಿಕ ವರ್ಗ ಮತ್ತು ಎಲ್ಲ ಕಾರ್ಮಿಕ ಸಂಘಗಳಿಗೆ ಮನವಿ ಮಾಡಿಕೊಂಡಿವೆ. ಹೋರಾಟದ ಮುಂದಿನ ಘಟ್ಟದಲ್ಲಿ ಸರಕಾರದ ನೀತಿಗಳ ಉಲ್ಲಂಘನೆ ಮತ್ತು ಅಸಹಕಾರದ ಮೂರ್ತ ವಿಧಾನಗಳನ್ನು, ಒಂದು ಸಾರ್ವತ್ರಿಕ ಮುಷ್ಕರದ ಬಗ್ಗೆಯೂ, ಈ ಪ್ರತಿಭಟನಾ ದಿನಾಚರಣೆಯ ನಂತರ ಸೂಕ್ತ ಸಮಯದಲ್ಲಿ ನಿರ್ಧರಿಸಲಾಗುವುದು ಎಂದು ಅವು ಹೇಳಿವೆ.

ಐಎಲ್‌ಸಿ ನಡೆಸಲು ಆಗ್ರಹ

ಸರಕಾರ ಮಾಲಕರ, ಕಾರ್ಪೊರೇಟ್‌ಗಳ ಸಂಘಗಳನ್ನು ಮತ್ತೆ–ಮತ್ತೆ ಭೇಟಿಯಾಗುತ್ತಿದ್ದರೂ, ತ್ರಿಪಕ್ಷೀಯ ಐಎಲ್‌ಸಿ (ಭಾರತೀಯ ಕಾರ್ಮಿಕ ಸಮ್ಮೇಳನ) ನಡೆಸದೆ ಬಹಳ ಕಾಲವಾಗಿದೆ. ಸರಕಾರ ಕೂಡಲೇ ಅದನ್ನು ನಡೆಸಿ, ಕೇಂದ್ರೀಯ ಕಾರ್ಮಿಕ ಸಂಘಟನೆಗಳ 12 ಅಂಶಗಳ ಆಗ್ರಹ ಪಟ್ಟಿ, ಕಾರ್ಮಿಕ ಹಕ್ಕುಗಳು, ಉದ್ಯೋಗ ನಷ್ಟಗಳು, ವಲಸೆ ಕಾರ್ಮಿಕರು ಮನೆಗೆ ಮರಳಿರುವುದು ಮತ್ತು ಅವರು ಮತ್ತೆ ಕೆಲಸಕ್ಕೆ ಸೇರಲು ಬಯಸಿದರೆ ಅದಕ್ಕೆ ಅವಕಾಶವೂ ಸೇರಿದಂತೆ ಇತರ ಪ್ರಶ್ನೆಗಳ ಮೇಲೆ ಸಂವಾದ ನಡೆಸಬೇಕು ಎಂದೂ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಆಗ್ರಹಿಸಿವೆ.

ಪೆಟ್ರೋಲ್, ಡೀಸೆಲ್ ದರ ಏರಿಕೆ ಜನಗಳ ಮೇಲಿನ ಕ್ರೌರ್ಯ

ಏರಿಕೆಗಳನ್ನು ಕೂಡಲೇ ಹಿಂತೆಗೆದುಕೊಳ್ಳಬೇಕು: ಎಐಆರ್‌ಟಿಡಬ್ಲ್ಯೂಎಫ್ ಆಗ್ರಹ

ಪೆಟ್ರೋಲ್, ಡೀಸೆಲ್ ದರಗಳನ್ನು ಪ್ರತಿದಿನವೆಂಬಂತೆ ಸತತವಾಗಿ ಏರಿಸಲಾಗುತ್ತಿದೆ. ಐದು ದಿನಗಳಲ್ಲೇ ಪೆಟ್ರೋಲ್ ದರಗಳಲ್ಲಿ ರೂ. 2.74 ಮತ್ತು ಡೀಸೆಲ್ ಬೆಲೆಗಳಲ್ಲಿ ರೂ.2.83 ಏರಿಕೆಯಾಗಿದೆ.

ಇದನ್ನು ಅಖಿಲ ಭಾರತ ರಸ್ತೆ ಸಾರಿಗೆ ಕಾರ್ಮಿಕರ ಒಕ್ಕೂಟ (ಎಐಆರ್‌ಟಿಡಬ್ಲ್ಯೂಎಫ್) ಬಲವಾಗಿ ಖಂಡಿಸಿದೆ. ಮೇ 5ರಂದು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆಗಳು ಕುಸಿಯುತ್ತಿದ್ದಾಗ ಅದರ ಪ್ರಯೋಜನ ಜನರಿಗೆ ಸಿಗದಂತೆ ವಂಚಿಸಿ, ಮೋದಿ ಸರಕಾರ ದೊಡ್ಡ ಪ್ರಮಾಣದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಅಬಕಾರಿ ಸುಂಕಗಳನ್ನು ಏರಿಸಿತು, ಅನುಕ್ರಮವಾಗಿ ಲೀಟರಿಗೆ ರೂ.10 ಮತ್ತು 13 ದರದಲ್ಲಿ ಏರಿಸಿ ಜನಗಳ ಖರ್ಚಿನಲ್ಲಿ ತನ್ನ ಖಜಾನೆ ತುಂಬಿಸಿಕೊಂಡಿತು. ಈಗ ಮತ್ತೆ ಏರಿಸುತ್ತಿದೆ. ಇದು ಜನಗಳ ಲೂಟಿಯಲ್ಲದೆ ಬೇರೇನೂ ಅಲ್ಲ ಇದನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು ಎಂದು ಸಾರಿಗೆ ಕಾರ್ಮಿಕರ ಒಕ್ಕೂಟ ಆಗ್ರಹಿಸಿದೆ, ತನಗೆ ಸಂಯೋಜಿತವಾದ ಎಲ್ಲ ಸಂಘಗಳು ಮತ್ತು ಜನಸಾಮಾನ್ಯರು ಈ ಏರಿಕೆಗಳನ್ನು ಪ್ರತಿಭಟಿಸಬೇಕು ಎಂದು ಅದು ಕರೆ ನೀಡಿದೆ.

ಈಗ ಜನಗಳು ಇಂಧನದ ಮೇಲೆ ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ 275ಶೇ. ತೆರಿಗೆ ತೆರುತ್ತಿದ್ದಾರೆ. ಇದೇ ಫೆಬ್ರುವರಿ ತಿಂಗಳಲ್ಲಿ ಇದು 107ಶೇ. ಇತ್ತು ಎಂಬುದನ್ನು ಗಮನಸಬೇಕು. ಈಗ ಪೆಟ್ರೋಲ್ ಮೂಲಬೆಲೆ ಲೀಟರಿಗೆ ಕೇವಲ 18ರೂ., ಆದರೆ ಜನ ರೂ.76.29 ತೆರಬೇಕಾಗಿದೆ. ಡೀಸೆಲ್ ಮೂಲಬೆಲೆ ಕೂಡ ರೂ.18.50, ಆದರೆ ಜನ ತೆರಬೇಕಾದ್ದು ರೂ.68.79(ಜೂನ್ 11ರಂದು), ಅಂದರೆ ಮೂರು ಪಟ್ಟಿಗಿಂತಲೂ ಹೆಚ್ಚಿನ ತೆರಿಗೆ.

ಜನಗಳು ಲಾಕ್ ಡೌನ್ ನಡುವೆ ಬದುಕುಳಿಯಲು ಹೋರಾಡುತ್ತಿರುವಾಗ, ಅವರ ಬಳಿ ಏನೂ ಆದಾಯವಿರದಿರುವಾಗ ಸರಕಾರ ಈ ಹೊರೆಗಳನ್ನು ಹಾಕುತ್ತಿದೆ. ಇಡೀ ಜಗತ್ತು ಕೋವಿಡ್–19ರಿಂದ ತೀವ್ರವಾಗಿ ಬಾಧೆಗೆ ಒಳಗಾಗಿರುವುದರಿಂದ ಸುಮಾರಾಗಿ ಎಲ್ಲ ರಾಷ್ಟ್ರೀಯ ಸರಕಾರಗಳು ತಮ್ಮ ಜನಗಳಿಗೆ ದೊಡ್ಡ ಪ್ರಮಾಣದಲ್ಲಿ ಹಣಕಾಸು ಬೆಂಬಲ ಒದಗಿಸುತ್ತಿವೆ. ಆದರೆ ಭಾರತದ ಕೇಂದ್ರ ಸರಕಾರ ಜನಗಳ ಮೇಲೆಯೇ ಭಾರೀ ಹೊರೆ ಹೇರುತ್ತಿದೆ. ಇದು ಈ ಸರಕಾರದ ಕ್ರೂರತನವನ್ನು ತೋರಿಸುತ್ತದೆ ಎಂದು ಸಾರಿಗೆ ಕಾರ್ಮಿಕರ ಒಕ್ಕೂಟ ಹೇಳಿದೆ.

ಪೆಟ್ರೋಲ್ ಮತ್ತು ಡೀಸೆಲ್ ದರಗಳ ಏರಿಕೆಯಿಂದ ಸಾಗಾಣಿಕೆ ವೆಚ್ಚಗಳು ಏರುವುದರಿಂದ ಎಲ್ಲ ಸರಕುಗಳ ಬೆಲೆಗಳು ಏರಿ ಜನಗಳ ಸಂಕಟಗಳು ಮತ್ತಷ್ಟು ಹೆಚ್ಚುತ್ತವೆ. ಕೋವಿಡ್–19ರ ಮೊದಲೇ ಸಾಗಾಣಿಕೆ ವಲಯ ಬಿಕ್ಕಟ್ಟಿನಲ್ಲಿತ್ತು. ದೀರ್ಘ ಲಾಕ್‌ಡೌನ್‌ನಿಂದಾಗಿ ಈ ವಲಯ ಇನ್ನಷ್ಟು ಕಷ್ಟಕ್ಕೆ ಒಳಗಾಗಿದೆ. ಆಟೋರಿಕ್ಷಾ, ಟ್ಯಾಕ್ಸಿ, ಟ್ರಕ್ ಮುಂತಾದವು ಬಹುಪಾಲು ಸಣ್ಣ ಮಾಲೀಕರ ಒಡೆತನದಲ್ಲಿ ಇರುವಂತವುಗಳು. ಅವರಿಗೆ ಎಲ್ಲ ತೆರಿಗೆಗಳು, ಪರ್ಮಿಟ್ ಶುಲ್ಕಗಳಿಂದ ವಿನಾಯ್ತಿ ಬೇಕಾಗಿದೆ. ಆದರೆ ಸರಕಾರ ಅವೇನನ್ನೂ ಮಾಡಿಲ್ಲ, ಬದಲಿಗೆ ಭಾರೀ ಹೊರೆಯನ್ನೇ ಹಾಕಿದೆ. ಹಲವು ರಾಜ್ಯಗಳಲ್ಲಿ ಜೂನ್ 1 ರಿಂದ ಸಾರಿಗೆ ಸೇವೆಗಳಿಗೆ ಅವಕಾಶ ನೀಡಿದ್ದರೂ, ದೈಹಿಕ ಅಂತರ ಮುಂತಾದ ಕ್ರಮಗಳಿಂದಾಗಿ ಆದಾಯಗಳು ಇನ್ನೂ ಕಡಿಮೆ ಮಟ್ಟದಲ್ಲೇ ಇರುವಾಗ ಈ ರೀತಿಯಲ್ಲಿ ಇಂಧನ ದರಗಳ ಏರಿಕೆ ಸಾರಿಗೆ ಉದ್ದಿಮೆಯನ್ನು ತೀವ್ರವಾಗಿ ಬಾಧಿಸುತ್ತದೆ.

ತಳಮಟ್ಟದ ವಾಸ್ತವತೆಗಳನ್ನು ಗಮನಿಸಿ ಈ ದರ ಏರಿಕೆಗಳನ್ನು ಹಿಂತೆಗೆದುಕೊಳ್ಳಬೇಕು ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆ ಬೆಲೆಗಳಿಗೆ ಅನುಗುಣವಾಗಿ ಅವನ್ನು ಇಳಿಸಬೇಕು ಎಂದು ಅಖಿಲ ಭಾರತ ರಸ್ತೆ ಸಾರಿಗೆ ಕಾರ್ಮಿಕರ ಒಕ್ಕೂಟ ಆಗ್ರಹಿಸಿದೆ.

ಜನಗಳ ಬಗ್ಗೆ ಈ ಮೋದಿ ಸರಕಾರದ ನಿರ್ಲಕ್ಷ್ಯ ಎಂತಹುದೆಂದರೆ ಜನಗಳು ಹಸಿವಿನಿಂದ ಸಾಯುತ್ತಿರುವಾಗ, ಬದುಕಲು ಅವರ ಬಳಿ ಹಣವಿಲ್ಲದಿರುವಾಗ, ತೆರಿಗೆಗಳನ್ನು ಆಕಾಶಕ್ಕೇರಿಸಿದೆ. ಇದು ಕ್ರೌರ್ಯ.

ನಮ್ಮ ಅರ್ಥವ್ಯವಸ್ಥೆ ಹಿಂಜರಿತದಲ್ಲಿದೆ. ಈಗ ಮಾಡಬೇಕಾದ್ದು ಜನಗಳ ಕೈಗಳಲ್ಲಿ ಹೆಚ್ಚು ಹಣ ಇಟ್ಟು ಬೇಡಿಕೆಯನ್ನು ಹೆಚ್ಚಿಸುವುದು. ಈ ರೀತಿ ಹೆಚ್ಚೆಚ್ಚು ತೆರಿಗೆ ಹಾಕುವುದು ಜನಗಳ ಖರೀದಿ ಶಕ್ತಿಯನ್ನು ಕುಗ್ಗಿಸುತ್ತದೆ, ನಮ್ಮ ಅರ್ಥವ್ಯವಸ್ಥೆಯನ್ನು ಇನ್ನಷ್ಟು ಧ್ವಂಸಗೊಳಸುತ್ತದೆ. ಈ ಏರಿಕೆಗಳನ್ನು ಹಿಂತೆಗೆದುಕೊಳ್ಳಿ. ಜನಗಳಿಗೆ ಹಣ ವರ್ಗಾಯಿಸಿ. –ಸೀತಾರಾಮ್ ಯೆಚುರಿ

ವಲಸೆ ಕಾರ್ಮಿಕರಿಗೆ ಬಹಳ ತಡವಾಗಿ ಬಂದಿದೆ ಸುಪ್ರೀಂ ಕೋರ್ಟ್ ಆದೇಶ–ಬೃಂದಾ ಕಾರಟ್

ಅವರ ಕಷ್ಟಗಳಿಗೆ, ಸಾಲಗಳಿಗೆ ಪರಿಹಾರವಾಗಿ ನಗದು ವರ್ಗಾವಣೆಯ ಕೋರ್ಟ್ ಆದೇಶವೇಕಿಲ್ಲ?

ದೇಶದ ಸರ್ವೋಚ್ಚ ನ್ಯಾಯಾಲಯ ಕೊನೆಗೂ ವಲಸೆ ಕಾರ್ಮಿಕರ ಬಿಕ್ಕಟ್ಟನ್ನು ಎತ್ತಿಕೊಂಡು ವಿಚಾರಣೆ ನಡೆಸಿದೆ, ಜೂನ್ 9 ರಂದು 38 ಪುಟಗಳ ಒಂದು ಆದೇಶವನ್ನೂ ಹೊರಡಿಸಿ ಇನ್ನು 15 ದಿನಗಳೊಳಗೆ ಅಲ್ಲಲ್ಲಿ ಸಿಲುಕಿಕೊಂಡಿರುವ ವಲಸೆ ಕಾರ್ಮಿಕರನ್ನು ಅವರವರ ಮನೆಗಳಿಗೆ ತಲುಪಿಸಬೇಕು ಎಂದು ಕೇಂದ್ರ ಹಾಗೂ ರಾಜ್ಯ ಸರಕಾರಗಳಿಗೆ ಹೇಳಿದೆ. ಇದಕ್ಕಾಗಿ ಮುಂದಿನ 24 ಗಂಟೆಗಳೊಳಗೆ 171 ಹೆಚ್ಚುವರಿ ಶ್ರಮಿಕ ರೈಲುಗಳನ್ನು ರಾಜ್ಯಗಳಿಗೆ ಒದಗಿಸಬೇಕು ಎಂದು ರೈಲ್ವೆ ಇಲಾಖೆಗೂ ಅದು ಆದೇಶ ನೀಡಿದೆ.

ಇದು ಬಹಳ ತಡವಾಗಿ ಬಂದಿರುವ ಹೆಚ್ಚೇನೂ ಮಾಡದ ಒಂದು ಆದೇಶ ಎಂದು ಸಿಪಿಐ(ಎಂ)ನ ಹಿರಿಯ ಮುಖಂಡರಾದ ಬೃಂದಾ ಕಾರಟ್ ಪ್ರತಿಕ್ರಯಿಸಿದ್ದಾರೆ. ವಲಸೆ ಕಾರ್ಮಿಕರು, ಗರ್ಭಿಣಿ ಮಹಿಳೆಯರು, ಮಕ್ಕಳು ಮನೆಗೆ ಮರಳಲು ರಸ್ತೆಗಳಲ್ಲಿ ನಡೆದು ಹೋಗುತ್ತಿದ್ದಾಗ ಸುಪ್ರಿಂ ಕೋರ್ಟ್ ಎಲ್ಲಿತ್ತು, ಅದು ಈ ಹಿಂದೆ ಈ ಪ್ರಶ್ನೆಯನ್ನು ವಿಚಾರಣೆಗೆ ಎತ್ತಿಕೊಳ್ಳಲು ಕೂಡ ನಿರಾಕರಿಸಿತ್ತು, ಬಹಳ ದೂರದ ದಿನಾಂಕಗಳನ್ನು ಕೊಟ್ಟಿತ್ತು. ಕೇಂದ್ರ ಸರಕಾರ ಹೇಳಿದ್ದನ್ನೆಲ್ಲ ಒಪ್ಪಿಕೊಂಡಿತ್ತು. ಕೋಟ್ಯಂತರ ಕಾರ್ಮಿಕರು ಸಾಲ–ಸೋಲ ಮಾಡಿ, ನೂರಾರು ಮೈಲಿಗಳಷ್ಟು ನಡೆದು ಕಷ್ಟಪಟ್ಟು ಹೇಗೋ ತಮ್ಮ ಮನೆಗಳಿಗೆ ಈಗಾಗಲೇ ತಲುಪಿದ್ದಾರೆ. ಅವರ ಕಷ್ಟ, ಸಾಲಗಳಿಗೆ ಪರಿಹಾರ ಯಾರು ಕೊಡುತ್ತಾರೆ? ನಗದು ವರ್ಗಾವಣೆಯ ಮೂಲಕ ಅವರಿಗೆ ಪರಿಹಾರ ಒದಗಿಸುವ ಆದೇಶವನ್ನು ಸುಪ್ರಿಂ ಕೋರ್ಟ್ ಕೊಡುತ್ತದೆಯೇ? ಇದೀಗ ಅವರಿಗೆ ಅಗತ್ಯವಾಗಿರುವಂತದ್ದು, ಎಂದು ಬೃಂದಾ ಕಾರಟ್ ಹೇಳಿದ್ದಾರೆ.

ದೇಶಾದ್ಯಂತ ಲಕ್ಷಾಂತರ ಜನಗಳಿಂದ ಮೂರು ರೈತ–ವಿರೋಧಿ ಸುಗ್ರೀವಾಜ್ಞೆಗಳ ಭೂತದಹನ

"ಕೃಷಿಯ ಕಂಪನೀಕರಣದ, ಕಾರ್ಮಿಕ ಕಾನೂನುಗಳ ರದ್ಧತಿಯ ಪಿತೂರಿಯ ವಿರುದ್ಧ ಎಚ್ಚರಿಕೆ"

ನರೇಂದ್ರ ಮೋದಿ ಸರಕಾರ ತಂದಿರುವ ಕೃಷಿಗೆ ಸಂಬಂಧಪಟ್ಟ ಮೂರು ಸುಗ್ರಿವಾಜ್ಞೆಗಳ ಪ್ರತಿಗಳನ್ನು ಸುಡುವ ಮೂಲಕ ಲಕ್ಷಾಂತರ ರೈತರು ಮತ್ತು ಕಾರ್ಮಿಕರು ದೇಶಾದ್ಯಂತ ಭಾರತೀಯ ಕೃಷಿಯ ಕಾರ್ಪೊರೇಟೀಕರಣದ ವಿರುದ್ಧ ಬೃಹತ್ ಪ್ರಮಾಣದಲ್ಲಿ ತಮ್ಮ ಆಕ್ರೋಶವನ್ನು ವ್ಯಕ್ತ ಮಾಡಿದರು ಎಂದು ಅಖಿಲ ಭಾರತ ಕಿಸಾನ್ ಸಭಾ ಹೇಳಿದೆ. ಕರ್ನಾಟಕವೂ ಸೇರಿದಂತೆ 21 ರಾಜ್ಯಗಳಲ್ಲಿ ರೈತರು, ಕೃಷಿಕೂಲಿಕಾರರು, ಕಾರ್ಮಿಕರು ಮತ್ತು ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿ ಅತ್ಯುತ್ಸಾಹದಿಂದ ಬೀದಿಗೆ ಬಂದು ದೈಹಿಕ ಅಂತರವನ್ನು ಕಾಯ್ದುಕೊಳ್ಳುತ್ತಲೇ ತಮ್ಮ ತೀವ್ರ ವಿರೋಧವನ್ನು ದಾಖಲಿಸಿದರು. ನವದೆಹಲಿಯಲ್ಲಿ ಎಐಕೆಎಸ್ ಮತ್ತು ಎಐಎಡಬ್ಲ್ಯುಯು ಕೇಂದ್ರಗಳಲ್ಲಿ ಸುಗ್ರೀವಾಜ್ಞೆಗಳ ಪ್ರತಿಗಳನ್ನು ಸುಡಲಾಯಿತು. ಎಐಕೆಎಸ್ ಪ್ರಧಾನ ಕಾರ್ಯದರ್ಶಿ ಮತ್ತಿತರ ಮುಖಂಡರು ಇದರಲ್ಲಿ ಭಾಗವಹಿಸಿದರು. ಕೇರಳ, ಬಂಗಾಲ ಮತ್ತು ತ್ರಿಪುರಾದಲ್ಲಿ ಕೇಂದ್ರ ಸರಕಾರದ ಕಚೇರಿಗಳ ಮುಂದೆ ಮತ್ತು ಹಲವಾರು ಹಳ್ಳಿಗಳಲ್ಲೂ ಪ್ರತಿಭಟನೆ ನಡೆಯಿತು. ತಮಿಳುನಾಡಿನಲ್ಲಿ 96 ಕೇಂದ್ರಗಳಲ್ಲಿ ಪ್ರತಿಭಟನೆ ನಡೆಯಿತು, 2839 ಮಂದಿಯನ್ನು ಪೋಲೀಸರು ಬಂಧಿಸಿದರು ಎಂದು ಎಐಕೆಎಸ್ ಪತ್ರಿಕಾ ಹೇಳಿಕೆ ತಿಳಿಸಿದೆ.

ಈ ಪ್ರತಿಭಟನೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಜನಗಳು ಭಾಗವಹಿಸಿರುವುದು ನರೇಂದ್ರ ಮೋದಿ ಮತ್ತು ಬಿಜೆಪಿಗೆ ಒಂದು ಸ್ಪಷ್ಟ ಎಚ್ಚರಿಕೆ, ಕೃಷಿಯ ಕಂಪನೀಕರಣ ಮತ್ತು ಕಾರ್ಮಿಕ ಹಕ್ಕುಗಳ ರದ್ದತಿಯ ಪಿತೂರಿಯನ್ನು ರೈತರು ಮತ್ತು ಕಾರ್ಮಿಕರು ಸಮರಧೀರ ಐಕ್ಯ ಹೋರಾಟಗಳ ಮೂಲಕ ಎದುರಿಸುತ್ತಾರೆ ಮತ್ತು ದೃಢ ಪ್ರತಿರೋಧವೊಡ್ಡಿ ಅದನ್ನು ಸೋಲಿಸುತ್ತಾರೆ ಎಂಬ ಎಚ್ಚರಿಕೆಯನ್ನು ಕೊಟ್ಟಿದ್ದಾರೆ ಎಂದು ಅಖಿಲ ಭಾರತ ಕಿಸಾನ್ ಸಭಾ ಹೇಳಿದೆ.

ಸಂಪಾದಕೀಯ

ದಲಿತರಿಗೆ ದೇವಸ್ಥಾನದ ದ್ವಾರಬಾಗಿಲು ತೆರೆಯುವುದಿಲ್ಲವೆ?

ಕೊನೆಗೂ ಕೊರೊನಾ ಭಯದಿಂದ ಮುಚ್ಚಲಾದ ದೇವಸ್ಥಾನಗಳು ಒಂದೊಂದಾಗಿ ಬಾಗಿಲು ತೆರೆಯಲಾರಂಭಿಸಿವೆ. ಗರ್ಭಗುಡಿಯ ನಾಲ್ಕು ಗೋಡೆಗಳ ನಡುವೆ ದೇವತಾ ಶಕ್ತಿಯನ್ನು ಬಂಧಿಸಿಟ್ಟಿದ್ದೇ ಕೊರೊನೊ ಸೋಂಕಿತರ ಸಂಖ್ಯೆ ನಿಯಂತ್ರಣ ಮೀರಿ ವ್ಯಾಪಿಸುತ್ತಿರುವುದಕ್ಕೆ ಕಾರಣ ಎಂದು ನಿರುದ್ಯೋಗಿಗಳಾದ ಕೆಲವು ಜ್ಯೋತಿಷ್ಯರು ನೀಡಿದ ಸಂದೇಶವನ್ನು ನಮ್ಮ ಆಳರಸರು ಒಪ್ಪಿಕೊಂಡು ದೇವಸ್ಥಾನಗಳ ಬಾಗಿಲುಗಳನ್ನು ತೆರೆಯಲು ಆದೇಶ ನೀಡಿದರು ಎನ್ನಲಾಗುತ್ತದೆ. ಎರಡು ಮೂರು ತಿಂಗಳುಗಳಿಂದ ಮುಚ್ಚಲ್ಪಟ್ಟಿದ್ದ ದೇವರ ಅಂಗಡಿ ಬಾಗಿಲುಗಳು ಸರಿಯುತ್ತಿದ್ದಂತೆ ಸೋಂಕಿತರ ಸಂಖ್ಯೆ ಗಣನೀಯವಾಗಿ ಇಳಿಮುಖವಾಗುತ್ತಿದೆ ಎಂಬ 'ಮನ್ ಕಿ ಬಾತ್' ನಿಷ್ಠಾವಂತ ಚಾನಲ್‌ಗಳಲ್ಲಿ ಮತ್ತೆ ಮತ್ತೆ ಪ್ರಸಾರಗೊಳ್ಳತೊಡಗಿದೆ.

ಲಾಕ್‌ಡೌನ್ ಕಾರಣದಿಂದಾಗಿ ದೇವಸ್ಥಾನ, ಮಸೀದಿ, ಚರ್ಚ್, ಗುರುದ್ವಾರಗಳ ಬಾಗಿಲುಗಳನ್ನು ಮುಚ್ಚಲಾಗಿತ್ತು. ಲಾಕ್‌ಡೌನ್ ಸಡಿಲುಗೊಳಿಸಲಾದ ಹಿನ್ನೆಲೆಯಲ್ಲಿ ಈ ಪ್ರಾರ್ಥನಾ ಮಂದಿರಗಳ ಬಾಗಿಲುಗಳನ್ನು ತೆರೆಯಲಾಯಿತು. ಆದರೆ ಈ ನಮ್ಮ ದೇಶದ ದಲಿತರಿಗೆ ಮಾತ್ರ ದೇವಸ್ಥಾನಗಳ ಬಾಗಿಲುಗಳು ತೆರೆದಿಲ್ಲ. ಶತಮಾನಗಳಿಂದ ಅವರು ಈ ತಾರತಮ್ಯವನ್ನು ಅನುಭವಿಸುತ್ತಾ ಅವಮಾನಕ್ಕೀಡಾಗುತ್ತಾ ಬಂದಿರುತ್ತಾರೆ.

ಇದೇ ಜೂನ್ ಒಂದರಂದು, ಉತ್ತರ ಪ್ರದೇಶದ ಅಮ್ರೋಹ ಜಿಲ್ಲೆಯ ದೊಮ್ಖೇರ್ ಎಂಬ ಗ್ರಾಮದಲ್ಲಿ 17 ವರ್ಷದ ದಲಿತ ಬಾಲಕನಿಗೆ ಅಲ್ಲಿನ ದೇವಸ್ಥಾನ ಪ್ರವೇಶಕ್ಕೆ ಅವಕಾಶ ನೀಡದ ನಾಲ್ಕು ಮಂದಿ ಸವರ್ಣೀಯರು ಆತನನ್ನು ಗುಂಡಿಕ್ಕಿ ಕೊಂದ ಘಟನೆ ವರದಿಯಾಗಿದೆ. ಮೃತ ಬಾಲಕನನ್ನು ವಿಕಾಸ್ ಜಾಟವ್ ಎಂದು ಗುರುತಿಸಲಾಗಿದೆ. ಆತ ದೇವಸ್ಥಾನ ಪ್ರವೇಶಿಸಲು ಯತ್ನಿಸುತ್ತಿದ್ದಂತೆಯೇ ಆ ನಾಲ್ಕು ಜನ ಮೇಲ್ಜಾತಿಗೆ ಸೇರಿದ ಹೋರಂ ಚೌಹಾಣ್, ಭೂಷಣ್, ಜನ್ವೀರ್ ಮತ್ತು ಲಾಲಾ ಚೌಹಾಣ್ ಆತನನ್ನು ತಡೆದಿದ್ದರು. ಇದಕ್ಕೆ ಬಾಲಕ ಆಕ್ಷೇಪ ವ್ಯಕ್ತಪಡಿಸಿ ಅವರೊಂದಿಗೆ ವಾದಕ್ಕಿಳಿದಿದ್ದ. ನಂತರ ಆತ ದೂರು ನೀಡಲು ಪೊಲೀಸ್ ಠಾಣೆಗೆ ತೆರಳಿದ್ದರೂ ಪೊಲೀಸರು ಆರೋಪಿಗಳ ವಿರುದ್ಧ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಅಂದು ರಾತ್ರಿ ಯುವಕ ತನ್ನ ಮನೆಯಲ್ಲಿ ಮಲಗಿದ್ದಾಗ ಆ ನಾಲ್ಕು ಜನ ಆರೋಪಿಗಳು ಆತನ ಮನೆಗೆ ನುಗ್ಗಿ ಆತನಿಗೆ ಗುಂಡಿಕ್ಕಿದ್ದಾರೆ. ರಕ್ತದ ಮಡುವಿನಲ್ಲಿ ಬಿದ್ದಿದ್ದ ಆತನನ್ನು ಆಸ್ಪತ್ರೆಗೆ ಸಾಗಿಸಲು ಯತ್ನಿಸಲಾಗಿತ್ತು. ಆದರೆ ಆಸ್ಪತ್ರೆ ತಲುಪುವ ಮುನ್ನವೇ ಆತ ಸಾವನ್ನಪ್ಪಿದ್ದ.

ದೇವಸ್ಥಾನದೊಳಗೆ ಪ್ರವೇಶಿಸಲು ಯತ್ನಿಸಿದ ಕ್ಷುಲ್ಲಕ ಕಾರಣಕ್ಕೆ ಉತ್ತರ ಪ್ರದೇಶದ ಆ ದಲಿತ ಯುವಕನನ್ನು ಕೊಂದು ಹಾಕಲಾಯಿತು. ಇಂತಹ ದಾರುಣ ಪ್ರಕರಣಗಳು ದೇಶದ ಉದ್ದಗಲಕ್ಕೂ ನಡೆಯುತ್ತಲೇ ಇವೆ. ಕರ್ನಾಟಕವೂ ಇದಕ್ಕೆ ಹೊರತಾಗಿಲ್ಲ. ಇದು ಕೊರೊನಾ ವೈರಸ್‌ಗಿಂತ ಭೀಕರವಾದದ್ದು. ಲಕ್ಷಾಂತರ ಜನರನ್ನು ಬಲಿತೆಗೆದುಕೊಂಡ ಈ ಭಯಂಕರ ಸಾಂಕ್ರಾಮಿಕ ರೋಗಕ್ಕೆ ಇವತ್ತಲ್ಲಾ ನಾಳೆಯಾದರೂ ಪರಿಹಾರ ಕಂಡುಕೊಳ್ಳಲು ಸಾಧ್ಯವಿದೆ. ಆದರೆ ಜಾತಿ ಅಸ್ಪೃಶ್ಯತೆಯ ಈ ಸೋಂಕು ನಿರ್ಮೂಲನೆಯಾಗುವುದು ಕಷ್ಟಸಾಧ್ಯ.

ದಲಿತರಾದರೂ ಅಸ್ಪೃಶ್ಯತೆಯನ್ನು ಆಚರಿಸಲಾಗುತ್ತಿರುವ ಧಾರ್ಮಿಕ ಕ್ಷೇತ್ರಗಳಿಗೆ ಯಾಕೆ ಹೋಗಬಯಸಬೇಕು ಎಂದು ಕೇಳುವವರಿದ್ದಾರೆ. 'ನೂರು ದೇವರುಗಳ ನೂಕಾಚೆ ದೂರ' ಎಂಬ ಕವಿ ಕುವೆಂಪು ವಾಣಿ ನಮಗೆ ದಾರಿದೀಪವಾಗಬೇಕು. ಗುಡಿ ಗುಂಡಾರಗಳಿಂದ ಎಲ್ಲರಿಗಿಂತ ಹೆಚ್ಚಾಗಿ ದಲಿತರೆಂದು ಪರಿಗಣಿಸಲ್ಪಟ್ಟವರು ದೂರ ಇರಲು ಸಾಧ್ಯವಾಗಬೇಕು. ಭಗವಂತ ಎಂಬ ಭೀತಿಯಿಂದ ದಲಿತರು ಹೊರಬರಬೇಕು. ದೇವಸ್ಥಾನಗಳಿಗೆ ಹೋಗುವುದು, ಹರಕೆ ಹೊರುವುದು, ಪ್ರಾಣಿಗಳನ್ನು ಬಲಿಕೊಡುವುದು, ಮಾಟಮಂತ್ರ ಮುಂತಾದ ಆಚರಣೆಗಳಿಗೆ ಶರಣಾಗುವುದು ಇತ್ಯಾದಿಗಳನ್ನು ಕೈಬಿಡಲು ಪ್ರಯತ್ನಿಸಬೇಕು. ಅದೇ ಸಂದರ್ಭದಲ್ಲಿ ದಲಿತರಿಗೆ ಅವರ ಜಾತಿಯ ಕಾರಣಕ್ಕಾಗಿ ದೇವಸ್ಥಾನ, ಕೆರೆ, ಬಾವಿ ಮೊದಲಾದ ಸ್ಥಳಗಳಿಗೆ ಪ್ರವೇಶ ನಿರಾಕರಿಸುವುದನ್ನು ವಿರೋಧಿಸಬೇಕು. ಇದನ್ನು ಒಂದು ಸಮತಾ ಸಮಾಜವನ್ನು ಬಯಸುವ ಎಲ್ಲರೂ ಒಟ್ಟಾಗಿ ಸಾಧಿಸಬೇಕಾಗಿದೆ. ಜಾತಿ ಅಸ್ಪೃಶ್ಯತೆ ಎಂಬ ಪಿಡುಗನ್ನು ನಾಶಮಾಡುವ ಪ್ರಯತ್ನಕ್ಕೆ ಸವರ್ಣೀಯರೂ ಸಹ ಕೈ ಜೋಡಿಸಬೇಕು. ದೇವಸ್ಥಾನ ಪ್ರವೇಶ ಬಯಸುವ ದಲಿತರಿಗೆ ಗ್ರಾಮಗಳಲ್ಲಿ ಸವರ್ಣೀಯರು ಬೆಂಬಲ ನೀಡಬೇಕು. ಅದು ಅವರ ಪ್ರಜಾಸತ್ತಾತ್ಮಕ ಹಕ್ಕು. ಪಂಕ್ತಿಭೇದ ಮಾಡಬಾರದು. ಮನೆಗಳಲ್ಲಿ, ದೇವಸ್ಥಾನಗಳಲ್ಲಿ ಯಾವ ಭೇದವನ್ನೂ ಮಾಡದೆ ಸಮಾನ ಪಂಕ್ತಿಯಲ್ಲಿ ಊಟ ಬಡಿಸುವುದಾಗಬೇಕು. ದೇವಸ್ತಾನ ಪ್ರವೇಶ ನಿರಾಕರಿಸುವುದು, ಪಂಕ್ತಿ ಭೇದ ಮಾಡುವುದು, ಶಿಕ್ಷಾರ್ಹ ಅಪರಾಧ. ಇದನ್ನು ಜಾರಿ ಮಾಡಲು ಸಾರ್ವಜನಿಕ ಒತ್ತಡ ಅಗತ್ಯ.

ಕೊರೊನಾ ಹಿನ್ನೆಲೆಯಲ್ಲಿ ಸಾಮಾಜಿಕ ಅಂತರ ಕಾಪಾಡಿಕೊಳ್ಳಬೇಕು ಎಂದು ಹೇಳಲಾಗುತ್ತದೆ. ಈ ಪದ ಪ್ರಯೋಗ ತಪ್ಪು. ಸಾಮಾಜಿಕ ಅಂತರ ಅಂದರೆ ಜಾತಿ ಜಾತಿಗಳ ನಡುವಿನ ಅಂತರ. ಇದು ಇರಬಾರದು. ಸಾಮಾಜಿಕ ಅಂತರ ಅಳಿಯಬೇಕು. ಮೇಲ್ಜಾತಿಯವರು, ಕೆಳಜಾತಿಯವರು ಎಂಬ ಅಂತರ ಇರಬಾರದು. ಕೊರೊನಾ ಹಿನ್ನೆಲೆಯಲ್ಲಿ ವ್ಯಕ್ತಿಯಿಂದ ವ್ಯಕ್ತಿಗೆ, ಪರಸ್ಪರ ಅಂತರ ಇರಬೇಕು ಎಂದು ಹೇಳುವುದು ಹೆಚ್ಚು ಸರಿ.

ಯಾರು ಬೇಕಾದರೂ ಕೃಷಿ ಭೂಮಿ ಹೊಂದಲು ನೀಡುವ ಅವಕಾಶ – ದೇಶ ದ್ರೋಹದ ಕೆಲಸ

ಕರ್ನಾಟಕ ಪ್ರಾಂತ ರೈತ ಸಂಘದ ಖಂಡನೆ

ನೆನ್ನೆ ದಿನ ಕರ್ನಾಟಕ ಸರಕಾರ ಸಚಿವ ಸಂಪುಟದಲ್ಲಿ ರಾಜ್ಯದ ಕೃಷಿ ಜಮೀನುಗಳನ್ನು ಯಾರು ಬೇಕಾದರೂ ಹೊಂದಲು ಅವಕಾಶ ನೀಡುವ ಉದ್ದೇಶದಿಂದ ಭೂ ಸುಧಾರಣಾ ಕಾಯ್ದೆ– 1961 ರ ಕಲಂ 79 (ಎ) ಮತ್ತು (ಬಿ) ಗಳನ್ನು ರದ್ದು ಪಡಿಸುವುದಾಗಿ ಘೋಷಿಸಿರುವುದು ರಾಜ್ಯವನ್ನು ಅಧೋಗತಿ ತಳ್ಳುವ ಮತ್ತು ಕಾರ್ಪೋರೇಟ್ ಕಂಪನಿಗಳ ವಶ ಮಾಡುವ ಗುಲಾಮಿತನದ ಹಾಗೂ ಶತಮೂರ್ಖತನದ ಪ್ರತೀಕವಾಗಿದೆ.

ಇದು ವ್ಯವಸಾಯದಲ್ಲಿ ತೊಡಗಿರುವ ಎಲ್ಲ ರೈತರು ಹಾಗೂ ಗೇಣಿದಾರರು, ಕೃಷಿಕೂಲಿಕಾರರು ಕಾರ್ಮಿಕರು, ಕಸುಬುದಾರರು, ಅವರನ್ನು ಆಧರಿಸಿದ ಸಣ್ಣ ವ್ಯಾಪಾರಿಗಳು, ಕೃಷಿ ವ್ಯಾಪಾರಿಗಳು, ಒಟ್ಟಾರೇ ಗ್ರಾಮೀಣ ಪ್ರದೇಶವನ್ನೇ ಮಸಣ ಮಾಡುವ ಮತ್ತು ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳನ್ನು ನಾಶ ಮಾಡುವ ಹಾಗೂ ರಾಜ್ಯವನ್ನು ಅತ್ಯಂತ ಗಂಭೀರವಾದ ಮತ್ತು ಆಳವಾದ ಸಂಕಟಕ್ಕೀಡು ಮಾಡುವ ದುಷ್ಕೃತ್ಯವಾಗಿದೆ.

ಇದು, ಕೃಷಿ ಭೂಮಿಯನ್ನು ಪಡೆಯುವ ಮೂಲಕ ಶತಶತಮಾನಗಳ ಅಮಾನವೀಯ ಜಾತಿ ತಾರತಮ್ಯ ಹಾಗೂ ಅಸ್ಪೃಶ್ಯಾಚರಣೆಯ ಶೋಷಣೆಯಿಂದ ಹೊರ ಬರಲು ಹಾಗೂ ಆ ಮೂಲಕ ಸ್ವತಂತ್ರ ಹಾಗೂ ಸ್ವಾವಲಂಬಿ ಹಾದಿ ಹಿಡಿಯಲು ತವಕಿಸುತ್ತಿರುವ ರಾಜ್ಯದ ಕೋಟ್ಯಾಂತರ ದಲಿತರು, ಮಹಿಳೆಯರು, ಹಿಂದುಳಿದ ಹಾಗೂ ಮುಂದುವರಿದ ಜಾತಿಗಳ ಗ್ರಾಮೀಣ ಬಡವರ ಆಶಯಗಳನ್ನು ಮಣ್ಣು ಪಾಲು ಮಾಡುತ್ತದೆ.

ಇದು ದೇಶವನ್ನು ಮತ್ತು ರಾಜ್ಯವನ್ನು ಕಾರ್ಪೋರೇಟ್ ಕಂಪನಿಗಳ ಕೈಗೆ ನೇರವಾಗಿ ಹಾಗೂ ಅತ್ಯಂತ ವೇಗವಾಗಿ ವರ್ಗಾಯಿಸುವ ಮತ್ತು ದೇಶದ ಹಾಗೂ ರಾಜ್ಯದ ಆಹಾರದ ಸ್ವಾವಲಂಬನೆಗೆ ಮತ್ತು ದೇಶದ ಸ್ವಾತಂತ್ರ್ಯ ವನ್ನು ಕಾರ್ಪೋರೇಟ್ ಕಂಪನಿಗಳಿಗೆ ಒತ್ತೆ ಇಡುವ ದೇಶ ದ್ರೋಹದ ಗುಲಾಮಿ ನಿರ್ಧಾರವಾಗಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಕಟುವಾಗಿ ವಿಮರ್ಶಿಸಿದೆ.

ದೇಶ ಹಾಗೂ ರಾಜ್ಯವನ್ನು ಕರೋನಾ – 19 ರ ಸಂಕಟದಿಂದ ಬಿಡುಗಡೆ ಮಾಡುವ ಕೆಲಸದಲ್ಲಿ ತನ್ನನ್ನು ತೊಡಗಿಸಿ ಕೊಳ್ಳುವ ಬದಲು, ಅವರನ್ನು ರೋಗದಿಂದ ಸಾಯಲು ಬಿಟ್ಟು, ಬಿಜೆಪಿ, ತನಗೆ ಜನತೆ ನೀಡಿರುವ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು, ಕಾರ್ಪೋರೇಟ್ ಕಂಪನಿಗಳ ಗುಲಾಮಿ ರಾಷ್ಟ್ರವಾಗಿ ಪರಿವರ್ತಿಸಲು ಕ್ರಮವಹಿಸುತ್ತಿದೆ.

ಅದಾಗಲೇ, ಜೂನ್ 15 ರಂದು ದೇಶ ವಿರೋಧಿ ಮೂರು ಸುಗ್ರೀವಾಜ್ಞೆ ಗಳನ್ನು ಕೇಂದ್ರ ಸರಕಾರ ಹೊರಡಿಸಿ,ಮುಂಗಡ ವ್ಯಾಪಾರ ಮತ್ತು ಕಂಪನಿಗಳ ಗುತ್ತಿಗೆ ಬೇಸಾಯಕ್ಕೆ ನೆರವಾಗುವ ಮೂಲಕ ಕೃಷಿ ಹಾಗೂ ಕೈಗಾರಿಕೆಗಳನ್ನು ಮತ್ತು ದೇಶವನ್ನು ಕಾರ್ಪೋರೇಟ್ ಕಂಪನಿಗಳ ಕೈಗೆ ವರ್ಗಾಯಿಸುವ ನಿರ್ಧಾರವನ್ನು ಕೈಗೊಂಡಿದೆ.

ಅದಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ, ಕಾರ್ಪೋರೇಟ್ ಕಂಪನಿಗಳಿಗೆ ಜಮೀನುಗಳನ್ನು, ನೇರವಾಗಿ ಒದಗಿಸುವ ಹಾಗೂ ಆ ಮೂಲಕ ರಾಜ್ಯವನ್ನು ಹಾಳುಗೆಡಹುವ ಕ್ರಮಕ್ಕೆ ರಾಜ್ಯ ದ ಈ ಘನ ಸರಕಾರ ಈ ಮೂಲಕ ಮುಂದಾಗುತ್ತಿದೆ.

ಇದು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಕಾರ್ಪೋರೇಟ್ ಕಂಪನಿಗಳ ಸೇವೆಯನ್ನು ಪೈಪೋಟಿಯಲ್ಲಿ ಕೈಗೊಳ್ಳುತ್ತಿರುವುದನ್ನು ಬಹಿರಂಗ ಪಡಿಸುತ್ತಿದೆ.

ಸ್ವಾತಂತ್ರ ಕಾಲದಿಂದಲೇ, ಉಳುವವನೇ ಭೂಮಿ ಒಡೆಯನಾಗಬೇಕೆಂಬ ಹಕ್ಕೊತ್ತಾಯ ಮತ್ತು ಕ್ಯೋಟ್ಯಾಂತರ ಗ್ರಾಮೀಣ ಜನತೆಯ ಅಪಾರ ತ್ಯಾಗ ಬಲಿದಾನದ ವೀರ ಗಾಥೆಗೆ, ಅದರ ಆಶಯಕ್ಕೆ ಈ ನಿರ್ಧಾರ ಎಳ್ಳು ನೀರು ಬಿಡಲಿದೆ. ಅದೇ ರೀತಿ, ಅಂತಹ ಬೃಹತ್ ಹೋರಾಟದ ಕಾರಣದಿಂದ ಮತ್ತು ದೇಶದ ಸಮಗ್ರ ಅಭಿವೃದ್ಧಿಯ ಕಾರಣದಿಂದ ಪಾಳೆಯಗಾರಿ ವಿರೋಧಿಯಾದ ಭೂಸುಧಾರಣೆಯ ಕಾಯ್ದೆಯು ಜಾರಿಗೆ ತರಲಾಗಿತ್ತು. ಮಿತಿಗಳನ್ನು ಹೊಂದಿದ್ದರೂ, ಕರ್ನಾಟಕ ಭೂ ಸುಧಾರಣಾ ಕಾಯ್ದೆ – 1961 ರ ಮೂಲ ಉದ್ದೇಶಗಳನ್ನೇ ಸರಕಾರದ ಈ ನಿಲುಮೆ ಬುಡ ಮೇಲು ಮಾಡುತ್ತದೆ.

ಇದರ ಕಲಂ 79(ಎ) ಮತ್ತು(ಬಿ) ಗಳು ಕೃಷಿ ಭೂಮಿಯನ್ನು ಹೊಂದಲು ವ್ಯವಸಾಯದಲ್ಲಿ ತೊಡಗಿರದ ಯಾವುದೇ ವ್ಯಕ್ತಿಗಳನ್ನು, ಸಂಸ್ಥೆಗಳನ್ನು ಮತ್ತು ಕಂಪನಿಗಳನ್ನು ನಿಷೇಧಿಸಿತ್ತು. ಆ ಮೂಲಕ ಒಂದು ಕಡೆ, ಕೃಷಿಯಲ್ಲಿ ತೊಡಗಿರುವವರ ಉದ್ಯೋಗ ಭದ್ರತೆ, ರಾಜ್ಯದ ಆಹಾರದ ಸ್ವಾವಲಂಬನೆ, ಕೃಷಿ ಆಧಾರಿತ ಕೈಗಾರಿಕೆಗಳಿಗೆ ಕಚ್ಚಾ ಮಾಲು ಒದಗಿಸುವ ರಾಜ್ಯದ ಅಭಿವೃದ್ಧಿಯ ಘನ ಉದ್ದೇಶವನ್ನು ಹೊಂದ್ದಿತು. ಇನ್ನೊಂದು ಕಡೆ, ಅದು, ಅರೇ ಪಾಳೆಯಗಾರಿ ದೌರ್ಜನ್ಯಕ್ಕೊಳಗಾದವರ, ಜಾತಿ ಹಾಗೂ ಲಿಂಗ ತಾರತಮ್ಯ ಮತ್ತು ಅಸ್ಪೃಶ್ಯಾಚರಣೆಯ ವಿಮೋಚನೆಯ ನಿರೀಕ್ಷೆಗಳ ಆಶಯಗಳಾಗಿತ್ತು.

ಸದರಿ ಕರ್ನಾಟಕ ಭೂ ಸುಧಾರಣಾ ಕಾಯ್ದೆ – 1961 ರ ಸದರಿ ಕಲಂಗಳನ್ನು ಹಿಂದಿನ ಶ್ರೀ ಸಿದ್ದರಾಮಯ್ಯನವರ ಕಾಂಗ್ರೆಸ್ ನೇತ್ರತ್ವದ ಸರಕಾರ ವಾರ್ಷಿಕ 20 ಲಕ್ಷ ರೂ ಕೃಷಿಯೇತರ ಆದಾಯ ಹೊಂದಿರುವ ಯಾರು ಬೇಕಾದರೂ ಕೃಷಿ ಭೂಮಿ ಹೊಂದಲು ಅವಕಾಶ ನೀಡುವಂತೆ ತಿದ್ದುಪಡಿ ಮಾಡಿ ದುರ್ಬಲ ಗೊಳಿಸಿತ್ತು. ಇದೀಗ ಬಿಜೆಪಿಯ ಈ ರಾಜ್ಯ ಸರಕಾರ ಈ ಕಲಂಗಳನ್ನೇ ತೆಗೆದು ಹಾಕಲು ಮುಂದಾಗುತ್ತಿದೆ ಈ ನಿರ್ಧಾರವು, ಅದಾಗಲೇ ಕಾನೂನು ಬಾಹಿರವಾಗಿ, ಕಪ್ಪು ಹಣ ಹೊಂದಿದ ಖದೀಮರು, ದೌರ್ಜನ್ಯಗಳ ಮೂಲಕ ರೈತರಿಂದ ಬಲವಂತವಾಗಿ, ವಶಪಡಿಸಿಟ್ಟುಕೊಂಡ ಸಾವಿರಾರು ಎಕರೆ ಜಮೀನುಗಳನ್ನು, ರೈತ ವಿರೋಧಿಯಾಗಿ ಕಾನೂನು ಬದ್ಧಗೊಳಿಸಲಿದೆ.

ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಸಮಿತಿ ಇಂತಹ ದೇಶದ್ರೋಹಿ ನಿರ್ಧಾರವನ್ನು ಬಲವಾಗಿ ಪ್ರತಿರೋಧಿಸುತ್ತದೆ. ಕೂಡಲೇ ಅಂತಹ ದುಷ್ಟ ನಿರ್ಧಾರವನ್ನು ಕೈ ಬಿಡುವಂತೆ ಒತ್ತಾಯಿಸುತ್ತದೆ. ಅದೇ ರೀತಿ, ಇಂತಹ ದುಷ್ಟ ಯೋಜನೆಗಳನ್ನು ಗ್ರಾಮೀಣ ಹಾಗೂ ನಗರದ ಜನತೆ ಒಟ್ಟಾಗಿ ಪ್ರತಿರೋಧಿಸಿ, ಹಿಮ್ಮೆಟ್ಟಿಸುವಂತೆ ಕರೆ ನೀಡುತ್ತದೆ.

ಜಿ.ಸಿ. ಬಯ್ಯಾರೆಡ್ಡಿ ಅಧ್ಯಕ್ಷರು,
ಯು. ಬಸವರಾಜ ಕಾರ್ಯದರ್ಶಿ

ಗ್ರಾ.ಪಂ. ನೌಕರರ ಬೇಡಿಕೆಗಳ ಈಡೇರಿಕೆಗೆ ಹಾಸನ ಜಿಲ್ಲಾ ಪಂಚಾಯತ್ ಮುಂದೆ ಧರಣ



ಕರ್ನಾಟಕ ಸರ್ಕಾರ ಕಳೆದ 2 ವರ್ಷಗಳಿಂದ ಗ್ರಾಮ ಪಂಚಾಯಿತಿಯ ನೌಕರರ ವೇತನ ಪಾವತಿಗೆ ಬೇಕಾಗಿರುವ ಹಣವನ್ನು ಸರ್ಕಾರವೇ ಭರಿಸುವ ತೀರ್ಮಾನ ಮಾಡಿರುವುದು ಸ್ವಾಗಥಾರ್ಹ ವಿಷಯವಾಗಿದೆ. ರಾಜ್ಯದ 6025 ಗ್ರಾಮ ಪಂಚಾಯಿತಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ 65000 ನೌಕರರಿಗೆ ರೂ 900 ಕೋಟಿ ಹಣ ಬೇಕಾಗಿರುತ್ತದೆ ಎಂದು ಅಂದಾಜಿಸಲಾಗಿದೆ. 900 ಕೋಟಿ ಹಣದಲ್ಲಿ 518 ಕೋಟಿ ಮಾತ್ರ ಹಣಕಾಸು ಇಲಾಖೆ ಮಂಜೂರಾತಿ ನೀಡಿದೆ. ಕಳೆದ 2 ವರ್ಷಗಳಿಂದ ನೌಕರರ ವೇತನ ಬಾಕಿ ಉಳಿದಿದೆ 3 ತಿಂಗಳಿಗೊಮ್ಮೆ ಬಿಡುಗಡೆಯಾದ ಕಂತಿನ ಹಣದಲ್ಲಿ 2 ತಿಂಗಳು ವೇತನಕ್ಕಾಗಿ ಮಾತ್ರ ಹಣ ಸಾಕಾಗುತ್ತದೆ. 2 ವರ್ಷಗಳಿಂದ ನೌಕರರಿಗೆ 8 ತಿಂಗಳ ವೇತನ ಬಾಕಿಯಾಗಿದೆ. ಸಮಯಕ್ಕೆ ಸರಿಯಾಗಿ ವೇತನ ಸಿಗದೆ ಬಾದಾಮಿ ತಾಲ್ಲೋಕಿನಲ್ಲಿ ಒಬ್ಬರು ಚಿಂತಾಮಣಿ ತಾಲ್ಲೋಕಿನಲ್ಲಿ ಒಬ್ಬರು ಗ್ರಾಮ ಪಂಚಾಯಿತಿ ನೌಕರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ವಿಷಯವನ್ನು ತಮ್ಮ ಗಮನಕ್ಕೆ ಈಗಾಗಲೇ ತರಲಾಗಿ ತುರ್ತಾಗಿ ಸಭೆ ನಡೆಸಿ 14ನೇ ಹಣಕಾಸು ಆಯೋಗದ 10% ಆಡಳಿತ ವೆಚ್ಚದ ಹಣವನ್ನು ವೇತನಕ್ಕೆ ಬಳಸಿಕೊಳ್ಳಲು ಆದೇಶ ಹೊರಡಿಸಿದ್ದೀರಿ. ಆದರೆ ಬಹುತೇಕ ಗ್ರಾಮ ಪಂಚಾಯಿತಿಗಳಲ್ಲಿ ನೌಕರರಿಗೆ ವೇತನ ಪಾವತಿ ಮಾಡಿಲ್ಲ. ಬಾಕಿ ಇರುವ ಪಂಚಾಯಿತಿಗಳಲ್ಲಿ ಕೂಡಲೇ ಹಣ ಪಾವತಿಸುವಂತೆ ಸೂಕ್ತ ಮಾರ್ಗದರ್ಶನ ನೀಡಬೇಕೆಂದು ಒತ್ತಾಯಿಸುತ್ತಿದ್ದೇವೆ.

20–21 ನೇ ಸಾಲಿನಲ್ಲಿ ವೇತನಕ್ಕೆ ಹಣ ಕೊರತೆ ಇರುವುದನ್ನು ತಾವುಗಳು ಗಮನಿಸಿ ದಿನಾಂಕ: 8.05.2020 ರಂದು ತಾವು ಇಬ್ಬರು ಪ್ರಧಾನ ಕಾರ್ಯದರ್ಶಿಗಳು ಚರ್ಚಿಸಿದಂತೆ 15ನೇ ಹಣಕಾಸು ಯೋಜನೆಯ ಆಡಳಿತ ವೆಚ್ಚದಲ್ಲಿ ಮನರೇಗಾ, ತೆರಿಗೆ ಸಂಗ್ರಹ ಇತ್ಯಾದಿ ಬಾಬ್ತುಗಳಲ್ಲಿ ನೌಕರರಿಗೆ ವೇತನ ನೀಡಲು ಚರ್ಚಿಸಲಾಗಿದೆ. ನೌಕರರಿಗೆ ನೀಡುವ ವೇತನವನ್ನು ಸಿಬ್ಬಂದಿ ಖಾತೆಗೆ ಸರ್ಕಾರವೇ ನೇರವಾಗಿ ಪಾವತಿಸಬೇಕೆಂದು ಸಿಬ್ಬಂದಿಗೆ ಪ್ರತಿ ತಿಂಗಳು ತಿಂಗಳು ವೇತನ ಪಾವತಿಯಾಗುವಂತೆ ಮಾಡಬೇಕಿದೆ. ಆದರೆ ಬೇರೆ ಬೇರೆ ನೆಪಗಳನ್ನು ಒಡ್ಡಿ ಇನ್ನೂ 15 ಸಾವಿರ ಸಿಬ್ಬಂದಿಗಳನ್ನು ಇ.ಎಫ್.ಎಂ.ಎಸ್.ಗೆ ಸೇರಿಸದೆ ಇರುವುದು ತೀವ್ರ ತೊಂದರೆಯಾಗಿದೆ. ಇ.ಫ್.ಎಂ.ಎಸ್.ಗೆ ಸೇರಿಸಲು ಸೂಕ್ತ ಕ್ರಮ ವಹಿಸಬೇಕೆಂದು ಒತ್ತಾಯಿಸುತ್ತಿದ್ದೇವೆ.

ಗ್ರಾ.ಪಂ ನೌಕರರ ಅನುಮೋದನೆಗೆ ಸರ್ಕಾರ ದಿನಾಂಕ: 23.07.2019ರಂದು ಆದೇಶ ಹೊರಡಿಸಿದೆ. ಇಲ್ಲಿಯವರೆಗೆ ಹಲವಾರು ಜಿಲ್ಲಾ ಪಂಚಾಯಿತಿಗಳಲ್ಲಿ ಆದೇಶ ಜಾರಿಯಲ್ಲಿ ಇರುವುದಿಲ್ಲ ತೆರಿಗೆ ಸಂಗ್ರಹದ 40ರಷ್ಟು ಹಣದಲ್ಲಿ ವೇತನ ನೀಡಬೇಕೆಂದು ಆದೇಶ ಹೊರಡಿಸಿದ್ದರು ಕೂಡಾ ಜಾರಿ ಮಾಡುತ್ತಿಲ್ಲ. ಆದ್ದರಿಂದ ಜಿಲ್ಲಾ ಪಂಚಾಯಿತಿಯ ಮುಂದೆ ಪ್ರತಿಭಟನೆ ನಡೆಸುವ ಮುಖಾಂತರ ಈ ಕೆಳಕಾಣಿಸಿರುವ ಬೇಡಿಕೆಗಳನ್ನು ಈಡೇರಿಸಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇವೆ.

ಬೇಡಿಕೆಗಳು

1. ಎಲ್ಲಾ ಸಿಬ್ಬಂದಿಗಳ ವೇತನಕ್ಕಾಗಿ ಕೊರತೆ ಇರುವ 382 ಕೋಟಿ ಹಣವನ್ನು 2020–2021ನೇ ಸಾಲಿನ ಹಣದಲ್ಲಿ ಮಂಜೂರು ಮಾಡಿಸಬೇಕಾಗಿ ವಿನಂತಿ.
2. ಕರವಸೂಲಿಗಾರ ಮತ್ತು ಕಂಪ್ಯೂಟರ್ ಆಪರೇಟರ್ ಕೋಟ ಹುದ್ದೆಗೆ ಶೇ. 70% ನಿಂದ 100% ಕೋಟಾ ಹೆಚ್ಚಸಬೇಕು ಲೆಕ್ಕ ಸಹಾಯಕ ಹುದ್ದೆಗಳ ಕೋಟಾ 30% ನಿಂದ 50% ಹೆಚ್ಚಿಸಬೇಕು. ಕಂಪ್ಯೂಟರ್ ಆಪರೇಟರ್‌ಗಳಿಗೆ ಬಡ್ತಿ ನೀಡಲು ವೃಂದ ಮತ್ತು ನೇಮಕಾತಿಗಳಿಗೆ ತಿದ್ದುಪಡಿ ಮಾಡಬೇಕು.
3. ಎಲ್ಲಾ ಸಿಬ್ಬಂದಿಗಳಿಗೆ ನಿವೃತ್ತಿ ವೇತನ ಮಂಜೂರು ಮಾಡಬೇಕು. ವೈದ್ಯಕೀಯ ವೆಚ್ಚ ಸಿಗುವಂತಾಗಬೇಕು. 15 ತಿಂಗಳು ಗ್ರಾಚ್ಯುಟಿ ಹಣ ಕೊಡಲು ಅವಕಾಶವಿದ್ದರು ಕೂಡಾ ನೌಕರರಿಗೆ ಗ್ರಾಚ್ಯುಟಿ ಸಿಗುತ್ತಿಲ್ಲ ಅದಕ್ಕಾಗಿ ಹಣ ಒದಗಿಸಬೇಕು.
4. ಅನುಮೋದನೆ ಆಗದೇ ಉಳಿದ ಸ್ವಚ್ಚತಗಾರರಿಗೆ ಅನುಮೋದನೆ ನೀಡಲು ದಿನಾಂಕ: 23.07.2019ರ ಆದೇಶಕ್ಕೆ ಸೂಕ್ತ ತಿದ್ದುಪಡಿ ಮಾಡಬೇಕು.
5. ಕನಿಷ್ಟ ವೇತನ ಪಡೆಯುವ ಎಲ್ಲರಿಗೂ ಬಿ.ಪಿ.ಎಲ್ ಕಾರ್ಡು ಉಳಿಸಿಕೊಳ್ಳಲು ಮಂಜೂರಾತಿ ಮಿತಿ 1.20 ಲಕ್ಷದಿಂದ 2 ಲಕ್ಷಕ್ಕೆ ಹೆಚ್ಚಿಸಬೇಕು ಅದಕ್ಕಾಗಿ ಆಹಾರ ಇಲಾಖೆಗೆ ಪತ್ರ ಬರೆಯಬೇಕು.
6. ಈಗ ಪ್ರಕಟಿಸಲಾಗಿರುವ ಗ್ರಾ.ಪಂ. ನೌಕರರ ಸೇವಾ ನಿಯಾಮವಳಿ ಕರಡು ಅಧಿಸೂಚನೆಗೆ ಬಂದಿರುವ ತಿದ್ದಪಡಿಗಳನ್ನು ಪರಿಶೀಲಿಸಿ ಮತ್ತು ಸೇರಿಸಿ ತಕ್ಷಣ ಆಧಿಸೂಚನೆ ಹೊರಡಿಸಬೇಕು.

–ಧರ್ಮೇಶ್



ಪರಿಸರ ದಿನದ ಅಂಗವಾಗಿ ಡಿ.ವೈ.ಎಫ್.ಐ ನಿಂದ ಗಿಡಗಳ ವಿತರಣೆ

ಬಂಟ್ವಾಳ: ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಡಿ.ವೈ.ಎಫ್.ಐ ಬಂಟ್ವಾಳ ತಾಲೂಕು ಸಮಿತಿಯಿಂದ ಬಂಟ್ವಾಳ ಕೆಳಗಿನ ಮಂಡಾಡಿಯಲ್ಲಿ ಗಿಡಗಳ ವಿತರಣಾ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮವನ್ನುದ್ದೇಶಿಸಿ ಸಾಮಾಜಿಕ ಕಾರ್ಯಕರ್ತರಾದ ರಾಜ ಚೆಂಡ್ತಿಮಾರ್ ಮಾತನಾಡಿ ಪ್ರತಿಯೊಬ್ಬರೂ ತಮ್ಮ ಮನೆ ಮತ್ತು ಹಿತ್ತಲುಗಳಲ್ಲಿ ಮತ್ತು ಪರಿಸರದಲ್ಲಿ ಗಿಡಗಳನ್ನು ನೆಡುವ ಮೂಲಕ ಪ್ರಕೃತಿಯನ್ನು ಉಳಿಸಲು ಮುಂದಾಗಬೇಕೆಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಡಿ.ವೈ.ಎಫ್.ಐ ಬಂಟ್ವಾಳ ತಾಲೂಕು ಕಾರ್ಯದರ್ಶಿ ನ್ಯಾಯವಾದಿ ತುಳಸೀದಾಸ್ ವಿಟ್ಲ, ಉಪಾಧ್ಯಕ್ಷರಾದ ಸಾಧಿಕ್ ಬಂಟ್ವಾಳ, ದೇವದಾಸ್ ಕುಲಾಲ್,ಕಾರ್ಮಿಕ ಮುಖಂಡರಾದ ಉದಯ ಕುಮಾರ್ ಬಂಟ್ವಾಳ, ರಾಮಣ್ಣ ವಿಟ್ಲ,ಪ್ರಭಾಕರ ದೈವಗುಡ್ಡೆ ಮುಂತಾದವರು ಉಪಸ್ಥಿತರಿದ್ದರು. ಡಿ.ವೈ.ಎಫ್.ಐ ಬಂಟ್ವಾಳ ತಾಲೂಕು ಅಧ್ಯಕ್ಷರಾದ ಸುರೇಂದ್ರ ಕೋಟ್ಯಾನ್ ಆರಂಭದಲ್ಲಿ ಸ್ವಾಗತಿಸಿ ಕೊನೆಯಲ್ಲಿ ವಂದಿಸಿದರು. ಪರಿಸರದ ನಾಗರಿಕರಿಗೆ ಸಸಿಗಳನ್ನು ವಿತರಿಸಲಾಯಿತು.




ಆದಿವಾಸಿ ಬಂಧುಗಳಿಗೆ ಮೂಲಭೂತ ಸೌಕರ್ಯ ನೀಡಲು ಆಗ್ರಹ

ಸುಳ್ಕೇರಿ ಗ್ರಾಮದ ನೆಕ್ಕರೆಪಲ್ಕೆ ಎಂಬಲ್ಲಿ ಕಳೆದ ಹತ್ತಾರು ವರ್ಷಗಳಿಂದ ಸರ್ಕಾರಿ ಜಮೀನಿನಲ್ಲಿ ಕೃಷಿ ಮಾಡಿಕೊಂಡು ಕುಟುಂಬ ಸಮೇತ ವಾಸಿಸುತ್ತಿದ್ದ ಆದಿವಾಸಿ ಮಲೆಕುಡಿಯ ಕುಟುಂಬಗಳ ಜಮೀನನ್ನು ತೆರವುಗೊಳಿಸಿ ತಂತಿಬೇಲಿ ನಿರ್ಮಾಣ ಮಾಡಿರುವ ಬೆಳ್ತಂಗಡಿ ತಹಶೀಲ್ದಾರರ ಕ್ರಮ ಅತ್ಯಂತ ಅಮಾನವೀಯವಾದುದು ಮತ್ತು ಅಮಾನುಷವಾದುದು.

ಶತಮಾನಗಳಿಂದ ಕತ್ತಲ ಕಾಡಿನಲ್ಲಿ ಯಾವುದೇ ಮೂಲಭೂತ ಸೌಕರ್ಯಗಳಿಂದ ವಂಚಿತಗೊಂಡು ಜೀವನ ನಡೆಸುತ್ತಿದ್ದ ಕುಟುಂಬಗಳು ನಾಗರಿಕ ಸಮಾಜದೊಂದಿಗೆ ಜೀವನ ಕಟ್ಟಿಕೊಳ್ಳುವ ಉದ್ದೇಶದಿಂದ ಸುಳ್ಕೇರಿಯಲ್ಲಿರುವ ಸರ್ಕಾರಿ ಜಮೀನಿನಲ್ಲಿ ಕೃಷಿ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಈಗಲೂ ವಾಸಿಸುತ್ತಿರುವ ಕುಟುಂಬಗಳಿಗೆ ರಸ್ತೆ, ವಿದ್ಯುತ್ ಸೇರಿದಂತೆ ಕನಿಷ್ಠ ಮೂಲಭೂತ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕಾದ ತಹಶೀಲ್ದಾರರು ಕಾಡಿನ ಮಕ್ಕಳ ಮೇಲೆ ಸರ್ಕಾರಿ ಪ್ರಯೋಜಿತ ದೌರ್ಜನ್ಯ ನಡೆಸುವ ಮೂಲಕ ತಮ್ಮ ಸರ್ವಾಧಿಕಾರಿ ಧೋರಣೆಯನ್ನು ಸಾಭೀತು ಪಡೆಸಿದ್ದಾರೆ. ಒಂದು ಕಡೆ ತಾಲೂಕಿನಾದ್ಯಂತ ಸಾವಿರಾರು ಜನರು ಹತ್ತಾರು ಎಕರೆ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದರೂ ತಾಲೂಕು ಆಡಳಿತ ಮೌನಸಮ್ಮತಿ ಸೂಚಿಸುತ್ತಾ, ಈ ಮಣ್ಣಿನ ಮೂಲನಿವಾಸಿಗಳ ಮೇಲೆ ದೌರ್ಜನ್ಯ ನಡೆಸುವ ಸರ್ಕಾರದ ಕ್ರಮವನ್ನು ಸಹಿಸಲು ಸಾಧ್ಯವಿಲ್ಲ.

ಈ ಕುಟುಂಬಗಳು ಹತ್ತಾರು ವರ್ಷಗಳಿಂದ ಈ ಜಮೀನಿನಲ್ಲಿ ಮನೆ ಕಟ್ಟಿ ಕುಟುಂಬ ಸಮೇತ ವಾಸಿಸುತ್ತಿರುವುದಕ್ಕೆ ಸಾಕ್ಷಿಯಾಗಿ ಪಡಿತರ ಚೀಟಿ, ಆಧಾರ್ ಕಾರ್ಡ್, ಮತದಾರರ ಗುರುತು ಚೀಟಿಗಳು ಸಾಕ್ಷಿ ನುಡಿಯುತ್ತಿದೆ. ಈ ಕುಟುಂಬಗಳು ಈಗಾಗಲೇ ರಾಜ್ಯ ಸರ್ಕಾರದ ಮಹತ್ವಕಾಂಕ್ಷಿ ಯೋಜನೆಯಾದ 94ಸಿ ಅಡಿಯಲ್ಲಿ ಅರ್ಜಿ ಸಲ್ಲಿಸುವ ಜೊತೆಗೆ, ಉಳಿದ ಜಮೀನು ಮಂಜುರಾತಿಗಾಗಿ ಅಕ್ರಮ ಸಕ್ರಮ ಯೋಜನೆಯಡಿ ಅರ್ಜಿ ಸಲ್ಲಿಸಲಾಗಿದ್ದು ಜಮೀನಿನ ನಕ್ಷೆಯನ್ನು ಕೂಡ ಸಿದ್ದಪಡಿಸಲಾಗಿದೆ. ಆದರೂ ಕಂದಾಯ ಇಲಾಖೆ ಯಾವುದೋ ಮಹಾನ್ ಸಾಧನೆ ಮಾಡಲು ಹೊರಟು ಬಡಪಾಯಿಗಳು ಕೃಷಿ ಮಾಡಿಕೊಂಡಿದ್ದ ಜಮೀನಿಗೆ ಬೇಲಿ ಹಾಕಿ ದಿಗ್ಭಂಧನ ವಿಧಿಸಿರುವುದು ಸರಿಯಲ್ಲ. ಸುಳ್ಕೇರಿ ಗ್ರಾಮದ ಸರ್ವೆ.ನಂಬರ್ 65/1ಪಿ1 ರಲ್ಲಿ 602.61 ಎಕ್ರೆ ಸರ್ಕಾರಿ ಜಮೀನು ಇದ್ದು, ಎಲ್‌ಎನ್‌ಡಿ(3)ಸಿಆರ್127/06–07 ರಂತೆ ಕೊರಗ ಸಮುದಾಯದ ಜನಾಂಗದವರಿಗೆ 0.50 ಎಕ್ರೆ ಜಮೀನನ್ನು ಕಾದಿರಿಸಲಾಗಿದೆ. ಎಲ್‌ಎನ್‌ಡಿ(1ಬಿ)ಪಿಡಿಆರ್195/10–11 ರಂತೆ 190 ಎಕ್ರೆ ಜಮೀನನ್ನು ಗಿರಿಜನ ಪುನರ್ವಸತಿಗಾಗಿ ಮೀಸಲಿಟ್ಟಿದ್ದು ಈ ಜಮೀನನ್ನು ಇಂದಿಗೂ ಗಡಿ ಗುರುತು ಮಾಡಲು ಸಾಧ್ಯವಾಗದ ಆಡಳಿತ ವರ್ಗ ನಮ್ಮ ಮೇಲೆ ದೌರ್ಜನ್ಯವೆಸಗುತ್ತಿರುವುದು ಎಷ್ಟು ಸರಿ? ಸದ್ರಿ ಜಮೀನನ್ನು ಸ್ಥಳೀಯ ಭೂ ಮಾಲಿಕರು ಒತ್ತುವರಿ ಮಾಡಿಕೊಂಡಿದ್ದರು ಕುರುಡರಂತೆ ತಾಲೂಕು ಆಡಳಿತ ವರ್ತಿಸುತ್ತಿದೆ.

ಕಾಮ್ರೇಡ್ ಎಂಸಿಎನ್ ನಿಧನಕ್ಕೆ ಶ್ರದ್ಧಾಂಜಲಿ



ಭಾರತ ಕಮ್ಯೂನಿಸ್ಟ್ ಪಕ್ಷದ ಮತ್ತು ಕಾರ್ಮಿಕ ಚಳುವಳಿಯ ಹಿರಿಯ ಮುಖಂಡರಾಗಿದ್ದ ಕಾಮ್ರೇಡ್ ಎಂ.ಸಿ. ನರಸಿಂಹನ್ ನಿಧನ ಅಪಾರ ನಷ್ಟವುಂಟು ಮಾಡಿದೆ.

ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿ ಮತ್ತು ಕಾರ್ಮಿಕ ಚಳುವಳಿಯ ಬಹುತೇಕ ಅವಧಿಯಲ್ಲಿ ಅದರ ಭಾಗವಾಗಿದ್ದ ಎಂಸಿಎನ್ ಅತ್ಯಂತ ಪ್ರಾಮಾಣಿಕ ಮತ್ತು ಮೃದು ಸ್ವಭಾವದ ಪ್ರೀತಿಯ ಸಂಗಾತಿಯಾಗಿದ್ದರು.

ವಿದ್ಯಾರ್ಥಿ ದೆಸೆಯಲ್ಲೇ ಕಮ್ಯುನಿಸ್ಟ್ ಚಳುವಳಿಗೆ ಆಕರ್ಷಿತರಾಗಿ ಬೆಂಗಳೂರಿನಲ್ಲಿ ಕಾರ್ಮಿಕರ ನಡುವೆ ಕೆಲಸ ಮಾಡುತ್ತಿದ್ದರು. ಕೆಜಿಎಫ್ ನಲ್ಲಿ ಅಲ್ಲಿನ ಕಮ್ಯುನಿಸ್ಟ್ ಮುಖಂಡರನ್ನು ಮೈಸೂರು ಸರ್ಕಾರ ದಾಳಿ ದಬ್ಬಾಳಿಕೆಗಳ ಮೂಲಕ ಗಡೀಪಾರು ಮುಂತಾದ ಕ್ರಮಗಳಿಂದ ಹಿಂಸಿಸುತ್ತಿತ್ತು. ಕಾಮ್ರೇಡ್ ಎನ್.ಎಲ್.ಉಪಾಧ್ಯಾಯ ಅವರ ಸಲಹೆ ಮೇರೆಗೆ ಕೆಜಿಎಫ್ ನ ಗಣಿ ಕಾರ್ಮಿಕರಿಗೆ ನೆರವು ನೀಡಲು ಮತ್ತು ಅವರ ಹಕ್ಕುಗಳಿಗಾಗಿ ಕೆಲಸ ಮಾಡಲು ಅಲ್ಲಿಗೆ ಹೋದರು. ಅವರ ನಡುವೆ ಕೆಲಸ ಮಾಡುತ್ತಲೇ ಜನಪ್ರಿಯರಾದರು. 1951-55 ರ ನಡುವೆ ಗಣಿಗಳಲ್ಲಿ ಅಪಘಾತ ತಡೆ ವಿಧಾನಗಳು ಮತ್ತು ಗಣಿ ಕಾರ್ಮಿಕರ ಕುರಿತು ಪರಿಹಾರಗಳನ್ನು ಕಾಣಲು ಹಲವಾರು ವಿದೇಶಗಳಿಗೆ ಅಧ್ಯಯನಕ್ಕೆಂದು ಹೋಗಿ ಬಂದರು.

ಇದಕ್ಕೂ ಮೊದಲು, 1948-51 ರ ಅವಧಿಯಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ನಿಷೇಧಿಸಿದ್ದ ಕಾರಣದಿಂದ ಜನಶಕ್ತಿ ಪತ್ರಿಕೆಯನ್ನು ನಿಲ್ಲಿಸಲಾಗಿತ್ತು. ಅದು 1952 ರಲ್ಲಿ ಪುನಃ ಪ್ರಾರಂಭವಾದಾಗ ಅದರ ಸಂಪಾದಕರಾಗಿ ಎಂಸಿಎನ್ ಕೆಲಸ ಮಾಡಿದರು.

1957 ರಲ್ಲಿ ಕೆಜಿಎಫ್ ಕ್ಷೇತ್ರದಿಂದ ಮೈಸೂರು ವಿಧಾನಸಭೆಗೆ ಸಿಪಿಐನಿಂದ ಆಯ್ಕೆಯಾದರು. (1952 ರಲ್ಲಿ ಮೈಸೂರು ವಿಧಾನಸಭೆಯ ಮೊಟ್ಟಮೊದಲ ಸಿಪಿಐ ಶಾಸಕರಾಗಿ ಕೆ.ಎಸ್.ವಾಸನ್ ಆಯ್ಕೆಯಾಗಿದ್ದರು). ಆಗ ಕೆಜಿಎಫ್ ಜೋಡಿ ಕ್ಷೇತ್ರವಾಗಿತ್ತು. ಸಾಮಾನ್ಯ ಕ್ಷೇತ್ರದಿಂದ ಎಂಸಿಎನ್ ಅವರು 19,973 (27.36%) ಮತಗಳನ್ನು ಪಡೆದು ಕಾಂಗ್ರೆಸ್‌ನ ಓ.ಎಸ್.ಭಾಗ್ಯನಾಥನ್ ಅವರನ್ನು ಸೋಲಿಸಿದ್ದರು.

1962 ರಲ್ಲಿ ಕ್ಷೇತ್ರ ಬದಲಾವಣೆ ಮಾಡಿ ಬೆಂಗಳೂರಿನ ಗಾಂಧಿನಗರ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಆದರೆ ಗೆಲ್ಲಲಾಗಲಿಲ್ಲ.

1962 ರಲ್ಲಿ ಎನ್.ಎಲ್.ಉಪಾಧ್ಯಾಯ, ಎಂ.ಎಸ್.ಕೃಷ್ಣನ್, ಸೂರ್ಯನಾರಾಯಣ ರಾವ್, ಎಂ.ಹೆಚ್. ಕೃಷ್ಣಪ್ಪ ಮುಂತಾದವರೊಂದಿಗೆ ಜೈಲುವಾಸ ಅನುಭವಿಸಿದರು.

1962 ರಲ್ಲಿ ಕಾಂಗ್ರೆಸ್ ಮತ್ತು ಪ್ರಜಾ ಸೋಷಿಯಲಿಸ್ಟ್ ಪಾರ್ಟಿ ಬೆಂಬಲದೊಂದಿಗೆ ಮೈಸೂರು ರಾಜ್ಯದ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಬಹುಶಃ ಸ್ವಾತಂತ್ರ್ಯ ನಂತರ ಕರ್ನಾಟಕದಲ್ಲಿ ವಿಧಾನಪರಿಷತ್ತಿಗೆ ಕಮ್ಯುನಿಸ್ಟರೊಬ್ಬರು ಆಯ್ಕೆಯಾದ ಮೊದಲ ಮತ್ತು ಕೊನೆಯವರು ಎಂಸಿಎನ್.

1964 ರಲ್ಲಿ ಕಮ್ಯುನಿಸ್ಟ್ ಪಕ್ಷ ವಿಭಜನೆ ಆದಾಗ ಸಿಪಿಐನೊಂದಿಗೆ ಉಳಿದ ಎಂಸಿಎನ್ ಕೊನೆಯವರೆಗೂ ಅದರ ಭಾಗವಾಗಿದ್ದರು. ಎಐಟಿಯುಸಿಯ ರಾಜ್ಯ ಘಟಕದ ಅಧ್ಯಕ್ಷರಾಗಿದ್ದರು. ರಾಜ್ಯದ ಹಲವಾರು ಕಾರ್ಮಿಕ ಸಂಘಟನೆಗಳ ಮುಖಂಡರಾಗಿ, ವಕೀಲರಾಗಿ ಕಾರ್ಮಿಕರ ಮತ್ತು ದುಡಿಯುವ ಜನರ ಹಕ್ಕುಗಳಿಗಾಗಿ ಶ್ರಮಿಸಿದರು.

ಕಮ್ಯುನಿಸ್ಟ್ ಚಳುವಳಿಯಲ್ಲಿ ಸ್ವಾತಂತ್ರ್ಯ ಹೋರಾಟದ ಕೊಂಡಿಯಾಗಿದ್ದ ಎಂಸಿಎನ್ ನಿಧನ ರಾಜ್ಯದ ಶ್ರಮಜೀವಿ ಚಳುವಳಿಗೆ ಅಪಾರ ನಷ್ಟವನ್ನುಂಟು ಮಾಡಿದೆ.

ಕೆಲವು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಸಿಪಿಐ(ಎಂ)ನ ರಾಜ್ಯ ಸಮ್ಮೇಳನ ನಡೆಸುವ ಸಂದರ್ಭದಲ್ಲಿ ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿ ಯ ಇತಿಹಾಸವನ್ನು ದಾಖಲಿಸುವ ಉದ್ದೇಶದಿಂದ ಕಾಮ್ರೇಡ್ ಎಂಸಿಎನ್ ಅವರನ್ನು ಸಂದರ್ಶಿಸಲೆಂದು ನಾನು ಮತ್ತು ಕಾಮ್ರೇಡ್ ವಸಂತರಾಜ್ ಸೇರಿ ಬಸವೇಶ್ವರ ನಗರದ ಅವರ ಮನೆಗೆ ಭೇಟಿ ಕೊಟ್ಟಿದ್ದೆವು. ತುಂಬಾ ಪ್ರೀತಿಯಿಂದ ಮಾತನಾಡಿದರು. ಆದರೆ ಅವರಿಗೆ ನೆನಪಿನ ಶಕ್ತಿ ತೀರಾ ಕುಂಟಿತವಾಗಿತ್ತು. ಅಂತಹ ಸಂದರ್ಭದಲ್ಲೂ ಅವರು ಕಮ್ಯುನಿಸ್ಟ್ ಪಕ್ಷಗಳು ವಿಲೀನವಾಗಬೇಕೆಂಬ ಮಾತುಗಳನ್ನು ಹೇಳುತ್ತಿದ್ದರು.

ಅವರ ನಿಧನಕ್ಕೆ ಸಿಪಿಐ(ಎಂ) ಪಕ್ಷದ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತೇನೆ. ಅವರ ಕುಟುಂಬದವರಿಗೆ ಸಂತಾಪಗಳನ್ನು ಸೂಚಿಸುತ್ತದೆ. ●

ಬೀಡಿ ಕಾರ್ಮಿಕರಿಗೆ ಕೊರೋನಾ ಲಾಕ್ ಡೌನ್ ಪ್ಯಾಕೇಜ್ ಕನಿಷ್ಠ ರೂ. 6000 ಘೋಷಿಸಲು ಮನವಿ



ಅವಿಭಜಿತ ದ.ಕ ಜಿಲ್ಲೆಯಲ್ಲಿ ಸುಮಾರು ಮೂರುವರೆ ಲಕ್ಷಕ್ಕೂ ಮಿಕ್ಕಿ ಬೀಡಿ ಕಾರ್ಮಿಕರು ಬೀಡಿ ಸುತ್ತಿ ತಮ್ಮ ಕುಟುಂಬ ಜೀವನ ನಡೆಸುತ್ತಿದ್ದಾರೆ. ಬೀಡಿ ಕೆಲಸವಲ್ಲದೆ ಬೇರೆ ಆದಾಯ ಅವರಿಗೆ ಇರುವುದಿಲ್ಲ. 2020 ಮಾರ್ಚ್ 22 ರಿಂದ ಕೊರೊನಾ ಲಾಕ್ ಡೌನ್ ಘೋಷಣೆಯಾಗಿ ಬೀಡಿ ಕಾರ್ಮಿಕರಿಗೆ ಕೆಲಸವಿಲ್ಲದೆ ತೊಂದರೆಗೊಳಗಾಗಿದ್ದಾರೆ. ಕರ್ನಾಟಕ ರಾಜ್ಯ ಸರಕಾರ ನಿಜವಾಗಿಯೂ ಬಡ ಬೀಡಿ ಕಾರ್ಮಿಕರಿಗೆ ಲಾಕ್ ಡೌನ್ ಪ್ಯಾಕೇಜ್ ಘೋಷಣೆ ಮಾಡಬೇಕಾಗಿತ್ತು. ಸಿಐಟಿಯು ನೇತೃತ್ವದ ಬೀಡಿ ವರ್ಕರ್ಸ್ ಫೆಡರೇಶನ್ ಕೇಂದ್ರ ಹಾಗೂ ರಾಜ್ಯ ಸರಕಾರ ಬೀಡಿ ಕಾರ್ಮಿಕರಿಗೂ ಪ್ಯಾಕೇಜ್ ಘೋಷಿಸಬೇಕೆಂದು ಒತ್ತಾಯಿಸಿದರೂ ಈ ವರೆಗೂ ಪ್ಯಾಕೇಜ್ ಘೋಷಣೆ ಆಗಿಲ್ಲ. ದಿನಾಂಕ 10-06-2020 ರಂದು ಸಿಐಟಿಯು ನೇತೃತ್ವದ ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಶನ್ ನೇತೃತ್ವದಲ್ಲಿ ಸಹಾಯಕ ಕಾರ್ಮಿಕ ಆಯುಕ್ತರ ಮುಖಾಂತರ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯವರಿಗೆ ಮನವಿ ನೀಡಲಾಯಿತು. ಈ ಮನವಿಯಲ್ಲಿ ಬೀಡಿ ಕಾರ್ಮಿಕರಿಗೆ ಲಾಕ್ ಡೌನ್ ಅವಧಿಯಲ್ಲಿ ಕನಿಷ್ಠ ರೂ. 6000 ರಂತೆ ಪರಿಹಾರವನ್ನು ಘೋಷಣೆ ಮಾಡಬೇಕೆಂದು ಒತ್ತಾಯಿಸಲಾಯಿತು. ಇಂದು ಸಹಾಯಕ ಕಾರ್ಮಿಕ ಆಯುಕ್ತರು ಗುರುಪುರ, ಮೂಡಬಿದ್ರಿ, ಬೆಳ್ತಂಗಡಿ, ಪುತ್ತೂರು, ಸುಳ್ಯದಲ್ಲಿ ಕೂಡಾ ಸಿಐಟಿಯು ನೇತೃತ್ವದಲ್ಲಿ ಪ್ರತಿಭಟನಾ ಪ್ರದರ್ಶನ ಮಾಡಿ ಮುಖ್ಯಮಂತ್ರಿಯವರಿಗೆ ಮನವಿ ನೀಡಲಾಗಿದೆ.

ಸಹಾಯಕ ಕಾರ್ಮಿಕರ ಆಯುಕ್ತರನು ಭೇಟಿಯಾದ ಉನ್ನತ ಮಟ್ಟದ ನಿಯೋಗದಲ್ಲಿ ಬೀಡಿ ಫೆಡರೇಶನಿನ ಜಿಲ್ಲಾ ಅಧ್ಯಕ್ಷರಾದ ವಸಂತ ಆಚಾರಿ, ಪ್ರಧಾನ ಕಾರ್ಯದರ್ಶಿ ಜೆ. ಬಾಲಕೃಷ್ಣ ಶೆಟ್ಟಿ ಪದಾಧಿಕಾರಿಗಳಾದ ಜಯಂತಿ ಬಿ. ಶೆಟ್ಟಿ ಬಾಬು ದೇವಾಡಿಗ, ಭಾರತಿ ಬೋಳಾರ, ಜಯಲಕ್ಷ್ಮೀ ಮತ್ತಿತರರು ಉಪಸ್ಥಿತರಿದ್ದರೆಂದು ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಶನ್ ಸಿಐಟಿಯು ಇದರ ಪ್ರಧಾನ ಕಾರ್ಯದರ್ಶಿ ಜೆ. ಬಾಲಕೃಷ್ಣ ಶೆಟ್ಟಿಯವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ವಿಟ್ಲ : ಬೀಡಿ ಕಾರ್ಮಿಕರಿಗೆ ಪರಿಹಾರ ನೀಡುವ ಕುರಿತು ಕೊರೊನಾ ವೈರಸ್ ವಿರುದ್ಧವಾಗಿ ಕಳೆದ ಎರಡು ತಿಂಗಳಿನಿಂದಲೂ ಮಿಕ್ಕಿ ಲಾಕ್‌ಡೌನ್ ಘೋಷಣೆ ಆಗಿ ಬೀಡಿ ಕಾರ್ಮಿಕರಿಗೆ ಕೆಲಸವಿಲ್ಲದೆ ಕುಟುಂಬ ನಿರ್ವಹಣೆ ಮಾಡಲು ದುಸ್ತರವಾಗಿದೆ. ಬೀಡಿ ಕಾರ್ಮಿಕರಿಗೆ ರಾಜ್ಯ ಸರಕಾರ ಕಲ್ಯಾಣ ಮಂಡಳಿಯಿಂದಾಗಲೀ, ಅಥವಾ ಮುಖ್ಯ ಮಂತ್ರಿ ಪರಿಹಾರ ನಿಧಿಯಿಂದಾಗಲೀ, ಅಥವಾ ಬೀಡಿ ಮಾಲಕರಿಂದಾಗಲೀ ಯಾವುದೇ ಪರಿಹಾರ ಈವರೆಗೂ ಬಂದಿಲ್ಲ. ಅತ್ಯಂತ ಬಡ ಕಾರ್ಮಿಕ ವಿಭಾಗವಾದ ಬೀಡಿ ಕಾರ್ಮಿಕರು ಸರಕಾರದ ಪರಿಹಾರದ ನಿರೀಕ್ಷೆಯಲ್ಲಿದ್ದಾರೆ. ಲಾಕ್‌ಡೌನ್ ಅವಧಿ ರದ್ದು ಪಡಿಸಿದರೂ ಈ ಸಮಸ್ಯೆ ಮುಂದುವರಿದಿದೆ. ಆದುದರಿಂದ ಬೀಡಿ ಕಾರ್ಮಿಕರಿಗೆ ರೂ.6000 ದಷ್ಟು ಪರಿಹಾರ ನಿಧಿಯನ್ನು ಘೋಷಣೆ ಮಾಡಬೇಕಾಗಿ ಒತ್ತಾಯಿಸಿ ವಿಟ್ಲ ಪಿರ್ಕಾ ಬೀಡಿ ಕೆಲಸಗಾರರ ಸಂಘದಿಂದ ಉಪತಹಶೀಲ್ದಾರ್ ರವರ ಮುಖಾಂತರ ಸರಕಾರಕ್ಕೆ ಮನವಿ ನೀಡಲಾಯಿತು ನಿಯೋಗದಲ್ಲಿ ಸಂಘದ ಕಾರ್ಯದರ್ಶಿ ರಾಮಣ್ಣ ವಿಟ್ಲ ಅಧ್ಯಕ್ಷ ಅದೇಜಪ್ಪ ಪೂಜಾರಿ ಮುಂತಾದವರಿದ್ದರು

ಬಡ್ಡಕಟ್ಟೆ: ಬೀಡಿ ಕಾರ್ಮಿಕರಿಗೆ ಪರಿಹಾರ ನೀಡುವ ಕುರಿತು ಕೊರೊನಾ ವೈರಸ್ ವಿರುದ್ಧವಾಗಿ ಕಳೆದ ಎರಡು ತಿಂಗಳಿನಿಂದಲೂ ಮಿಕ್ಕಿ ಲಾಕ್‌ಡೌನ್ ಘೋಷಣೆ ಆಗಿ ಬೀಡಿ ಕಾರ್ಮಿಕರಿಗೆ ಕೆಲಸವಿಲ್ಲದೆ ಕುಟುಂಬ ನಿರ್ವಹಣೆ ಮಾಡಲು ದುಸ್ತರವಾಗಿದೆ. ಬೀಡಿ ಕಾರ್ಮಿಕರಿಗೆ ರಾಜ್ಯ ಸರಕಾರ ಕಲ್ಯಾಣ ಮಂಡಳಿಯಿಂದಾಗಲೀ, ಅಥವಾ ಮುಖ್ಯ ಮಂತ್ರಿ ಪರಿಹಾರ ನಿಧಿಯಿಂದಾಗಲೀ, ಅಥವಾ ಬೀಡಿ ಮಾಲಕರಿಂದಾಗಲೀ ಯಾವುದೇ ಪರಿಹಾರ ಈವರೆಗೂ ಬಂದಿಲ್ಲ. ಅತ್ಯಂತ ಬಡ ಕಾರ್ಮಿಕ ವಿಭಾಗವಾದ ಬೀಡಿ ಕಾರ್ಮಿಕರು ಸರಕಾರದ ಪರಿಹಾರದ ನಿರೀಕ್ಷೆಯಲ್ಲಿದ್ದಾರೆ. ಲಾಕ್‌ಡೌನ್ ಅವಧಿ ರದ್ದು ಪಡಿಸಿದರೂ ಈ ಸಮಸ್ಯೆ ಮುಂದುವರಿದಿದೆ. ಆದುದರಿಂದ ಬೀಡಿ ಕಾರ್ಮಿಕರಿಗೆ ರೂ. 6000 ದಷ್ಟು ಪರಿಹಾರ ನಿಧಿಯನ್ನು ಘೋಷಣೆ ಮಾಡಬೇಕಾಗಿ ಒತ್ತಾಯಿಸಿ ಬಂಟ್ವಾಳ ತಾಲೂಕು ಬೀಡಿ ಕೆಲಸಗಾರರ ಸಂಘದಿಂದ ತಹಶೀಲ್ದಾರ್ ರವರ ಮುಖಾಂತರ ಸರಕಾರಕ್ಕೆ ಮನವಿ ನೀಡಲಾಯಿತು. ನಿಯೋಗದಲ್ಲಿ ಸಂಘದ ಮುಖಂಡರುಗಳಾದ ಲೋಲಾಕ್ಷಿ ಬಂಟ್ವಾಳ, ಉದಯಕುಮಾರ್ ಬಂಟ್ವಾಳ, ರಾಮಣ್ಣ ವಿಟ್ಲ, ಸುರೇಂದ್ರ ಕೋಟ್ಯಾನ್ ಮುಂತಾದವರಿದ್ದರು.



ತಾಲೂಕಿನಾದ್ಯಂತ 2004 ರಿಂದ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಸೇರಿದಂತೆ ಪಶ್ಚಿಮ ಘಟ್ಟದಲ್ಲಿ ನಕ್ಸಲ್ ಚಟುವಟಿಕೆ ಕಾಣಿಸಿಕೊಂಡ ನಂತರ ಕುದುರೆಮುಖ ರಾಷ್ಟ್ರೀಯ ಉದ್ಯಾವನದಲ್ಲಿ ವಾಸಿಸುತ್ತಿದ್ದ ಆದಿವಾಸಿಗಳಿಗೆ ಪುನರ್ವಸತಿ ಕಲ್ಪಿಸುವ ಯೋಜನೆಯನ್ನು ರಾಜ್ಯ ಸರ್ಕಾರ ಹಮ್ಮಿಕೊಂಡಿತ್ತು. ಅದರ ಭಾಗವಾಗಿ ತಾಲೂಕಿನ ವಿವಿಧ ಪ್ರದೇಶಗಳ ಆದಿವಾಸಿಗಳನ್ನು ಪುನರ್ವಸತಿ ಯೋಜನೆಯಲ್ಲಿ ಸ್ಥಳಾಂತರಿಸಲಾಯಿತು. ಆದರೆ ಈ ಕುಟುಂಬಗಳಿಗೆ ಪುನರ್ವಸತಿಗಾಗಿ ಸುಲ್ಕೇರಿಯಲ್ಲಿ ಕಾಯ್ದಿರಿಸಲಾಗಿದ್ದ 190 ಎಕ್ರೆ ಜಮೀನಿನಲ್ಲಿ ಒಂದಿಂಚು ಜಮೀನನ್ನು ನೀಡದಿರುವುದು ತಾಲೂಕು ಆಡಳಿತದ ವೈಫಲ್ಯ, ನಿರ್ಲಕ್ಷ್ಯಕ್ಕೆ ಸಾಕ್ಷಿಯಾಗಿದೆ. ಇಂತಹ ಸಂದರ್ಭದಲ್ಲಿ ಮತ್ತೆ ಆದಿವಾಸಿಗಳನ್ನು ಅವರ ಜಮೀನಿನಿಂದ ಹೊರದಬ್ಬುವ ವ್ಯವಸ್ಥಿತ ಪಿತೂರಿಯನ್ನು ತಾಲೂಕು ಆಡಳಿತ ನಡೆಸುತ್ತಿರುವುದು ಅತ್ಯಂತ ಅಮಾನವೀಯವಾಗಿದೆ.

ಈಗಾಗಲೇ ಸರ್ಕಾರಿ ಜಮೀನನ್ನು ಸ್ವಾಧೀನಪಡಿಸಿಕೊಂಡು ಕೃಷಿ ಮಾಡಿಕೊಂಡಿರುವ ಈ ಕುಟುಂಬಗಳ ಜಮೀನನ್ನು ಯಾವುದೇ ಕಾರಣಕ್ಕೂ ತೆರವುಗೊಳಿಸಬಾರದು. ತಾಲೂಕಿನಾದ್ಯಂತ ಶ್ರೀಮಂತರು ಮಿತಿಗಿಂತ ಹೆಚ್ಚು ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದು, ತಾಲೂಕು ಆಡಳಿತ ಈ ಶ್ರೀಮಂತರ ಭೂ ಒತ್ತುವರಿಯನ್ನು ತೆರವು ಮಾಡದೆ ಬಡವರ ಒಂದಿಂಚು ಜಮೀನನ್ನು ವಶಕ್ಕೆ ತೆಗೆದುಕೊಳ್ಳಲು ಬಿಡುವುದಿಲ್ಲ. ಬಲಪ್ರಯೋಗದಿಂದ ಭೂಮಿ ತೆರವಿಗೆ ಕಾರ್ಯಾಚರಣೆ ನಡೆಸಿದರೆ ತಾಲೂಕು ಕಛೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸುವುದು ಅನಿವಾರ್ಯವಾದಿತು.

ವಸಂತ ನಡ ಅಧ್ಯಕ್ಷರು, ಜಯನಂದ ಪಿಲಿಕಲ ಕಾರ್ಯದರ್ಶಿ, ಶೇಖರ್ ಎಲ್. ಸಂಚಾಲಕರು, ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಬೆಳ್ತಂಗಡಿ ತಾಲೂಕು. ರವಿ, ಜಗನ್ನಾಥ್ ಸಂತ್ರಸ್ತರು.

'ಜೀವವಿದ್ದರೆ ಜೀವನ' ಎಂದು ಪ್ರಧಾನಿ ಹೇಳಿದ ಮಾತಿನ ಅರ್ಥ 'ಕೋವಿಡ್‌ಗೆ ಬಲಿಯಾಗದೆ ಉಳಿದುಕೊಂಡರೆ ಮಾತ್ರ ಜೀವನ' ಎಂದು ನಂಬುವ ಜನರಿಗೆ, ಕೋವಿಡ್ ನಿಜವಾದ ಸಮಸ್ಯೆ ಅಲ್ಲವೆಂಬುದು ಅರ್ಥವಾಗಬೇಕು. ಆಗ, ಜನರ ಕಷ್ಟಗಳ ಪರಿಹಾರಕ್ಕಾಗಿ ಸಮಾಜವಾದೀ ಆರ್ಥಿಕತೆ ಮತ್ತು ಅಭಿವೃದ್ಧಿ ಮಾದರಿಗಳನ್ನು ಅನುಸರಿಸದೆ ಅನ್ಯ ಮಾರ್ಗವಿಲ್ಲ, ಎಂದು ಕೂಗಿ ಹೇಳುತ್ತಿರುವ ಕಮ್ಯೂನಿಸ್ಟರ ಮಾತು ವ್ಯರ್ಥಪ್ರಲಾಪವಾಗಿ ಕೇಳಿಸುವುದಿಲ್ಲ. ಕ್ಷಾಮ–ಡಾಮರಗಳು, ಕೋವಿಡ್‌ನಂಥ ಸಾಂಕ್ರಾಮಿಕ ಜಾಡ್ಯಗಳು ಸಾಮಾನ್ಯ ಜನರು ಅನುಭವಿಸುವ ಕಷ್ಟಗಳನ್ನು ಬಯಲಿಗೆಳೆಯುವ ವಿಶೇಷ ಸಂದರ್ಭಗಳೇ ಹೊರತು ನಿಜವಾದ ಕಾರಣಗಳು ಅಲ್ಲವೆಂದು ಇವರ್ಯಾರಿಗೂ ಗೊತ್ತಾಗುವುದೇ ಇಲ್ಲ. ಬಡಜನರ ಕಷ್ಟಗಳಿಗೆ ನಿಜವಾದ ಕಾರಣ ಬಂಡವಾಳವಾದೀ ಆರ್ಥಿಕತೆ ಮತ್ತು ಅಭಿವೃದ್ಧಿ ನೀತಿಗಳೇ ಆಗಿವೆ. ಕೋವಿಡ್ ಜಾಡ್ಯವು ಅವು ಮಧ್ಯಮವರ್ಗದ ಕಣ್ಣಿಗೇಳಿಳದಂತೆ ಅವುಗಳ ಮೇಲೆ ಹೊದಿಸಿದ್ದ ದಪ್ಪಚರ್ಮದ ದುಪ್ಪಟಿಯನ್ನು ಒಂದೆರಡು ಕಡೆ ಹರಿದಿದೆ ಅಷ್ಟೆ.

ಅತಿಥಿ ಅಂಕಣ

ಪ್ರೊ. ಎ.ಎಸ್. ಲಕ್ಷ್ಮಿನಾರಾಯಣ

'ಬಿಟ್ಟಿ ಕೂಳು' ಮತ್ತು ಕೋವಿಡ್ ಜಾಡ್ಯ

ಕ್ಷಾಮ–ಬರಗಾಲ, ಹಣದುಬ್ಬರ, ಆರ್ಥಿಕ ಹಿಂಜರಿಕೆ ಮತ್ತು ಕುಸಿತಗಳು, ಯುದ್ಧ ಮತ್ತು ಕೋವಿಡ್‌ನಂಥಾ ಸಾಂಕ್ರಾಮಿಕ ರೋಗಗಳ ಘೋರ ಪರಿಣಾಮಗಳು ಮೊದಲು ತಗುಲುವುದು ಸಾಮಾನ್ಯ ಜನರಿಗೆ. ಅಂದರೆ, ರೈತರು, ಕಾರ್ಮಿಕರು ಮತ್ತು ಬಡವರಿಗೆ. ನಿರುದ್ಯೋಗ ಸಮಸ್ಯೆ ತೀವ್ರವಾಗಿ ಹಣವಿಲ್ಲದೆ, ಜೀವನ ದುರ್ಭರವಾದಾಗಲೆಲ್ಲಾ ಬಂಡವಾಳಶಾಹೀ ಸರ್ಕಾರಗಳು ಅಂಥವರಿಗಾಗಿ ಅನೇಕ ತುರ್ತು ಪರಿಹಾರ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತವೆ. ಅವುಗಳಲ್ಲಿ ತಾತ್ಕಾಲಿಕ ಆದಾಯವನ್ನು ತಂದುಕೊಡುವ ಕಾಮಗಾರಿಗಳು, ಸಾಂಕೇತಿಕ ಪರಿಹಾರವಾಗಿ ಸಣ್ಣ ಮೊತ್ತದ ಹಣದ ಹಂಚಿಕೆ, ಉಚಿತ ಅಥವಾ ಕಡಿಮೆ ಬೆಲೆಯಲ್ಲಿ ಪಡಿತರ ಸಾಮಗ್ರಿಗಳ ಸರಬರಾಜು ಸೇರಿರುತ್ತವೆ. ಅತ್ಯಂತ ಕಡಿಮೆ ಬೆಲೆಯಲ್ಲಿ ಊಟ–ತಿಂಡಿಗಳನ್ನು ಒದಗಿಸುವ ಬಡವರ ಕ್ಯಾಂಟೀನುಗಳು ಈಚಿನ ದಿನಗಳಲ್ಲಿ ಸೇರ್ಪಡೆಯಾಗಿರುವ ಪರಿಹಾರ ಕಾರ್ಯಗಳು. ಹಸಿವಿನಿಂದ ಕಂಗೆಟ್ಟು ಹತಾಶರಾದ ಬಡಜನರು ಬೀದಿಗೆ ಬರದಂತೆ, ಸರ್ಕಾರದ ವಿರುದ್ಧ ದಂಗೆ ಏಳದಂತೆ ತಡೆಯುವುದು ಈ ಸಾಂಕೇತಿಕ ಪರಿಹಾರ ಕಾರ್ಯಕ್ರಮಗಳ ಪ್ರಧಾನ ಉದ್ದೇಶ.

ಬಡಜನರಿಗಾಗಿ ಸರ್ಕಾರಗಳು ಕೈಗೊಳ್ಳುವ ತಾತ್ಕಾಲಿಕ ಪರಿಹಾರ ಕಾರ್ಯಕ್ರಮಗಳನ್ನು ಮಧ್ಯಮವರ್ಗದ ಜನರು ವಿರೋಧಿಸುತ್ತಾರೆ. ಇವು ಬಡಜನರ ಸಮಸ್ಯೆಗಳನ್ನು ಬಗೆಹರಿಸದೆ ಅವರನ್ನು ಸೋಮಾರಿಗಳನ್ನಾಗಿ ಮಾಡುತ್ತದೆಂದು ಅಭಿಪ್ರಾಯಪಡುತ್ತಾರೆ. ಈ ಜನರ ಸಮಸ್ಯೆಗಳನ್ನು ಹೇಗೆ ಬಗೆಹರಿಸಬೇಕು ಎಂದು ಅವರು ಹೇಳಲಾರರು. ಜನರು (ಅಂದರೆ ತಮ್ಮಂಥ ಮಧ್ಯಮವರ್ಗೀಯರು) ಕೊಡುವ ತೆರಿಗೆ ಹಣವನ್ನು ಹೀಗೆ ಈ 'ಅಲಸಿಗರು, ಸೋಮಾರಿಗಳು, ಕಷ್ಟಪಟ್ಟು ದುಡಿಯಲು ಮೈ ಬಗ್ಗದ' ಜನರಿಗೆ ಬಿಟ್ಟಿಯಾಗಿ ಪಡಿತರ ಕೊಡಲು, 'ಬಿಟ್ಟಿ ಕೂಳು' ಹಾಕಲು ಪೋಲು ಮಾಡುವುದು ಸರಿಯಿಲ್ಲವೆಂದು ಸಾಧ್ಯವಿರುವ ಕಡೆಗಳಲ್ಲೆಲ್ಲಾ ಹುಯಿಲಿಡುತ್ತಾರೆ.

ಇವರಿಗೆ ತಿಳಿಯದಿರುವ, ತಿಳಿದುಕೊಳ್ಳಲು ಬಯಸದ, ಬಹುಮುಖ್ಯ ಸಂಗತಿ ಯಾವುದೆಂದರೆ, ಯಾವುದೇ ಬಿಕ್ಕಟ್ಟು, ಕೋವಿಡ್‌ನಂಥ ಸಾಂಕ್ರಾಮಿಕ ಜಾಡ್ಯ ಇಲ್ಲದಿರುವ ದಿನಗಳಲ್ಲಿ ಯಾರು, ಬಿಟ್ಟಿ ಪಡಿತರ, ಬಿಟ್ಟಿ ಹಣ, ಬಿಟ್ಟಿ ಊಟ, ಇತ್ಯಾದಿಗಳನ್ನು ಯಾರಿಗೆ ಕೊಡುತ್ತಿರುತ್ತಾರೆ ಎಂಬುದು.

ಸಸ್ಯಗಳು ತಮ್ಮಲ್ಲಿನ ಪತ್ರಹರಿತ್ತನ್ನು ಬಳಸಿಕೊಂಡು ದ್ಯುತಿ ಸಂಶ್ಲೇಷಣೆಯ ಮೂಲಕ ಗಾಳಿ–ಬೆಳಕುಗಳಿಂದ ಆಹಾರವನ್ನು ತಯಾರಿಸುತ್ತವೆ. ಸಸ್ಯಾಹಾರಿ ಪ್ರಾಣಿಗಳು ಈ ಆಹಾರವನ್ನು ತಿಂದು ಜೀವಿಸುತ್ತವೆ. ಮಾಂಸಾಹಾರಿ ಪ್ರಾಣಿಗಳು ಸಸ್ಯಾಹಾರಿ ಪ್ರಾಣಿಗಳನ್ನು ತಿಂದು ಬದುಕುತ್ತವೆ. ಮನುಷ್ಯರು ಭೂಮಿಯಲ್ಲಿ ಶ್ರಮ ಹಾಕಿ, ಸಸ್ಯಗಳನ್ನು ಬೆಳೆದು, ಪ್ರಾಣಿಗಳನ್ನು ಸಾಕಿ ತಮ್ಮ ಆಹಾರವನ್ನು, ಇತರ ಜೀವನಾವಶ್ಯಕ ವಸ್ತುಗಳನ್ನು ಪಡೆಯುತ್ತಾರೆ. ಹೀಗೆ ಈ ಇಡೀ ಜೀವಜಗತ್ತಿನ ಅಸ್ತಿತ್ವವು, ಪತ್ರಹರಿತ್ತು, ಭೂಮಿ ಮತ್ತು ಶ್ರಮದ ಮೇಲೆ ನಿಂತಿದೆ. ಪಶು, ಪಕ್ಷಿ, ಪ್ರಾಣಿಗಳಲ್ಲಿಲ್ಲದ, ಮನುಷ್ಯರಲ್ಲಿ ಮಾತ್ರ ಬಳಕೆಯಾಗುವ ವಿಶಿಷ್ಟ ಶಕ್ತಿಯಾದ ಶ್ರಮವಿಲ್ಲದೆ ಯಾವ ವಸ್ತುವೂ ತಯಾರಾಗುವುದಿಲ್ಲ. ಯಾವುದೇ ಸೌಕರ್ಯ–ಸೌಲಭ್ಯ–ಸೇವೆಗಳು ಎಲ್ಲೂ, ಯಾರಿಗೂ ದೊರೆಯುವುದು ಸಾಧ್ಯವಿಲ್ಲ.

ಭೂಮಿ, ಶ್ರಮ ಮತ್ತು ಸಸ್ಯಗಳ ಮೇಲೆ ನೇರವಾಗಿ ಅವಲಂಬಿತರಾದ ರೈತರು, ತಮ್ಮ ಸ್ವಂತ ಶ್ರಮ ಹಾಕಿ ಭೂಮಿಯಲ್ಲಿ ಆಹಾರವನ್ನು ಬೆಳೆಯುತ್ತಾರೆ. ಹಾಗೆ ಬೆಳೆಯುವಾಗ ಅವರು ತಮ್ಮ ಅಗತ್ಯಕ್ಕೆ ಬೇಕಾದ್ದಕ್ಕಿಂತ ಹೆಚ್ಚಿಗೆ ಬೆಳೆಯುತ್ತಾರೆ. ಕುಶಲಕರ್ಮಿಗಳು ಹೆಸರೇ ಸೂಚಿಸುವಂತೆ, ಪ್ರತಿಭೆ ಮತ್ತು ಕೌಶಲಗಳನ್ನು ಬಳಸಿ, ಅಂದರೆ ತಮ್ಮ ಸ್ವಂತ ಶ್ರಮ ಹಾಕಿ ತಮ್ಮ ಸ್ವಂತ ಉಪಕರಣಗಳ ಸಹಾಯದಿಂದ, ರೈತರಿಗೆ ಅಗತ್ಯವಾಗುವ ನೇಗಿಲು, ನೊಗ ಮುಂತಾದ ಉಪಯೋಗಕರ ವಸ್ತುಗಳನ್ನು ತಯಾರಿಸುತ್ತಾರೆ. ಎಲ್ಲಾ ರೈತರೂ ಎಲ್ಲಾ ಬಗೆಯ ಆಹಾರ ಪದಾರ್ಥಗಳನ್ನೂ ಎಲ್ಲಾ ರೀತಿಯ ಭೂಮಿಯಲ್ಲಿಯೂ ಬೆಳೆಯಲಾಗುವುದಿಲ್ಲ. ಅವರವರಿಗೆ ಅನುಕೂಲಕರವಾದ ಕೃಷಿ ಕೆಲಸಗಳ ಮೂಲಕ ಬೇರೆ ಬೇರೆ ಭೂಮಿಯಲ್ಲಿ ನಾನಾ ವಿಧದ ಬೆಳೆಗಳನ್ನು ಬೆಳೆಯುತ್ತಾರೆ. ತಮ್ಮ ಬಳಕೆಗೆ ಸಾಕಾಗಿ ಮಿಕ್ಕಿದ್ದನ್ನು ಮತ್ತೊಬ್ಬರ ಬಳಿ ಲಭ್ಯವಿರುವ ಭಿನ್ನ, ಭಿನ್ನ ಉಪಯುಕ್ತ ವಸ್ತುಗಳೊಂದಿಗೆ ವಿನಿಮಯ ಮಾಡಿಕೊಳ್ಳುತ್ತಾರೆ. ಹಾಗೆಯೇ ಎಲ್ಲಾ ಕುಶಲಕರ್ಮಿಗಳೂ ವ್ಯಕ್ತಿಗತವಾಗಿ ಒಬ್ಬೊಬ್ಬರೇ ಎಲ್ಲಾ ಬಗೆಯ ಉಪಯೋಗಕಾರೀ ವಸ್ತುಗಳನ್ನೂ ತಯಾರು ಮಾಡಲಾಗುವುದಿಲ್ಲ. ತಾವೇ ನೇಗಿಲನ್ನು ತಯಾರಿಸಿದರೂ ರೈತರಂತೆ ಆಹಾರವನ್ನು ಬೆಳೆಯಲಾಗುವುದಿಲ್ಲ. ತಮ್ಮ ಸ್ವಂತ ಬಳಕೆಗೆ ಬೇಡವಾದ ವಸ್ತುಗಳನ್ನು ರೈತರ ಬಳಿ ಹೆಚ್ಚಿಗೆ ಇರುವ ಆಹಾರದೊಂದಿಗೆ ಅಥವಾ ಮತ್ತೊಬ್ಬ ಕುಶಲ ಕರ್ಮಿಯ ಬಳಕೆಗೆ ಬೇಡವಾದ ಭಿನ್ನ ವಸ್ತುಗಳೊಂದಿಗೆ ವಿನಿಮಯ ಮಾಡಿಕೊಳ್ಳುತ್ತಾರೆ. ಹೀಗೆ ವಿನಿಮಯ ಮಾಡಿಕೊಳ್ಳಲು ವಸ್ತುಗಳ ಸಾಮಾಜಿಕ ಮೌಲ್ಯವನ್ನು ನಿರ್ಧರಿಸಬೇಕಾಗುತ್ತದೆ. ಅಂದರೆ, ಒಂದು ವಸ್ತುವನ್ನು ತಯಾರಿಸಲು ಸರಾಸರಿ ಎಷ್ಟುಕಾಲ ಹಾಕಿದ ಶ್ರಮ ಬೇಕಾಗುತ್ತದೆ ಎಂಬುದು ಆ ವಸ್ತುವಿನ ಸಾಮಾಜಿಕ ಮೌಲ್ಯವನ್ನು ನಿರ್ಧರಿಸುತ್ತದೆ. ಹೀಗೆ ವಸ್ತುಗಳ ಮೌಲ್ಯವೆಂದರೆ ಶ್ರಮಕಾಲವೇ. ತಂತ್ರಜ್ಞಾನವು ಎಷ್ಟೇ ಮುಂದುವರೆದರೂ, ತಯಾರಿಕೆಯ ಸಾಧನ–ಉಪಕರಣಗಳು ಎಷ್ಟೇ ಸುಧಾರಿಸಿದರೂ, ವಸ್ತುಗಳ ಮೌಲ್ಯವು ನಿರ್ಧಾರವಾಗುವುದು ಮಾತ್ರ ಶ್ರಮಕಾಲದಿಂದಲೇ.

ವಸ್ತುಗಳನ್ನೇ ನೇರವಾಗಿ ವಿನಿಮಯ ಮಾಡಿಕೊಳ್ಳುವುದಕ್ಕಿಂತ ಒಂದು ಸರ್ವಸಾಮಾನ್ಯ ಮಾಧ್ಯಮದ ಮೂಲಕ ವಿನಿಮಯ ಮಾಡಿಕೊಳ್ಳುವುದು ಸುಲಭ. ಅಂಥ ಒಂದು ಮಾಧ್ಯಮವೇ ಹಣ.

ಭೂಮಿಯು ಪ್ರಕೃತಿದತ್ತವಾದ ವಸ್ತುವಾದ್ದರಿಂದ ಅದಕ್ಕೆ ಮೌಲ್ಯವಿಲ್ಲ. ಪ್ರಕೃತಿದತ್ತವಾದ ಯಾವ ವಸ್ತುವಿಗೂ ಮೌಲ್ಯವಿಲ್ಲ. ಆದರೆ ಒಂದು ತುಂಡು ಭೂಮಿಯನ್ನು ವ್ಯವಸಾಯಯೋಗ್ಯ ಭೂಮಿಯನ್ನಾಗಿ ಮಾಡಲು ಶ್ರಮಕಾಲ ಬೇಕು. ಹಾಗೆ ಮಾಡಲು ಶ್ರಮಕಾಲದೊಂದಿಗೆ ಕೆಲವು ಉಪಕರಣಗಳು ಬೇಕು. ಆ ಉಪಕರಣಗಳನ್ನು ತಯಾರಿಸಲು ಅಗತ್ಯವಾದ ಶ್ರಮಕಾಲ ಮತ್ತು ಆ ಭೂಮಿಯ ಶ್ರಮಕಾಲದ ಮೊತ್ತವು ಆ ವ್ಯವಸಾಯಯೋಗ್ಯ ಭೂಮಿಯ ಮೌಲ್ಯವಾಗುತ್ತದೆ. ಜೊತೆಗೆ ಆ ಉಪಕರಣಗಳನ್ನು ತಯಾರಿಸಲು ಬಳಸಿದ ಕಚ್ಚಾ ವಸ್ತುಗಳ ಶ್ರಮಕಾಲವೂ ಭೂಮಿಯ ಮೌಲ್ಯಕ್ಕೆ ಸೇರಿಸಿದರೆ ಭೂಮಿಯ ಮೌಲ್ಯದ ಒಟ್ಟು ಮೊತ್ತ ಸಿಗುತ್ತದೆ.

ಕಪ್ಪೆಚಿಪ್ಪು, ಚರ್ಮದ ತುಂಡು, ಲೋಹದ ಚೂರು, ರಟ್ಟಿನ ಕಾರ್ಡು ಯಾವುದನ್ನು ಬೇಕಾದರೂ ಅದಕ್ಕೆ ಮಾನ್ಯತೆ ಕೊಡುವ ಜನರ ವ್ಯವಹಾರ ಸಂಬಂಧಗಳಲ್ಲಿ ಹಣವೆಂದು ಬಳಸಬಹುದು. ಹಣಕ್ಕೆ ತನ್ನದೇ ಆದ ಮೌಲ್ಯ ಇಲ್ಲ. ವಸ್ತುಗಳ ವಿನಿಮಯದ ಮಾಧ್ಯಮವಾಗಿ ಮಾತ್ರ ಅದಕ್ಕೆ ಮೌಲ್ಯ ಬರುತ್ತದೆ.

ವಸ್ತುಗಳಲ್ಲಿ ಎರಡು ವಿಧ. ಬಳಕೆಗಾಗಿ ತಯಾರಿಸಿದ ವಸ್ತುಗಳು ಮತ್ತು ವಿನಿಮಯಕ್ಕೆಂದೇ ತಯಾರಿಸಿದ ವಸ್ತುಗಳು. ಬಳಕೆಗಾಗಿ ತಯಾರಿಸಿದ ವಸ್ತುಗಳಿಗೆ ಇರುವ ಮೌಲ್ಯ, ಉಪಯೋಗ ಮೌಲ್ಯ. ವಿನಿಮಯಕ್ಕೆಂದೇ ತಯಾರಿಸಿದ ವಸ್ತುಗಳ ಮೌಲ್ಯ ವಿನಿಮಯ ಮೌಲ್ಯ. ಉಪಯೋಗ ಮೌಲ್ಯವಿಲ್ಲದ ವಸ್ತುಗಳ ನಡುವೆ ವಿನಿಮಯ ನಡೆಯುವುದಿಲ್ಲವಾದ್ದರಿಂದ ಮೌಲ್ಯವೆಂದರೆ ವಿನಿಮಯ ಮೌಲ್ಯವೇ ಎಂದು ರೂಢಿಯಾಗಿದೆ. ವಸ್ತುಗಳ ಮೌಲ್ಯವನ್ನು ಹಣದ ರೂಪದಲ್ಲಿ ಹೇಳಿದರೆ ಅದೇ ವಸ್ತುವಿನ ಬೆಲೆ. ಹಣಕೊಟ್ಟು ವಸ್ತುಗಳನ್ನು ಖರೀದಿಸಬಹುದು. ಹಣ ಪಡೆದು ವಸ್ತುಗಳನ್ನು ಮಾರಬಹುದು. ಹೀಗೆ ಖರೀದಿಸಬಹುದಾದ ಮತ್ತು ಮಾರಬಹುದಾದ ವಸ್ತುಗಳನ್ನು, ಸರಕುಗಳು ಎನ್ನುತ್ತಾರೆ. ವೈದ್ಯರು, ಶಿಕ್ಷಕರು, ಕ್ಷೌರಿಕರು, ಅಗಸರು,



ಇಂಜಿನಿಯರುಗಳು, ಕಲಾವಿದರು, ವಾಹನ ಮಾಲೀಕರು ಮತ್ತು ಚಾಲಕರು ಮುಂತಾದ ಪರಿಣಿತರು ಅವರ ಕಸುಬುಗಳ ಮುಖೇನ ಒದಗಿಸುವ ಸೌಕರ್ಯ ಮತ್ತು ಸೌಲಭ್ಯಗಳನ್ನು ಸೇವೆಯೆನ್ನುತ್ತಾರೆ. ಹೀಗೆ ಸರಕು ಮತ್ತು ಸೇವೆಗಳನ್ನು ಹಣದ ಮಾಧ್ಯಮದಲ್ಲಿ ವಿನಿಮಯಮಾಡಿ ಕೊಳ್ಳುವುದೇ ವ್ಯಾಪಾರ. ಇಂಥ ಖರೀದಿ–ಮಾರಾಟಗಳ ಸಂಬಂಧಜಾಲವನ್ನು ಮಾರುಕಟ್ಟೆ ಎಂದು ಕರೆಯುವುದು ರೂಢಿಯಾಗಿದೆ.

ಎರಡು ವಸ್ತುಗಳ ನಡುವೆ ವಿನಿಮಯವು ನಡೆಯುವಂತೆ ವಸ್ತು ಮತ್ತು ನಿರ್ದಿಷ್ಟ ಅವಧಿಯ ಶ್ರಮಶಕ್ತಿಯ ನಡುವೆಯೂ ವಿನಿಮಯ ನಡೆಯುವುದು ಸಾಧ್ಯ. ವಸ್ತುವಿನ ಮೌಲ್ಯವನ್ನು ಶ್ರಮಕಾಲದಿಂದ ನಿರ್ಧರಿಸಿದಂತೆ, ನಿರ್ದಿಷ್ಟ ಅವಧಿಯಲ್ಲಿ ಬಳಸಿ ಖರ್ಚಾಗುವ ಶ್ರಮಶಕ್ತಿಯ ಮೌಲ್ಯವನ್ನು, ಮತ್ತೆ ಪಡೆಯಲು ಅಗತ್ಯವಾದ ಜೀವನಾವಶ್ಯಕ ವಸ್ತುಗಳ ಮೌಲ್ಯದಿಂದ ನಿರ್ಧರಿಸಬಹುದು. ಹೀಗಾಗಿ ಶ್ರಮಶಕ್ತಿಯ ಮೌಲ್ಯವನ್ನು ಹಣದೊಂದಿಗೆ ವಿನಿಮಯ ಮಾಡಿಕೊಳ್ಳಬಹುದು. ಹೀಗೆ ಶ್ರಮಶಕ್ತಿಯೊಂದಿಗೆ ವಿನಿಮಯ ಮಾಡಿಕೊಳ್ಳುವ ಹಣಕ್ಕೆ ಕೂಲಿ, ಅಥವಾ ವೇತನ ಎಂದು ಹೆಸರು.


ಹೆಚ್ಚಿನ ಸಂಖ್ಯೆಯ ವಸ್ತುಗಳನ್ನು ವಿನಿಮಯಕ್ಕೆಂದೇ ತಯಾರು ಮಾಡುವಾಗ ಒಬ್ಬರೇ ಎಲ್ಲವನ್ನೂ ತಯಾರು ಮಾಡುವುದು ಕಷ್ಟ. ಅದಕ್ಕಾಗಿ ಇತರರ ಶ್ರಮಶಕ್ತಿಯನ್ನು ನಿರ್ದಿಷ್ಟ ಅವಧಿಗೆ ಮತ್ತು ನಿರ್ದಿಷ್ಟ ಬೆಲೆಗೆ ಕೊಂಡುಕೊಳ್ಳಬೇಕಾಗುತ್ತದೆ. ಹೀಗೆ ಶ್ರಮಶಕ್ತಿಯನ್ನು ಕೊಂಡುಕೊಳ್ಳುವವರು ಬಂಡವಾಳಿಗರು. ತಮ್ಮ ಶ್ರಮಶಕ್ತಿಯನ್ನು ಬಂಡವಾಳಿಗರಿಗೆ ಮಾರುವವರು ಶ್ರಮಿಕರು ಅಥವಾ ಕಾರ್ಮಿಕರು.

ಶ್ರಮಿಕರು ಮತ್ತು ಬಂಡವಾಳಿಗರ ನಡುವೆ ನಡೆಯುವ ಶ್ರಮ ಮತ್ತು ಹಣದ ವಿನಿಮಯ, ಅಥವಾ ವ್ಯಾಪಾರದಲ್ಲಿ ಒಂದು ಅನ್ಯಾಯ ನಡೆಯುತ್ತದೆ.

ವಸ್ತು–ವಸ್ತುವಿನ ನಡುವೆ ಹಣದ ಮೂಲಕ ನಡೆಯುವ ವಿನಿಮಯದಲ್ಲಿ ಅಥವಾ ವ್ಯಾಪಾರದಲ್ಲಿ ಎರಡೂ ವಸ್ತುಗಳ ತಯಾರಿಕೆಗೆ ಅಗತ್ಯವಾದ ಶ್ರಮಕಾಲವು ಅಂದರೆ ಮೌಲ್ಯವು ಸರಿಸಮನಾಗಿರುತ್ತದೆ. ಆದರೆ ಶ್ರಮಶಕ್ತಿ ಮತ್ತು ಹಣದ ನಡುವೆ ನಡೆಯುವ ವಿನಿಮಯದಲ್ಲಿ, ಅಥವಾ ವ್ಯಾಪಾರದಲ್ಲಿ ಎರಡರ ಮೌಲ್ಯಗಳು ಸರಿಸಮನಾಗಿರುವುದಿಲ್ಲ. ಅಂದರೆ ಶ್ರಮಿಕರಿಗೆ ಬಂಡವಾಳಿಗರು ಕೊಡುವ ಹಣಕ್ಕಿಂತ ಶ್ರಮಿಕರಿಂದ ಬಂಡವಾಳಿಗರು ಪಡೆಯುವ ಶ್ರಮವು ಎರಡರಷ್ಟಿರುತ್ತದೆ. ಅಥವಾ ಅವರು ಪಡೆಯುವ ಶ್ರಮಕ್ಕಿಂತ ಕೊಡುವ ಹಣವು ಅರ್ಧದಷ್ಟಿರುತ್ತದೆ. ಹೇಗೇ ಆದರೂ ಎರಡರ ಮೌಲ್ಯಗಳು ಸರಿಸಮನಾಗಿರುವುದಿಲ್ಲ. ಆದ್ದರಿಂದ ಇದನ್ನು ವಿನಿಮಯ ಎನ್ನಲಾಗುವುದಿಲ್ಲ. ಇದನ್ನು ವ್ಯಾಪಾರ ಎಂದೂ ಕರೆಯಲಾಗುವುದಿಲ್ಲ. ಏಕೆಂದರೆ, ಬಂಡವಾಳಿಗರು ಹಣವನ್ನು ಕೊಟ್ಟು ಅದಕ್ಕೆ ಸರಿಸಮನಾದ ಮೌಲ್ಯದ ಶ್ರಮಿಕರ ಶ್ರಮಶಕ್ತಿಯನ್ನು ಕೊಳ್ಳುವ ಬದಲು ಹೆಚ್ಚುವರಿ ಮೌಲ್ಯವನ್ನು ಬಿಟ್ಟಿಯಾಗಿ ಕೊಡುವ ಅವರ ಶ್ರಮವನ್ನೇ ಪಡೆದುಕೊಳ್ಳುತ್ತಾರೆ. ಬಂಡವಾಳಿಗರು ಮತ್ತು ಶ್ರಮಿಕರ ನಡುವೆ ನಡೆಯುವ ಈ ಅನ್ಯಾಯದ ವ್ಯವಹಾರಕ್ಕೆ ಶೋಷಣೆ ಎಂದು ಹೆಸರು.

ಶ್ರಮಿಕರಿಂದ ಪಡೆದ ಬಿಟ್ಟಿ ಮೌಲ್ಯವನ್ನು ಬಂಡವಾಳಿಗರು ಮತ್ತಷ್ಟು ಸರಕುಗಳ ಉತ್ಪಾದನೆಯಲ್ಲಿ ಬಂಡವಾಳವಾಗಿ ತೊಡಗಿಸುತ್ತಾರೆ. ಲಾಭದ ಮೇಲೆ ಲಾಭ ಗಳಿಸುತ್ತಾರೆ. ಬಂಡವಾಳದ ನಿರಂತರ ವೃದ್ಧಿಯ, ಉದ್ಯಮಿಗಳ ಅಳತೆಮೀರಿದ ಶ್ರೀಮಂತಿಕೆಯ ರಹಸ್ಯ ಶ್ರಮಿಕರಿಂದ ಹಣಕೊಡದೆ

ಪುಟ 12 ಕ್ಕೆ





ಅಧಿಕಾರದ ಭಂಡ ದುರುಪಯೋಗ

ದಿಲ್ಲಿ ಪೊಲೀಸ್‌ನ ಅಪರಾಧ ಶಾಖೆ(ಕ್ರೈಮ್ ಬ್ರಾಂಚ್) ಒಂದು ಪಿತೂರಿ ಸಿದ್ಧಾಂತವನ್ನು ಸೃಷ್ಟಿಸಿದ್ದಾರೆ. ಇದು ಸಿಎಎ–ವಿರೋಧಿ ಪ್ರತಿಭಟನಾಕಾರರನ್ನು ಈಶಾನ್ಯ ದಿಲ್ಲಿಯಲ್ಲಿ ಫೆಬ್ರುವರಿ ಅಂತ್ಯದಲ್ಲಿ ನಡೆದ ಕೋಮುವಾದಿ ಹಿಂಸಾಚಾರದೊಂದಿಗೆ ತಳುಕು ಹಾಕುವ ಪ್ರಯತ್ನ ನಡೆಸಿದೆ. ಬಂಧನಗಳ ವಿಧಾನ, ಅವರ ವಿರುದ್ಧ ಕೇಸುಗಳು ಮತ್ತು ಆರೋಪ ಪಟ್ಟಿಗಳು ಅಮಿತ್ ಷಾ ರವರ ಗೃಹ ಮಂತ್ರಾಲಯದ ಆಶ್ರಯದಲ್ಲಿ ನಡೆಸಿರುವ ನಿಜವಾದ ಪಿತೂರಿಯನ್ನು ಹೊರಗೆಡಹುತ್ತಿವೆ.

ಜಾಮಿಯ ಮಿಲಿಯ ಇಸ್ಲಾಮಿಯ ವಿಶ್ವವಿದ್ಯಾಲಯದ ಹಲವು ವಿದ್ಯಾರ್ಥಿಗಳು ಮತ್ತು ಹಳೆ ವಿದ್ಯಾರ್ಥಿಗಳನ್ನು ಕೋಮು ಗಲಭೆಗಳನ್ನು ಪ್ರಚೋದಿಸುವ ಮತ್ತು ಯೋಜಿಸುವ ಆರೋಪಗಳ ಮೇಲೆ ಬಂಧಿಸಲಾಗಿದೆ. ಇವರಲ್ಲಿ ಕೆಲವರ ಮೇಲೆ ಯುಎಪಿಎ(ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ) ಅಡಿಯಲ್ಲಿ ಆರೋಪಗಳನ್ನು ಹಾಕಲಾಗಿದೆ. ಇದು ನಿವಾರಕ ಬಂಧನ ಕಾಯ್ದೆ, ಇದರಡಿಯಲ್ಲಿ ಆರೋಪಿಗೆ ಜಾಮೀನು ಸಿಗುವುದಿಲ್ಲ.

ಇದುವರೆಗೆ ಹಾಕಿರುವ ಒಂಭತ್ತು ಆರೋಪ ಪಟ್ಟಿಗಳಲ್ಲಿನ ಘಟನಾಕ್ರಮ ಹೀಗಿದೆ: ಜಾಮಿಯ ವಿಶ್ವವಿದ್ಯಾಲಯದ ಎದುರು ನಡೆದ ಸಿಎಇ–ವಿರೋಧಿ ಪ್ರತಿಭಟನೆಗಳು ಹಿಂಸಾತ್ಮಕವಾದವು, ಇದನ್ನು ಅನುಸರಿಸಿ ನಗರದ ವಿಭಿನ್ನ ಭಾಗಗಳಲ್ಲಿ, ಶಾಹೀನ್ ಬಾಗ್ ಮುಂತಾದೆಡೆಗಳಲ್ಲಿ ಪ್ರತಿಭನಡೆಗಳನ್ನು ಸಂಘಟಿಸಲಾಯಿತು, ಅವುಗಳಿಂದ ರಸ್ತೆಗಳನ್ನು ಅಡ್ಡಗಟ್ಟಲಾಯಿತು; ಜಫ್‌ರಾಬಾದ್‌ನಲ್ಲಿ ಹೆದ್ದಾರಿಯನ್ನು ಅಡ್ಡಗಟ್ಟು ನಡೆಸಿದ ಧರಣಿಯನ್ನು ಕೋಮುಗಲಭೆಗಳನ್ನು ಪ್ರಚೋದಿಸಲೆಂದೇ ಸಂಘಟಿಸಲಾಗಿತ್ತು. ಇಂತಹ ಒಂದು ಕಥನದಿಂದಲೇ ಜಾಮಿಯ ಸಮನ್ವಯ ಸಮಿತಿಯ ಕೆಲವು ಸದಸ್ಯರನ್ನು ಮತ್ತು ಜೆಎನ್‌ಯು ಮತ್ತಿತರ ಕಡೆಗಳ ಸಿಎಎ–ವಿರೋಧಿ ಕಾರ್ಯಕರ್ತರನ್ನು ಬಂಧಿಸಲಾಗಿದೆ. ಜೂನ್ 8ರಂದು ಕ್ರೈಮ್ ಬ್ರಾಂಚ್ ಸಲ್ಲಿಸಿರುವ ಆರೋಪ ಪಟ್ಟಿಗಳಲ್ಲಿ ನಾಲ್ಕು ಆರೋಪಿಗಳು "ಪೌರತ್ವ ತಿದ್ದುಪಡಿ ಕಾಯ್ದೆ(ಸಿಎಎ)ಯನ್ನು ಪ್ರಜಾಸತ್ತಾತ್ಮಕವಾಗಿ ವಿರೋಧಿಸುವ ವೇಷದಲ್ಲಿ ದೇಶದ ಪ್ರತಿಷ್ಠೆಗೆ ಕುಂದು ತರಲು ಕೋಮುಗಲಭೆಗಳನ್ನು ಸೃಷ್ಟಿಸುವ ಆಶಯದಿಂದ ಪಿತೂರಿ ನಡೆಸಿದ್ದಾರೆ" ಎಂದು ಹೇಳಲಾಗಿದೆ. ಹೆಡ್ ಕಾನ್‌ಸ್ಟೇಬಲ್ ರತ್ತನ್ ಲಾಲ್‌ರನ್ನು ಸಾಯಿಸಿದ ಪ್ರಕರಣದ ಆರೋಪ ಪಟ್ಟಿಯಲ್ಲಿ ಆರೋಪಿಗಳು ಸಿಎಎ ಕುರಿತು ಸುಳ್ಳುಮಾಹಿತಿಗಳನ್ನು ಹರಡಿದ "ಪಿತೂರಿಗಾರರ ಒಂದು ಜಾಲಕ್ಕೆ ಸೇರಿದವರು" ಎಂದು ಹೇಳಲಾಗಿದೆ.

ಫಿರ್ಯಾದಿ ಪಕ್ಷದ ಆಶಯ ಸ್ಪಷ್ಟವಾಗಿದೆ– ಸಿಎಎ ಗೆ ವಿರೋಧ ಎಂಬ ವೇಷ ತೊಡಿಸಿ ಕೋಮು ಹಿಂಸಾಚಾರವನ್ನು ಪ್ರಚೋದಿಸಲಾಗಿದೆ ಮತ್ತು ಯೋಜಿಸಲಾಗಿದೆ ಎಂದು ತೋರಿಸುವುದು. ಗೂಢಚರ್ಯೆ ಕಚೇರಿ (ಐಬಿ)ಯ ಸಿಬ್ಬಂದಿ ಅಂಕಿತ್ ಶರ್ಮರನ್ನು ಸಾಯಿಸಿದ ಪ್ರಕರಣದ ಘಟನಾಕ್ರಮದ ಅಡಿಯಲ್ಲಿ ಗಣ್ಯ ಮಾನವ ಹಕ್ಕುಗಳ ಕಾರ್ಯಕರ್ತ ಹರ್ಷ್ ಮಂದೆರ್ "ಶಾಂತಿ"ಯ ಒಂದು ಭಾಷಣ ಎಂಬ ನೆವದಲ್ಲಿ ಜಾಮಿಯ ಎದುರು ಒಂದು ಸಭೆಯನ್ನುದ್ದೇಶಿಸಿ ಮಾಡಿದ "ದ್ವೇಷ ಭಾಷಣ"ವನ್ನು ಪ್ರಸ್ತಾಪಿಸಲಾಗಿದೆ.



ಕೇಂದ್ರದಲ್ಲಿನ ಬಿಜೆಪಿ ಆಳುವ ಮಂದಿ ಪೋಲೀಸ್ ತನಿಖೆಗಳನ್ನು ಒಂದು ರಾಜಕೀಯ ಅಸ್ತ್ರವಾಗಿ ಬಳಸುತ್ತಿದ್ದಾರೆ. ಈ ಉದ್ದೇಶಕ್ಕಾಗಿ ಕೊವಿಡ್ ಮಹಾಮಾರಿಯನ್ನು ಮತ್ತು ಲಾಕ್‌ಡೌನನ್ನು ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ. ದಿಲ್ಲಿ ಪೋಲೀಸ್‌ನ ದುಷ್ಕೃತ್ಯಗಳು ಮತ್ತು ಯುಎಪಿಎ ಬಳಕೆಯನ್ನು ಒಂದು ಮಾರ್ಗಚ್ಯುತಿಯೆಂದಷ್ಟೇ ನೋಡುವುದು ಸಾಧ್ಯವಿಲ್ಲ. ಇದು ನಾಗರಿಕರ ಪ್ರಜಾಪ್ರಭುತ್ವ ಹಕ್ಕುಗಳ ಮೇಲೊಂದು ಗಂಭೀರ ಪ್ರಹಾರ ಮತ್ತು ಒಂದು ದ್ವೇಷಪೂರಿತ ಸರ್ವಾಧಿಕಾರಶಾಹಿಯ ಪ್ರದರ್ಶನವಾಗಿದೆ. ಇದು ಭಾರತದ ರಾಜಧಾನಿಯಲ್ಲಿ ನಡೆದಿದೆ, ಮತ್ತು ಇದನ್ನು ನಿರ್ದೇಶಿಸುತ್ತಿರುವವರು ಬೇರೆ ಯಾರೂ ಅಲ್ಲ, ಸ್ವತಃ ಭಾರತದ ಗೃಹಮಂತ್ರಿಗಳೇ. ಈ ಬೆಳವಣಿಗೆಯನ್ನು ನಿರ್ಲಕ್ಷಿಸುವುದೆಂದರೆ ಅದು ಎಲ್ಲ ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ಗಂಡಾಂತರ ತಂದುಕೊಂಡಂತೆಯೇ.



ಜಾಮಿಯ ವಿ.ವಿ. ಎದುರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತಾಡುತ್ತಿರುವ ಹರ್ಷ್ ಮಂದರ್

ಪ್ರಕಾಶ ಕಾರಟ್

ದ್ವೇಷ ಭಾಷಣಗಳ ಬಗ್ಗೆ ಹೇಳುವುದಾದರೆ, ದಿಲ್ಲಿ ಪೋಲೀಸ್ ಬಿಜೆಪಿ ಮುಖಂಡ ಕಪಿಲ್ ಮಿಶ್ರರವರ ವಿರುದ್ಧ ಎಫ್‌ಐಆರ್ ದಾಖಲಿಸಲು ಕೂಡ ನಿರಂತರವಾಗಿ ನಿರಾಕರಿಸುತ್ತ ಬಂದಿದೆ. ಈತ ಫೆಬ್ರುವರಿ 23ರಂದು ಅಧ್ಯಕ್ಷ ಟ್ರಂಪ್ ನಗರವನ್ನು ಬಿಟ್ಟ ಕ್ಷಣವೇ ಜಫರಾಬಾದ್‌ನ ಪ್ರತಿಭಟನಾಕಾರರನ್ನು ಎಬ್ಬಿಸಿ ಬಿಡಲು ಬಲಪ್ರಯೋಗದ ಬೆದರಿಕೆಯನ್ನು ಹಾಕಿದ್ದರು. ಆ ಭಾಷಣವನ್ನು ಆ ಪ್ರದೇಶದ ಡಿಸಿಪಿಯ ಸಮ್ಮುಖವೇ ಮಾಡಲಾಗಿತ್ತು.

ಹಿಂದೂಗಳು ಆರೋಪಿಗಳಾಗಿರುವ ಎರಡು ಕೊಲೆ ಪ್ರಕರಣಗಳಲ್ಲಿ ಫೆಬ್ರುವರಿ 24ರಂದು ಮುಸ್ಲಿಮರು ವ್ಯಾಪಕವಾಗಿ ಕೊಲೆ–ಸುಲಿಗೆಗಳಲ್ಲಿ ತೊಡಗಿದ್ದರು, ಇದಕ್ಕೆ ಪ್ರತಿಕ್ರಿಯೆಯಾಗಿ ಆರೋಪಿಗಳು ಹಿಂದಿರುಗಿ ಹೊಡೆದರು ಎನ್ನಲಾಗಿದೆ.

ಇದುವರೆಗೆ ಹಾಕಲಾಗಿರುವ ಕೇಸುಗಳ ಮತ್ತು ವಾದಗಳ ಏಕಪಕ್ಷೀಯತೆಯಿಂದಾಗಿ ಒಬ್ಬ ಜಾಮಿಯ ವಿದ್ಯಾರ್ಥಿಯನ್ನು ನ್ಯಾಯಾಂಗ ಕಸ್ಟಡಿಗೆ ಒಪ್ಪಿಸುವ ಕೇಸಿನ ವಿಚಾರಣೆಯಲ್ಲಿ ಒಂದು ಕೆಳ ನ್ಯಾಯಾಲಯದ ನ್ಯಾಯಾಧೀಶರು "ಕೇಸ್ ಡೈರಿಯನ್ನು ಪರಿಶೀಲಿಸಿದಾಗ ಒಂದು ಕಳವಳಕಾರಿ ಸಂಗತಿ ಹೊರಬರುತ್ತದೆ. ತನಿಖೆ ಒಂದು ತುದಿಯತ್ತ ಗುರಿಯಿಟ್ಟಿರುವಂತೆ ಕಾಣುತ್ತದೆ" ಎಂದು ಹೇಳುವಂತಾಗಿದೆ.

ಸಿಎಇ–ವಿರೋಧಿ ಪ್ರತಿಭಟನಾಕಾರರ ವಿರುದ್ಧ ಹಾಕಿದ ಕೆಲವು ಪ್ರಕರಣಗಳಲ್ಲಿ ಜಾಮೀನಿನ ವಿಷಯ ಬಂದಾಗ, ಯಾವುದೇ ಗಂಭೀರ ಅಪರಾಧ ಮಾಡಿದ್ದಾರೆ ಎಂದು ತೋರಿಸುವ ಸಂಗತಿಗಳೇನನ್ನೂ ಪ್ರಸ್ತುತ ಪಡಿಸಿಲ್ಲ ಎಂದು ಕೆಳ ನ್ಯಾಯಾಲಯಗಳ ಕೆಲವು ನ್ಯಾಯಾಧೀಶರುಗಳು ಟಿಪ್ಪಣಿ ಮಾಡಿದ್ದಾರೆ. ಇದು ಜೆಎನ್‌ಯು ಸಂಶೋಧನಾ ವಿದ್ಯಾರ್ಥಿಗಳಾದ ನತಾಶಾ ನರ್ವಲ್ ಮತ್ತು ದೇವಾಂಗನಾ ಕಲಿತಾ ರವರ ಕೇಸಿನಲ್ಲಿ ನಿಜವಾಗಿತ್ತು. ಇದರಲ್ಲಿ ಜಾಮೀನು ಸಿಕ್ಕ ಕೂಡಲೇ ಕ್ರೈಮ್ ಬ್ರಾಂಚ್ ಹೊಸ ಕೇಸುಗಳನ್ನು ಯುಎಪಿಎ ಅಡಿಯಲ್ಲಿ ಹಾಕಿತು. ಯುಎಪಿಎ ಯನ್ನು ಜೆಎನ್‌ಯು ವಿದ್ಯಾರ್ಥಿ ಶರ್ಜಿಲ್ ಇಸ್ಲಾಮ್, ಈ ಹಿಂದೆ ಜೆಎನ್‌ಯು ವಿದ್ಯಾರ್ಥಿಯಾಗಿದ್ದ ಉಮರ್‌ಖಾಲಿದ್, ಜಾಮಿಯ ಸಮನ್ವಯ ಸಮಿತಿಯ ಸದಸ್ಯರುಗಳಾದ ಸಫೂರ ಜರ್ಗರ್, ಮೀರಾನ್ ಹೈದರ್ ಮತ್ತು ಶಿಫಾ–ಉರ್–ರಹಮಾನ್, ಜೆಎನ್‌ಯು ನ ನತಾಶಾ ನರ್ವಲ್, ಇಷ್ರತ್ ಜಹಾನ್ ಮತ್ತಿತರರಿಗೂ ಅನ್ವಯಿಸಲಾಗಿದೆ. ಈ ಯಾರೂ ಕೋಮುವಾದಿ ಹಿಂಸಾಚಾರದಲ್ಲಿ ಯಾವ ಪಾತ್ರವನ್ನೂ ವಹಿಸಿರಲಿಲ್ಲ.

ಗೃಹ ಮಂತ್ರಾಲಯದ ನಿರೂಪಣೆಯ ಪ್ರಕಾರ ಸಿಎಎ/ಎನ್‌ಆರ್‌ಸಿಗೆ ವಿರೋಧ ಒಂದು ಕಾನೂನುಬಾಹಿರ ಚಟುವಟಿಕೆ. ಯುಎಪಿಎ ಯನ್ನು ಕಾನೂನುಬಾಹಿರ ಎಂದು ಘೋಷಿಸಿದ ಸಂಘಗಳು ಮತ್ತು ಸಂಘಟನೆಗಳಿಗೆ ಅನ್ವಯಿಸಲಾಗುತ್ತದೆ; ಅದು ಭಾರತದ ಸಾರ್ವಭೌಮತೆ ಮತ್ತು ಸಮಗ್ರತೆಯನ್ನು ಬಾಧಿಸುವ ಭಯೋತ್ಪಾದನೆ ಮತ್ತು ಪ್ರತ್ಯೇಕತಾವಾದಿ ಚಟುವಟಿಕೆಗಳನ್ನು ಎದುರಿಸುವುದಕ್ಕೆಂದು ತಂದಿರುವ ಕಾಯ್ದೆ. ಸಿಎಎ ವಿರುದ್ಧ ಪ್ರತಿಭಟನೆಯನ್ನು ಸಂಘಟಿಸುವುದು ಒಂದು ಬುಡಮೇಲು ಮತ್ತು ಭಯೋತ್ಪಾದನಾ ಅಪರಾಧ ಎಂದು ಪರಿಗಣಿಸಿರುವಂತೆ ಕಾಣುತ್ತದೆ.


ಈ ವಿಷಯದಲ್ಲಿ ಯುಎಪಿಎ ಬಳಕೆ ಅಧಿಕಾರದ ಪಕ್ಕಾ ದುರುಪಯೋಗ ಮತ್ತು ನಾಗರಿಕರ ಹಕ್ಕುಗಳ ಸಂಪೂರ್ಣ ಉಲ್ಲಂಘನೆಯಾಗಿದೆ. ಸಫೂರಾ ಜರ್ಗರ್‌ರವರನ್ನು ಯುಪಿಎ ಯಲ್ಲಿ ಬಂಧನದಲ್ಲಿ ಇಟ್ಟಿರುವದಂತೂ ಅತ್ಯಂತ ದೂಷಣಾರ್ಹ ಸಂಗತಿ. ಆಕೆ ಗರ್ಭಿಣಿ ಮತ್ತು ಕೊವಿಡ್ ಮಹಾಮಾರಿ ಹರಡುತ್ತಿರುವ ಸಮಯದಲ್ಲಿ ಜೈಲಿನಲ್ಲಿದ್ದಾರೆ. ದುರದೃಷ್ಟವಶಾತ್, ಯುಎಪಿಎ ಯ ಈ ಭಂಡ ದುರುಪಯೋಗವನ್ನು ನ್ಯಾಯಾಂಗ ಪ್ರಶ್ನಿಸುತ್ತಿಲ್ಲ.

ಸಿಎಎ–ಎನ್‌ಆರ್‌ಸಿಗೆ ವಿರೋಧಕ್ಕಾಗಿ ಅವರನ್ನು ಯುಪಿಎ ಅಡಿಯಲ್ಲಿ ಬಂಧಿಸಿರುವುದು ಅವರನ್ನೆಲ್ಲ ರಾಜಕೀಯ ಬಂಧಿಗಳಾಗಿ ಮಾಡುತ್ತದೆ. ಭೀಮ ಕೊರೆಗಾಂವ್ ಪ್ರಕರಣದಲ್ಲೂ ಇದೇ ತಂತ್ರವನ್ನು ಅಂಗೀಕರಿಸಲಾಗಿತ್ತು, ಅದರಲ್ಲಿ ಸುಧಾ ಭಾರದ್ವಾಜ್, ಆನಂದ್ ತೇಲ್ತುಂಬ್ಡೆ, ಗೌತಮ್ ನವ್ಲಖ ಮತ್ತಿತರರನ್ನು ಸುಳ್ಳು ಸಾಕ್ಷ್ಯ ಅಥವ ಸಾಕ್ಷ್ಯವೇ ಇಲ್ಲದೆ, ಕೇವಲ ಅಧಿಕಾರಸ್ಥರ ಬಗ್ಗೆ ಅವರ ತೀವ್ರಗಾಮಿ ವಿರೋಧದ ದಾಖಲೆಯ ಮೇಲಷ್ಟೇ ಯುಎಪಿಎ ಅಡಿಯಲ್ಲಿ ಜೈಲುಗಳಲ್ಲಿ ಇಡಲಾಗಿದೆ.

ದಿಲ್ಲಿಯ ರಾಜಕೀಯ ಕಾರ್ಯಕರ್ತರ ಬಂಧನ ದಿಲ್ಲಿ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿಯ ತೀವ್ರ ಪರಾಭವದ ನಂತರ ಬಂದಿದೆ. ಪ್ರಚಾರದ ವೇಳೆಯಲ್ಲಿ ಬಿಜೆಪಿ ಆಳುವ ಮಂದಿ ಅತ್ಯಂತ ದುಷ್ಟ ಮುಸ್ಲಿಂ–ವಿರೋಧಿ ಅಬ್ಬರದಲ್ಲಿ ತೊಡಗಿದ್ದರು. ಕೇಂದ್ರದಲ್ಲಿನ ಬಿಜೆಪಿ ಆಳುವ ಮಂದಿ ಪೋಲೀಸ್ ತನಿಖೆಗಳನ್ನು ಅಲ್ಪಸಂಖ್ಯಾತರ ವಿರುದ್ಧ ಮತ್ತು ಬಿಜೆಪಿಯ ಕೋಮುವಾದಿ ಆಟವನ್ನು ವಿರೋಧಿಸುವವರ ವಿರುದ್ಧ ಒಂದು ರಾಜಕೀಯ ಅಸ್ತ್ರವಾಗಿ ಬಳಸುತ್ತಿದ್ದಾರೆ. ಈ ಉದ್ದೇಶಕ್ಕಾಗಿ ಕೊವಿಡ್ ಮಹಾಮಾರಿಯನ್ನು ಮತ್ತು ಲಾಕ್‌ಡೌನನ್ನು ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ.

ದಿಲ್ಲಿ ಪೋಲೀಸ್‌ನ ದುಷ್ಕೃತ್ಯಗಳು ಮತ್ತು ಯುಎಪಿಎ ಬಳಕೆಯನ್ನು ಒಂದು ಮಾರ್ಗಚ್ಯುತಿಯೆಂದಷ್ಟೇ ನೋಡುವುದು ಸಾಧ್ಯವಿಲ್ಲ. ಇದು ನಾಗರಿಕರ ಪ್ರಜಾಪ್ರಭುತ್ವ ಹಕ್ಕುಗಳ ಮೇಲೊಂದು ಗಂಭೀರ ಪ್ರಹಾರ ಮತ್ತು ಒಂದು ದ್ವೇಷಪೂರಿತ ಸರ್ವಾಧಿಕಾರಶಾಹಿಯ ಪ್ರದರ್ಶನವಾಗಿದೆ. ಇದು ಭಾರತದ ರಾಜಧಾನಿಯಲ್ಲಿ ನಡೆದಿದೆ, ಮತ್ತು ಇದನ್ನು ನಿರ್ದೇಶಿಸುತ್ತಿರುವವರು ಬೇರೆ ಯಾರೂ ಅಲ್ಲ, ಸ್ವತಃ ಭಾರತದ ಗೃಹಮಂತ್ರಿಗಳೇ.

ಈ ಬೆಳವಣಿಗೆಯನ್ನು ನಿರ್ಲಕ್ಷಿಸುವುದೆಂದರೆ ಅದು ಎಲ್ಲ ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ಗಂಡಾಂತರ ತಂದು ಕೊಂಡಂತೆಯೇ. ಮುಂಬರುವ ದಿನಗಳಲ್ಲಿ ಅನ್ಯಾಯಕಾರಿ ಕಾನೂನುಗಳ ವಿರುದ್ಧ ಮತ್ತು ಸಂವಿಧಾನ ಕೊಟ್ಟಿರುವ ಮೂಲಭೂತ ಹಕ್ಕುಗಳ ರಕ್ಷಣೆಯ ಹೋರಾಟವನ್ನು ಯಾವುದೇ ರೀತಿಯಲ್ಲಿ ಸಡಿಲಗೊಳಿಸುವುದಿಲ್ಲ ಎಂಬುದು ಮೋದಿ ಸರಕಾರಕ್ಕೆ ಗೊತ್ತಿರಬೇಕು.



ದಿಲ್ಲಿ ಗಲಭೆಗೂ, ಮಹಾಮಾರಿಗೂ, ಆನೆ ಸಾವಿಗೂ ಎಲ್ಲದಕ್ಕೂ ಒಬ್ಬರೇ ಕಾರಣ.
"ನನ್ನನ್ನು ಗುರುತಿಸಬಲ್ಲಿರಾ? ಹಿಂಟ್: ನನ್ನ ಉಡುಪು"
ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಂಸ್ ಆಫ್ ಇಂಡಿಯ

ಪ್ರಧಾನಿ ಅವರಿಂದ ಹಿಡಿದು ಸ್ಥಳೀಯ ಪುಡಾರಿಯ ವರೆಗೆ ಎಲ್ಲರೂ ಕರೋನಾ ಒಂದು ಯುದ್ಧ ಎಂದೂ, ಅದರ ಮುಂಚೂಣಿಯಲ್ಲಿರುವ ವೈದ್ಯಕೀಯ ಮತ್ತಿತರ ಸಿಬ್ಬಂದಿ, ಕರೋನಾ ವಿರುದ್ಧ ಹೋರಾಡುತ್ತಿರುವ ಯೋಧರೆಂದೂ ಹಾಡಿ ಹೊಗಳುತ್ತಾ ಬಂದಿದ್ದಾರೆ. ಅವರ ಮೇಲೆ ಮಾತುಗಳ ಹೂವುಗಳ ಮಳೆಗರೆಯುತ್ತಾ ಬಂದಿದ್ದಾರೆ. ಆದರೆ ಭಾವನಾತ್ಮಕ ಮಾತಾಡುವ ನಾಯಕರು ಅವರಿಗೆ ಅಗತ್ಯ ಭೌತಿಕ ಬೆಂಬಲ ನೀಡಿದ್ದಾರೆಯೇ? ಈ ಕರೋನಾ ವಾರಿಯರ್ಸ್ ಗಳ ನಿಜವಾದ ಕಥೆಯೇನು? ವ್ಯಥೆಯೇನು? ಈ ವಾರಿಯರ್ಸ್ ಗಳು ಸರಿಯಾದ ವೇತನ ಇಲ್ಲದೆ, ಇದ್ದ ವೇತನ ಪಾವತಿಯಾಗದೆ, ಸೂಕ್ತ ರಕ್ಷಣಾ ಉಪಕರಣಗಳಿಲ್ಲದೆ, ಕನಿಷ್ಟ ದೈಹಿಕ ರಕ್ಷಣೆಯಿಲ್ಲದೆ ಸಾಯುತ್ತಿರುವುದು, ಸತ್ತಾಗ ವಿಮೆ-ಪರಿಹಾರ ಸಹ ಒದಗಿಸದೆ ಇರುವುದರತ್ತ ಗಮನ ಸೆಳೆಯುವ ಸರಣಿ ಲೇಖನ. ಈ ವಾರಿಯರ್ಸ್ ಗಳ ಗಮನಾರ್ಹ ಭಾಗವಾದ ಸ್ಕೀಂ ಮತ್ತಿತರ ಕಾರ್ಮಿಕರ ನಾಯಕರಾದ ಮತ್ತು ರಾಜ್ಯ ಸಿಐಟಿಯು ಅಧ್ಯಕ್ಷರಾದ ಎಸ್.ವರಲಕ್ಷ್ಮಿ ಅವರಿಂದ. ಈ ಮೊದಲ ಭಾಗದಲ್ಲಿ ಈ ಯುದ್ಧದಲ್ಲಿ ಸಾವು-ನೋವುಗಳಿಗೆ ಬಲಿಯಾದ ವಾರಿಯರ್ಸ್ ಮತ್ತು ಅವರಿಗೆ ಯಾವುದೇ ಘೋಷಿತ ಅಥವಾ ಬೇರೆ ಪರಿಹಾರ ಸಿಗದ ನಿರ್ದಿಷ್ಟ ಉದಾಹರಣೆಗಳು ಇವೆ. ವಾರಿಯರ್ಸ್ ಅಂದರೆ ಯಾರೆಲ್ಲ ಅದರಲ್ಲಿ ಸೇರ್ತಾರೆ? ಅವರ ಪಾತ್ರವೇನು ಎಂಬುದರ ಕುರಿತು ಇದೆ.

ಕರೋನಾ ಫ್ರಂಟ್ ಲೈನ್ ವಾರಿಯರ್ಸ್ ಗಳ ನಿಜ ಕಥೆ-ವ್ಯಥೆ: ಭಾಗ-1



ಅಂದು ಲಾಕ್ ಡೌನ್ ಆಗಿದ್ದರಿಂದ ಸಹಜವಾಗಿ ನಾನು ಅಡುಗೆ ತಯಾರಿಯ ಕೆಲಸದಲ್ಲಿದ್ದೆ. ಇದ್ದಕ್ಕಿದ್ದಂತೆ ಬೆಂಗಳೂರು ಮಿರರ್, ಸುವರ್ಣ ಟಿವಿ, ಟಿವಿ 9 ಮುಂತಾದ ಮಾಧ್ಯಮಗಳ ಪತ್ರಕರ್ತರು ಒಂದೇ ಸಮನೇ ಫೋನ್ ಮಾಡುತ್ತಿದ್ದರು.

ಅವರೆಲ್ಲರೂ ಸಂಪರ್ಕಿಸಲು ಪ್ರಯತ್ನಿಸುತಿದ್ದದ್ದು ಬೆಂಗಳೂರಿನ ಸಾದಿಕ್ ನಗರದಲ್ಲಿ ಆಶಾ ಕಾರ್ಯಕರ್ತೆ ಕೃಷ್ಣವೇಣಿಯವರ ಮೇಲೆ ನಡೆದ ಹಲ್ಲೆಯ ಕುರಿತು. ಕೃಷ್ಣವೇಣಿ ಕರೋನಾ ಸಂಬಂಧಿತ ಮಾಹಿತಿ ಸಂಗ್ರಹ ಮಾಡಲು ಹೋದಾಗ ಅಲ್ಲಿಯ ಸ್ಥಳೀಯರು ಅವರ ಮೊಬೈಲ್ ಮತ್ತು ರೆಕಾರ್ಡ್ಸ್ ಗಳನ್ನು ಕಿತ್ತುಕೊಂಡಿದ್ದರು. ಜನರು ಗುಂಪು ಗುಂಪಾಗಿ ಇವರನ್ನು ಸುತ್ತುವರೆದಿದ್ದರು. ನಂತರ ಅವರ ಜೊತೆಯಲ್ಲಿದ್ದ ನರ್ಸ್ ಬ್ರದರ್ ಕೂಡಲೇ ಮೇಲಾಧಿಕಾರಿಗಳಿಗೆ ತಿಳಿಸಿದರು. ಅವರು ಕೂಡಲೇ ಸ್ಥಳಕ್ಕೆ ಧಾವಿಸಿ ಸಾರ್ವಜನಿಕರನ್ನು ಸಮಾಧಾನಪಡಿಸಿ ಅವರ ವಶದಲ್ಲಿದ್ದ ಮೊಬೈಲ್ ಮತು ರೆಕಾರ್ಡ್ಸ್‌ಗಳನ್ನು ಹಿಂಪಡೆಯಲಾಯಿತು. ಆದರೆ ಈ ಘಟನೆಯನ್ನು ಮತೀಯ ಆಧಾರದಲ್ಲಿ ತಿರುಚುವ ಪ್ರಯತ್ನ ನಡೆಯಿತು. ಸಾಮಾಜಿಕವಾಗಿ ಆರ್ಥಿಕವಾಗಿ ದುರ್ಬಲರಾಗಿರುವ ಮಹಿಳೆಯರ ಮೇಲೆ ಈ ರೀತಿಯ ಹಲ್ಲೆ ಮಾಡಿರುವುದು ಸರಿಯಲ್ಲ ಎಂದು ಖಂಡಿಸಲಾಯಿತು. ಕೂಡಲೇ ಆರೋಪಿಗಳ ಮೇಲೆ ಕೇಸು ದಾಖಲಾಗಬೇಕೆಂದು ಆಗ್ರಹಿಸಲಾಯಿತು.

ನಂತರ ಶಿಡ್ಲಘಟ್ಟದಿಂದ ಲಕ್ಷ್ಮಿದೇವಿಯವರು ಪೋನ್ ಮಾಡಿದರು. ಲಾಕ್ ಡೌನ್ ನಿಂದಾಗಿ ಅಂಗನವಾಡಿ ಕೇಂದ್ರಗಳನ್ನು ಮುಚ್ಚಿ, ಪೌಷ್ಟಿಕ ಆಹಾರ ಸಾಮಗ್ರಿಗಳನ್ನು ಮಕ್ಕಳಿಗೆ ಗರ್ಭಿಣಿ-ಬಾಣಂತಿಯರಿಗೆ ಮನೆಗಳಿಗೆ ಹೋಗಿ ಹಂಚಬೇಕೆಂಬ ನಿರ್ದೇಶನ ಮಹಿಳಾ ಮತ್ತು ಮಕ್ಕಳಾಭಿವೃದ್ಧಿ ಇಲಾಖೆಯಿಂದ ಇದ್ದುದರಿಂದ, ಅಂಗವಾಡಿ ಕಾರ್ಯಕರ್ತೆಯರು ಆಹಾರ ಸಾಮಗ್ರಿಗಳನ್ನು ಮನೆಗಳಿಗೆ ಒಯ್ದು ಕೊಡುತ್ತಿದ್ದರು. ಹೀಗೆ ಹೋಗುತ್ತಿದ್ದಾಗ ನೀವು ಕಳ್ಳತನದಿಂದ ಮನೆಗೆ ಸಾಗಿಸುತ್ತಿದ್ದೀರಿ ಎಂದು ಶಿಡ್ಲಘಟ್ಟ ತಾಲ್ಲೂಕಿನ ಸಾಧಲ್ಲಿ ಗ್ರಾಮದಲ್ಲಿ ಅಂಗನವಾಡಿ ಕಾರ್ಯಕತೆಯನ್ನು ಪಂಚಾಯಿತಿ ಮುಂದೆ ನಿಲ್ಲಿಸಲಾಯಿತು. ಅದೇ ತಾಲ್ಲೂಕಿನ ಕೋದಹಳ್ಳಿಯ ಅಂಗನವಾಡಿ ಕಾರ್ಯಕರ್ತೆ ಪಿಳ್ಳಮ್ಮ ಮತ್ತು ಆಶಾ ಕಾರ್ಯಕರ್ತೆ ಅನುಸೂಯರವರು ಕುಡುಚಿ ಗ್ರಾಮಕ್ಕೆ ಸರ್ವೇಗೆ ಹೋದಾಗ ಅಲ್ಲಿಯ ದಲಿತಕೇರಿಯ ಜನ ಇವರಿಗೆ ಬೈದಾಡಿ ಊರಿಂದಾಚೆ ಹೋಗುವ ಹಾಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ತಕ್ಷಣವೇ ಕಾರ್ಯಕರ್ತೆಯರು ಸ್ಥಳೀಯ ಪೋಲೀಸ್ ಠಾಣೆಗೆ ದೂರು ನೀಡಿದರು ಮಾರನೇ ದಿನ ಈ ಕಾರ್ಯಕರ್ತೆಯರ ಮೇಲೆಯೇ 'ಅಸ್ಪೃಶ್ಯತಾ' (ಅನ್ ಟಚೆಬಿಲಿಟಿ) ದೂರು ದಾಖಲಿಸಿ ಇವರ ಮೇಲೆ FIR ಹಾಕುತ್ತಿದ್ದೇವೆ ಎಂದು ಪೋಲೀಸರು ಠಾಣೆಗೆ ಈ ಕಾರ್ಯಕರ್ತೆಯರನ್ನು ಕರೆಸಿದ್ದಾರೆ. ನಂತರ ಸಂಘಟನೆ ಮತ್ತು ಅಧಿಕಾರಿಗಳು ಮಧ್ಯ ಪ್ರವೇಶ ಮಾಡಿ FIR ಹಾಕದಂತೆ ಮಾಡಲಾಯಿತು. ಅಂದರೆ ಕರೋನಾ ಕೆಲಸಕ್ಕೆ ಹೋದವರ ಮೇಲೆಯೇ FIR.

ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ಬಿದರಳ್ಳಿ ತಾಂಡದಲ್ಲಿ ಸರ್ವೇಗೆ ಹೋದಗ ಶಶಿಕಲಾ ಎಂಬ ಮಿನಿ ಅಂಗನವಾಡಿ ಕಾರ್ಯಕರ್ತೆಯ ಮೇಲೆ ಅತ್ಯಂತ ಕ್ರೂರವಾಗಿ ಧಾಳಿ ನಡೆಸಿದ್ದಾರೆ. ಅವರಿಗೆ ಬೈಯ್ದು ಹೊಡೆದು ಬಟ್ಟೆ ಚಿಚ್ಚಲು ಪ್ರಯತ್ನಸಿದಾಗ ಕಾರ್ಯಕರ್ತೆ ತನ್ನ ಮನೆಗೆ ಓಡಿ ಹೋಗಿದ್ದಾಳೆ. ಮನೆಗೂ ನುಗ್ಗಿ ಆಕೆಯ ಮಗುವಿಗೆ ಒಡೆದು ಆಕೆಯ ಮೊಲೆಗಳನ್ನು ಕಚ್ಚಿದ್ದಾರೆ. ನಂತರ ಆಕೆ ಆಸ್ಪತ್ರೆಗೆ ದಾಖಲಾಗಿದ್ದಾರೆ. ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಮಾನ್ಯ ವಿಜಯ ಭಾಸ್ಕರ್‌ಅವರ ಮೇಲೆ ಸಂಘಟನೆ ಯಿಂದ ಹಾಕಿದ ಒತ್ತಡದ ನಂತರ ಈಖಖ ಆಗಿದೆ. ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಭೇಟಿ ಆರೋಪಿಗಳನ್ನು ಬಂಧಿಸಿ ಬಿಡುಗಡೆ ಮಾಡಿದ್ದಾರೆ. ಆದರೆ ಶಶಿಕಲಾ ಇನ್ನೂ ಎದೆನೋವಿನಿಂದ ಬಳಲುತ್ತಲೇ ಇದ್ದಾರೆ.

ಬೆಳಗಾಂ ಜಿಲ್ಲೆಯ ಹಿರೆ ಬಾಗೇವಾಡಿ ಗ್ರಾಮದಲ್ಲಿ 52 ವರ್ಷದ ಸರೋಜಿನಿ ಚಂದ್ರೇಗೌಡ ಪಡೀ ಪಾಟೀಲ್ ಮತ್ತು 39 ವರ್ಷದ ರೇಣುಕಾ ಭರಂಗೌಡ ಎಂಬ ಇಬ್ಬರು ಅಂಗನವಾಡಿ ಕಾರ್ಯಕರ್ತೆಯರು ಕರೋನಾ ಸೋಂಕು ತಗುಲಿ ಕ್ವಾರೆಂಟೈನ್‌ಗೆ ಒಳಪಡುವಂತಾಯಿತು. ಲಾಕ್ ಡೌನ್ ಸಂಧರ್ಭದಲ್ಲಿ ಮದ್ಯಪಾನ ಮಾಡಲು ಸರ್ಕಾರ ಅವಕಾಶ ಕೊಟ್ಟನಂತರ, ಶಿಡ್ಲಘಟ್ಟ ತಾಲ್ಲೂಕಿನ ರಂಗಹಳ್ಳಿಯ ಆಶಾ ಕಾರ್ಯಕರ್ತೆ ರಮಣಮ್ಮ ರವರು ಪೂಲಕುಂಟಳ್ಳಿ ಯಲ್ಲಿ ಸರ್ವೇಗೆ ಹೋದಾಗ ಕೆಲವು ಪೋಕರಿಗಳು ಪಾನಮತ್ತರಾಗಿ ಆಶಾ ಕಾರ್ಯಕರ್ತೆ ಮೇಲೆ ದೈಹಿಕ ಹಲ್ಲೆ ಮಾಡಿದರು. ಸಾರಿಗೆ ವ್ಯವಸ್ಥೆ ಇಲ್ಲದ್ದರಿಂದ ಅವರ ಗಂಡಾನೇ ಸ್ಕೂಟರ್ ಮೇಲೆ ಕರೆದು ಕೊಂಡು ಹೋಗಿದ್ದಾರೆ. ಅವರನ್ನು ತಡೆಯಲು ಹೋದ ಅವರ ಗಂಡನ ಮೇಲೆ ಮರಾಂಣಾಂತಿಕ ಹಲ್ಲೆ ಮಾಡಿದ್ದರು. ಇಬ್ಬರೂ ಕೂಡಾ ಚಿಂತಾಮಣಿ ಆಸ್ಪತ್ರೆಯಲ್ಲಿ 4 ದಿನ ಇದ್ದರು.

ಬಳ್ಳಾರಿ ತಾಲ್ಲೂಕಿನ ಬಾದನಹಟ್ಟಿ ಗ್ರಾಮದ ಆಶಾ ಕಾರ್ಯಕರ್ತೆ ಸಾಕಮ್ಮ (ಭೀಮಕ್ಕ) ಎಂಬುವವರು ಸರ್ವೆ ಕೆಲಸ ಮಾಡುವಾಗ ಸುಸ್ತಾಗಿ ನೆಲಕ್ಕೆ ಬಿದ್ದಿದ್ದಾರೆ. ಅಕ್ಕಪಕ್ಕದವರು ಬಂದು ನೀರು ಕುಡಿಸಿ ಅವರ ಮನೆಗೆ ಬಿಟ್ಟಿದ್ದಾರೆ. ಆದರೆ ಜಿಲ್ಲಾ ಆಸ್ಪತ್ರೆಗೆ ಹೋಗಲು ಸಾರಿಗೆ ಇಲ್ಲದ್ದರಿಂದ ಸ್ಥಳೀಯವಾಗಿ ಔಷಧಿ ತೆಗೆದುಕೊಂಡು ಸುಮ್ಮನಾಗಿದ್ದರು. ಮಾರನೇ ದಿನ ಪುನಃ ಕೆಲಸಕ್ಕೆ ಹೋಗಬೇಕೆಂದೂ ತಯಾರಿ ಮಾಡಿಕೊಂಡು ಹೊರಡುವಷ್ಟರಲ್ಲಿ ತೀವ್ರ ಭೇಧಿಯಾಗಿ ಕುಸಿದಿದ್ದಾರೆ. ನಂತರ 108 ಅಂಬ್ಯೂಲೆನ್ಸ್‌ನಲ್ಲಿ ಜಿಲ್ಲಾಸ್ಪತ್ರೆಗೆ ಹೋಗುವ ಸಂದರ್ಭದಲ್ಲಿ ನಿಧನರಾಗಿದ್ದಾರೆ. ನಂತರ ಇವರು ಹೇಗೆ ಸತ್ತರು ಎಂದು ತಿಳಿದು ಕೊಳ್ಳಲು 3 ದಿನ ಆ ಶವ ಬಳ್ಳಾರಿಯ ಆಸ್ಪತ್ರೆಯಲ್ಲೇ ಇಟ್ಟು ಕೊಂಡಿದ್ದಾರೆ.

ಜಿಲ್ಲಾಡಳಿತ ಈ ಸಾವನ್ನು ಸಹಜ ಸಾವು ಎಂದು ಪರಿಗಣಿಸಲು ಪ್ರಯತ್ನಿಸಿದಾಗ ಸಂಘಟನೆ ಮಧ್ಯ ಪ್ರವೇಶಿಸಿ ಕರೋನಾ ವಾರಿಯರ್ಸ್‌ಗೆ ಕೆಲಸದ ಅವಧಿಯೇ ಇಲ್ಲವೆಂದೂ ವಾದಿಸಿ ಈಗ 50 ಲಕ್ಷ ವಿಮೆಗೆ ಪರಿಹಾರಕ್ಕೆ ಮನವಿ ಕಳುಹಿಸಲಾಗಿದೆ. ದೊಡ್ಡ ಪ್ರಮಾಣದಲ್ಲಿ ಆಶಾ ಕಾರ್ಯಕರ್ತೆಯರನ್ನು ಹೊಗಳುವ ಯಾರೂ ಕೂಡಾ ಅವರ ಕುಟುಂಬಕ್ಕೆ 50 ಸಾವಿರ ರೂಪಾಯಿಗಳನ್ನು ಕೊಡಲಿಲ್ಲ.

ಬಾದಮಿ ತಾಲ್ಲೂಕಿನ ನಂದೀಕೇಶ್ವರ ಗ್ರಾಮದ ಅಂಗನವಾಡಿ ಕಾರ್ಯಕರ್ತೆ 35 ವರ್ಷಗಳಿಂದ ದುಡಿಯುತ್ತಿದ್ದರು. ಕರೋನಾ ಕೆಲಸಕ್ಕೆ ಬಾದಮಿ ನಗರಕ್ಕೆ ಹೋಗುವಾಗ ಸ್ಕೂಟರ್ ಅಪಘಾತವಾಗಿ ತಲೆಗೆ ತೀವ್ರ ಪೆಟ್ಟು ಬಿದ್ದು ಬಾಗಲಕೋಟೆ ಜಿಲ್ಲಾಸ್ಪತ್ರೆಯಲ್ಲಿ ನಿಧನರಾದರು. ಇವರಿಗೆ 4 ಜನ ಹೆಣ್ಣು ಮಕ್ಕಳು. ಇವರಿಗೆ ಕರೋನಾ ವಿಮಾಹಣ 30 ಲಕ್ಷ ಮಾತ್ರ. ಇದು ಕೂಡಾ ಅಪಘಾತವಾಗಿ ಸತ್ತರೆ ಕೊಡಬೇಕೆಂಬ ನಿರ್ದೇಶನ ಈಗಿರುವ ಸರ್ಕಾರಿ ಆದೇಶದಲ್ಲಿಲ್ಲ. ಆದೇಶವನ್ನು ತಿದ್ದುಪಡಿ ಮಾಡಿ ಇವರಿಗೆ ಪರಿಹಾರ ಕೊಡಬೇಕೆಂದೂ ಸಂಘಟನೆಯಿಂದ ಮಧ್ಯಪ್ರವೇಶ ಮಾಡಲಾಗಿದೆ.

ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಮಗನಗೆರೆ ಪಿ.ಹೆಚ್.ಸಿ ಶಾರದಾ ಎಂಬುವವರು ಸರ್ವೆ ಮಾಡುವ ಸಂದರ್ಭದಲ್ಲಿ ಮೃತಪಟ್ಟಿದ್ದಾರೆ.

ಆಳಂದ ತಾಲ್ಲೂಕಿನ ಕಿಣ್ಣಿಅಬ್ಬಾಸ ಗ್ರಾಮದಲ್ಲಿ ಕ್ವಾರೈಂಟನ್‌ನಲ್ಲಿದ್ದವರಿಗೆ ಚಿಕನ್ ಕೊಡಲಿಲ್ಲವೆಂದೂ ಅಮಾನವೀಯವಾಗಿ ವರ್ತಿಸಿ ರೇಣುಕಾ ನಾಗಪ್ಪ ಕುಡತಿ ಎಂಬ ಆಶಾ ಕಾರ್ಯಕರ್ತೆಯ ಕೈ ಮೂಳೆ ಮುರಿಯುವ ಹಾಗೆ ದಾಳಿ ಮಾಡಿದ್ದಾರೆ.

ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನಲ್ಲಿ 35 ವರ್ಷದ ಮಹೇಂದ್ರಾ ಅವರು 10 ವರ್ಷಗಳಿಂದ ಎನ್.ಹೆಚ್.ಹೆಮ್ ನಲ್ಲಿ ಕಿರಿಯ ಆರೋಗ್ಯ ಸಹಾಯಕರಾಗಿ ದುಡಿಯುತ್ತಿದ್ದರು. ಮೇ 27 ರಂದು ಸರ್ವೆಗೆ ಮನೆಯಿಂದ ಮನೆಗೆ ಹೊಗುವಾಗ ಸ್ಕೂಟರ್ ಅಪಘಾತವಾಗಿ ಜೂನ್ 6 ರಂದು ನಿಧನರಾಗಿದ್ದಾರೆ.

ತಿಪಟೂರು ತಾಲ್ಲೂಕಿನ ಹುಣಸೇ ಪಿಟ್ಟು ಗ್ರಾಮ ಪಂಚಾಯ್ತಿಯ ಬಿಲ್ ಕಲೆಕ್ಟರ್ ದಕ್ಷಿಣ ಮೂರ್ತಿ ಮತ್ತು ವಾಟರ್ ಮ್ಯಾನ್ ಆ ದಿನದಂದು ಕರೋನಾಗೋಸ್ಕರ ಲಾಕ್ ಡೌನ್ ಮಾಡಿಸಿ ಹಿಂತಿರುಗುವಾಗ ಸ್ಕೂಟರ್ ಅಪಘಾತವಾಗಿ ದಕ್ಷಿಣ ಮೂರ್ತಿ ಅಲ್ಲಿಯೇ ತೀರಿ ಕೊಂಡಿದ್ದಾರೆ.

ವಾಟರ್ ಮ್ಯಾನ್ ರವರು 2 ತಿಂಗಳಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರ ಆಸ್ಪತ್ರೆ ಬಿಲ್ ರೂ. 2.5 ಲಕ್ಷವಾಗಿದೆ. ಆದರೆ ಇದುವರೆಗೂ ಇವರ್‍ಯಾರಿಗೂ ಪರಿಹಾರವೇ ಸಿಕ್ಕಿಲ್ಲ.

ಮುನ್ಸಿಪಲ್ ನೌಕರರಾದ 54 ವರ್ಷದ ವೆಂಕಟಾಚಲಯ್ಯ ತುಮಕೂರಿನ ಬಟವಾಡೆ ಪ್ರದೇಶದಲ್ಲಿ ನೀರು ಬಿಡುವಾಗ ತೀವ್ರ

ಪುಟ 15 ಕ್ಕೆ





ರಮಣಮ್ಮ,
ಆಶಾ ಕಾರ್ಯಕರ್ತೆ, ಶಿಡ್ಲಘಟ್ಟ



ಮಹೇಂದ್ರ,
ಕಿರಿಯ ಆರೋಗ್ಯ ಸಹಾಯಕ, ಶಿರಾ

ಮಂದಾ,
ಅಂಗನವಾಡಿ ಕಾರ್ಯಕರ್ತೆ, ಬೆಳಗಾವಿ



ಪದ್ಮಾವತಿ,
ಬಾದಾಮಿ




ಉಮೇಶ,
108 ಅಂಬಲುಲೆನ್ಸ್ ನೌಕರ, ನರಗುಂದ

ಕೇಂದ್ರ ಸರಕಾರದ ಮೂರು ಸುಗ್ರೀವಾಜ್ಞೆಗಳು ರೈತಪರವೋ– ಕಾರ್ಪೊರೇಟ್ ಪರವೋ?

ಮೇಲ್ನೋಟಕ್ಕೆ ರೈತರಿಗೆ ಸಹಕಾರಿ ಎಂಬಂತೆ ಈ ಸುಗ್ರೀವಾಜ್ಞೆಗಳು ಕಂಡು ಬಂದರೂ, ಒಳ ನೋಟದಲ್ಲಿ ಅವು ಲೂಟಿಕೋರ ಕಾರ್ಪೊರೇಟ್ ಕಂಪನಿಗಳ ಪರವಾದ ನವ ಉದಾರೀಕರಣದ ನೀತಿಗಳನ್ನು ಜಾರಿಗೆ ತರುವ ಮತ್ತು ದೇಶದ ಕೃಷಿಯನ್ನು ಹಾಗೂ ಗ್ರಾಹಕ ಮಾರುಕಟ್ಟೆಯನ್ನು ಕಾರ್ಪೊರೇಟ್ ಕಂಪನಿಗಳಿಗೆ ವಹಿಸಿಕೊಡುವ ಹುನ್ನಾರ ಹೊಂದಿರುವುದು, ಕೇಂದ್ರ ಸರಕಾರ ಹೇಳುತ್ತಿರುವುದು ಬರೀ ಬೊಗಳೆ ಎಂಬುದು ವಿಶ್ಲೇಷಣೆಯಿಂದ ಸಾಬೀತಾಗುತ್ತದೆ.

ಯು. ಬಸವರಾಜ್



ಬಿಜೆಪಿ ನೇತೃತ್ವದ ಎನ್ ಡಿ ಎ ಕೇಂದ್ರ ಸರಕಾರ ಜೂನ್ 05, 2020 ರಂದು, ಒಂದೇ ದಿನ ಒಟ್ಟು ಮೂರು ಸುಗ್ರೀವಾಜ್ಞೆಗಳನ್ನು ಹೊರಡಿಸಿದೆ. ಅವುಗಳೆಂದರೇ,

1) ಬೆಲೆ ಖಾತರಿ, ಕೃಷಿ ಸೇವೆಗಳ ಕುರಿತ ರೈತರ (ಸಶಕ್ತೀಕರಣ ಮತ್ತು ರಕ್ಷಣೆ) ಒಪ್ಪಂದದ ಸುಗ್ರಿವಾಜ್ಞೆ –2020
2) ಕೃಷಿ ಉತ್ಪನ್ನ ಮಾರಾಟ ಹಾಗೂ ವಾಣಿಜ್ಯ (ಉತ್ತೇಜನ ಮತ್ತು ಬೆಂಬಲ) ಸುಗ್ರಿವಾಜ್ಞೆ –2020'
3) ಅಗತ್ಯ ವಸ್ತುಗಳ ತಿದ್ದುಪಡಿ ಸುಗ್ರೀವಾಜ್ಞೆ–2020

ಈ ಮೂರೂ ತಿದ್ದುಪಡಿ ಸುಗ್ರೀವಾಜ್ಞೆಗಳು ಪರಸ್ಪರ ಅಂತರ್ಗತ ಸಂಬಂಧಗಳನ್ನು ಹೊಂದಿರುವುದರಿಂದ ಏಕ ಕಾಲದಲ್ಲಿ ಹೊರಡಿಸಿರುವ ಸಾಧ್ಯತೆಗಳಿವೆ. ಇವುಗಳ ಉದ್ದೇಶವನ್ನು ಕೇಂದ್ರ ಸರಕಾರ ಹೀಗೆ ಬಣ್ಣಿಸಿದೆ.

ಬೆಲೆ ಖಾತರೀ ಮತ್ತು ಕೃಷಿ ಸೇವೆ ಕುರಿತ (ಸಶಕ್ತೀಕರಣ ಮತ್ತು ರಕ್ಷಣೆ) ಒಪ್ಪಂದದ ಸುಗ್ರೀವಾಜ್ಞೆ – 2020, ಮುಖ್ಯವಾಗಿ, ಕೃಷಿ ವ್ಯಾಪಾರಿ ಸಂಸ್ಥೆಗಳು, ರಫ್ತುದಾರರು, ಸಗಟು ವರ್ತಕರು, ದೊಡ್ಡ ಚಿಲ್ಲರೆ ವ್ಯಾಪಾರಿಗಳು ಮತ್ತು ರೈತರ ನಡುವಿನ ಒಪ್ಪಂದ ಕೃಷಿ ವ್ಯವಹಾರಕ್ಕೆ ಸಂಬಂಧಿಸಿ, ಕೃಷಿ ಸೇವೆಗಳು ಮತ್ತು ಮುಂಗಡ ವ್ಯಾಪಾರದ ಅಥವಾ ಭವಿಷ್ಯದ ಮಾರಾಟದಲ್ಲಿನ ಕೃಷಿ ಉತ್ಪನ್ನಗಳ ಬೆಲೆಗಳನ್ನು ಪರಸ್ಪರ ಒಪ್ಪಿತ ರೀತಿಯಲ್ಲಿ ಖಾತರಿ ಪಡಿಸುವ ಉದ್ದೇಶವನ್ನು ಹೊಂದಿದೆ ಎನ್ನುತ್ತದೆ.

ಕೃಷಿ ಉತ್ಪನ್ನ ಮಾರಾಟ ಹಾಗೂ ವಾಣಿಜ್ಯ (ಉತ್ತೇಜನ ಮತ್ತು ಬೆಂಬಲ) ಸುಗ್ರಿವಾಜ್ಞೆ –2020 ಇದು, ರೈತರ ಕೃಷಿ ಉತ್ಪನ್ನಗಳನ್ನು ಕೃಷಿ ಮಾರುಕಟ್ಟೆಗಳ ಪ್ರಾಂಗಣದಾಚೆ ರೈತರು ಮಾರಾಟ ಮಾಡಲು ಮತ್ತು ವ್ಯಾಪಾರಿಗಳು ಕೊಂಡುಕೊಳ್ಳಲು ನಿರ್ಬಂಧ ಮುಕ್ತ ಸ್ವಾತಂತ್ರವನ್ನು ಕಲ್ಪಿಸುವ ಹಾಗೂ ರಾಜ್ಯದ ಒಳಗೆ ಮತ್ತು ಹೊರಗೆಯು ಮುಕ್ತವಾಗಿ ಮಾರಾಟ ಮಾಡಲು ಮತ್ತು ಕೊಂಡುಕೊಳ್ಳಲು ಅವಕಾಶ ನೀಡುವ ಮೂಲಕ ರೈತರು ಸ್ಪರ್ಧಾತ್ಮಕ ಬೆಲೆಗಳನ್ನು ಪಡೆಯಲು ನೆರವಾಗಲಿದೆಯೆಂದು ಹೇಳಿ ಕೊಂಡಿದೆ.

ಅದೇ ರೀತಿ, ಅಗತ್ಯ ವಸ್ತುಗಳ ತಿದ್ದುಪಡಿ ಸುಗ್ರೀವಾಜ್ಞೆ – 2020 ನ್ನು ಕೂಡಾ,ಕೃಷಿ ರಂಗದಲ್ಲಿ ಸ್ಪರ್ಧಾತ್ಮಕತೆಯನ್ನು ವಿಸ್ತರಿಸಿ ಹಾಗೂ ಆ ಮೂಲಕ ರೈತರ ಆದಾಯವನ್ನು ಹೆಚ್ಚಿಸುವ ಘನ ಉದ್ದೇಶದಿಂದ ಗ್ರಾಹಕ ಹಿತ ರಕ್ಷಣೆಯನ್ನು ಮಾಡುವಾಗಲೇ, ನಿಯಂತ್ರಣ ವ್ಯವಸ್ಥೆಯನ್ನು ಉದಾರೀಕರಿಸ ಬೇಕಾಯಿತು ಎನ್ನುತ್ತದೆ.

ಒಟ್ಟಾರೇ, ಈ ಮೂರು ಸುಗ್ರೀವಾಜ್ಞೆಗಳು, ರೈತರ ಹಿತರಕ್ಷಣೆ, ಅವರ ಕೃಷಿ ಉತ್ಪನ್ನಗಳಿಗೆ ಖಾತರಿ ಬೆಲೆ, ಅವರ ಆದಾಯದ ಹೆಚ್ಚಳ ವನ್ನು ಮುಂದಿಟ್ಟುಕೊಂಡು, ನಿಯಂತ್ರಣ ಮುಕ್ತ ಸ್ಪರ್ಧಾತ್ಮಕ ವ್ಯಾಪಾರ, ಕೃಷಿ ಉತ್ಪನ್ನಗಳ ಮುಂಗಡ ವ್ಯಾಪಾರದ ಅಗತ್ಯ ಮತ್ತು ಗ್ರಾಹಕರನ್ನು ಸಂರಕ್ಷಿಸುವ ಅಗತ್ಯ ವಸ್ತುಗಳ ಕಾಯ್ದೆ ಯನ್ನು ಉದಾರೀಕರಿಸುವ ಅವಶ್ಯಕತೆಗಳನ್ನು ಒತ್ತಿ ಹೇಳುತ್ತಿವೆ.

ದೇಶದ ಅರ್ಧಕ್ಕಿಂತಲೂ ಹೆಚ್ಚಿನ ಜನ ಸಮುದಾಯ ಅಂದರೇ, ಸುಮಾರು 70 ಕೋಟಿಗೂ ಅಧಿಕ ಜನರು ಗ್ರಾಮೀಣ ಪ್ರದೇಶದಲ್ಲಿ ಈಗಲೂ ಕೃಷಿಯ ಮೇಲೆ ಆಧರಿಸಿ ಬದುಕುತ್ತಿದ್ದಾರೆ. ಆದ್ದರಿಂದ ರೈತರ ಸಂರಕ್ಷಣೆ, ಅವರ ಕೃಷಿಯ ಸಂರಕ್ಷಣೆಯ ಹಿತ ದೃಷ್ಟಿಯಿಂದ ಈ ಸುಗ್ರೀವಾಜ್ಞೆಗಳು ತರಲಾಗಿದೆ ಎಂದು ಬಿಜೆಪಿ, ಸಂಘ ಪರಿವಾರಗಳು ಹೇಳುತ್ತಿವೆ.

ಸರಕಾರದ ದಾವೆ

ಈ ಸುಗ್ರೀವಾಜ್ಞೆಗಳು ವ್ಯವಸಾಯ ಮತ್ತು ರೈತರ ಹಿತ ರಕ್ಷಣೆಯನ್ನು ಹೇಗೆ ಮಾಡಲಿವೆ ಎಂಬ ಪ್ರಶ್ನೆಗೆ ಎರಡು ಪ್ರಮುಖ ಉತ್ತರಗಳನ್ನು ಅವುಗಳು ನೀಡುತ್ತವೆ.

ಒಂದನೆಯದು, ರೈತರನ್ನು ನಷ್ಟದಿಂದ ಮೇಲಕ್ಕೆತ್ತಲು, ಅವರ ಆದಾಯವನ್ನು ಹೆಚ್ಚಿಸಲು, ಕೃಷಿ ಉತ್ಪನ್ನಗಳ ಬೆಲೆಗಳು ಲಾಭದಾಯಕವಾಗಿರುವಂತೆ ಮಾಡ ಬೇಕಾಗುತ್ತದೆ. ಹಾಗಾಗಬೇಕೆಂದರೆ, ಕೃಷಿ ಉತ್ಪನ್ನಗಳನ್ನು ಖರೀಧಿಸುವ ಖರೀದಿದಾರರ ನಡುವೆ ವ್ಯಾಪಕವಾದ ಸ್ಪರ್ದೆಯನ್ನು ಏರ್ಪಡಿಸ ಬೇಕು. ಅಂತಹ ಸ್ಪರ್ಧೆಯಲ್ಲಿ ಮಾತ್ರ ರೈತರು ಉತ್ತಮ ಬೆಲೆಯನ್ನು ಪಡೆಯಲು ಸಾದ್ಯವಾಗುತ್ತದೆ. ಆದ್ದರಿಂದ ಅಂತಹ ಅಗತ್ಯ ಕ್ರಮಗಳ ಪರಿಹಾರಗಳನ್ನು ಇವುಗಳು ಸೂಚಿಸುತ್ತವೆ. ಅದಕ್ಕಾಗಿ, ಇದೀಗ ಅಂತಹ ವ್ಯಾಪಕ ಪೈಪೋಟಿಗೆ ಅಥವಾ ವ್ಯಾಪರಸ್ಥರ ನಡುವಿನ ವ್ಯಾಪಕ ಸ್ಪರ್ಧೆಗೆ ಅಡ್ಡಿಯಾಗಿದ್ದ ಅಂಶಗಳನ್ನು, ಕೃಷಿ ಉತ್ಪನ್ನ ಮಾರಾಟ ಮತ್ತು ವಾಣಿಜ್ಯ (ಉತ್ತೇಜನ ಮತ್ತು ಬೆಂಬಲ) ಸುಗ್ರೀವಾಜ್ಞೆ – 2020 ರ ಮೂಲಕ ತಗೆದು ಹಾಕುತ್ತವೆ.

ಇದರಂತೆ, ಮೊದಲನೆಯದಾಗಿ, ಇದು ಮಾರುಕಟ್ಟೆ ಪ್ರಾಂಗಣದಾಚೆಗಿನ ವ್ಯವಹಾರದ ಮೇಲಿದ್ದ ಕೃಷಿ ಉತ್ಪನ್ನಗಳ ಮಾರುಕಟ್ಟೆ ಸಮಿತಿಯ ನಿಯಂತ್ರಣವನ್ನು ತಗೆದು ಹಾಕುತ್ತದೆ. ಇದರಿಂದ ಕೃಷಿ ಉತ್ಪನ್ನಗಳ ಮಾರುಕಟ್ಟೆಯ ಪ್ರಾಂಗಣದ ಆಚೆಗಿನ ಕೃಷಿ ಉತ್ಪನ್ನಗಳ ವ್ಯವಹಾರಕ್ಕೆ ಮುಕ್ತತೆ ದೊರಕುತ್ತದೆ. ಇನ್ನು ಮುಂದೆ ಕೃಷಿ ಉತ್ಪನ್ನಗಳ ಮಾರುಕಟ್ಟೆ ಸಮಿತಿಯ ಯಾವುದೇ ನಿರ್ಬಂಧಗಳು ಮತ್ತು ನಿಬಂಧನೆಗಳನ್ನು ಮಾರುಕಟ್ಟೆ ಪ್ರಾಂಗಣದಾಚೆಗೆ ವ್ಯವಹಾರದಲ್ಲಿ ತೊಡಗಿರುವ ವ್ಯಾಪಾರಸ್ಥರು ಮತ್ತು ಕೃಷಿ ಉತ್ಪನ್ನಗಳ ಮಾಲಕರಾದ ರೈತರು ಪಾಲಿಸ ಬೇಕಿಲ್ಲ.

ವ್ಯಾಪಾರಸ್ಥರು ತಮ್ಮ ಪ್ರತಿ ದಿನದ ವ್ಯವಹಾರದಲ್ಲಿ ಈಗಿನಂತೆ ಶೇ 2 ರಷ್ಟು ಮೊತ್ತವನ್ನು ಮಾರು ಕಟ್ಟೆ ಸಮಿತಿಗೆ ಪಾವತಿಸ ಬೇಕಿಲ್ಲ ಮಾತ್ರವಲ್ಲಾ, ಈ ವ್ಯವಹಾರಕ್ಕಾಗಿ ಮಾರುಕಟ್ಟೆ ಸಮಿತಿಯ ಪರವಾನಿಗಿಯು (ಲೈಸೆನ್ಸ್)ಇವರಿಗೆ ಬೇಕಿಲ್ಲ. ಹೀಗಾಗಿ, ಈಗಾಗಲೇ ವ್ಯಾಪಾರದಲ್ಲಿ ತೊಡಗಿದವರು ಮತ್ತು ಈಗ ನಿರ್ಬಂಧಗಳಿಂದಾಗಿ ವ್ಯಾಪಾರದಲ್ಲಿ ತೊಡಗಲಾಗದವರು, ಮಾತ್ರವಲ್ಲಾ, ಯಾರು ಬೇಕಾದರೂ ರೈತರ ಕೃಷಿ ಉತ್ಪನ್ನಗಳ ಖರೀದಿಗೆ ಮುಂದಾಗಲು ಇದು ದೊಡ್ಡ ಅವಕಾಶ ತೆರೆದಿದೆ.

ಅದೇ ರೀತಿ, ಎರಡನೆಯದಾಗಿ, ಸ್ಥಳೀಯರು ಮಾತ್ರವೇ ಅಲ್ಲಾ, ಜಿಲ್ಲೆಯ ವ್ಯಾಪಾರಿಗಳು ಮಾತ್ರವಲ್ಲಾ,ರಾಜ್ಯದ ಯಾವುದೇ ಮೂಲೆಯಲ್ಲಿರುವ ವ್ಯಾಪಾರಿಗಳು ಹಾಗೂ ರಾಜ್ಯದ ಹೊರಗಿನ, ನಮ್ಮ ದೇಶದ ಯಾವುದೇ ರಾಜ್ಯದ ವ್ಯಾಪಾರಿಗಳು ಕೂಡಾ ಕೃಷಿ ಉತ್ಪನ್ನಗಳನ್ನು ನೇರವಾಗಿ ಖರೀಧಿಸಿ ದೇಶದ ಯಾವುದೇ ಮೂಲೆಗೆ ಮುಕ್ತವಾಗಿ ಕೊಂಡೊಯ್ಯಲು ಅನುಮತಿಸಲಾಗಿದೆ. ಆದ್ದರಿಂದ ಖಂಡಿತಾ ಇವರೆಲ್ಲಾ ರೈತರ ಕೈನಲ್ಲಿ ಬೆಳೆ ಬಂದಾಗ ಖರೀಧಿಸಲು ಮುಗಿ ಬೀಳಲಿದ್ದಾರೆ ಎನ್ನಲಾಗಿದೆ.



ಮೂರನೆಯದಾಗಿ, ಇವರ ಜೊತೆ, ಬೆಲೆ ಖಾತರಿ ಹಾಗೂ ಕೃಷಿ ಸೇವೆಗಳ (ಸಶಕ್ತೀಕರಣ ಮತ್ತು ರಕ್ಷಣೆ) ಒಪ್ಪಂದದ ಸುಗ್ರೀವಾಜ್ಞೆ – 2020 ರಂತೆ, ಕೃಷಿ ವ್ಯಾಪಾರಿ ಸಂಸ್ಥೆಗಳು, ರಫ್ತುದಾರರು, ಸಗಟು ವರ್ತಕರು, ಚಿಲ್ಲರೆ ವ್ಯಾಪಾರದಲ್ಲಿ ತೊಡಗಿದ ದೊಡ್ಡ ಬಂಡವಾಳದಾರರು, ಕಾರ್ಪೊರೇಟ್ ಕಂಪನಿಗಳು ರೈತರ ಕೃಷಿ ಉತ್ಪನ್ನಗಳನ್ನು ನೇರವಾಗಿ ಯಾವುದೇ ಮಾರುಕಟ್ಟೆ ಸಮಿತಿಯ ನಿಯಂತ್ರಣ ಮತ್ತು ನಿರ್ಬಂಧಗಳಿಲ್ಲದೇ, ರೈತರ ಕೈನಲ್ಲಿ ಬೆಳೆ ಬಂದ ನಂತರವಲ್ಲಾ, ಬದಲಿಗೆ, ಬೆಳೆಯನ್ನು ಬಿತ್ತುವ ಪೂರ್ವದಲ್ಲಿಯೇ, ಅಂದರೇ ಬಿತ್ತನೆಯ ಮೊದಲೇ, ಮುಂಗಡವಾಗಿ ರೈತರ ಜೊತೆ ಚರ್ಚಿಸಿ, ಪರಸ್ಪರ ಸಹಮತದ ಮೇರೆಗೆ ಒಪ್ಪಿತ ಬೆಲೆಯನ್ನು ನಿರ್ಧರಿಸಿ, ಭವಿಷ್ಯದ ಕೃಷಿ ಉತ್ಪನ್ನಗಳ ಖರೀದಿಯ ಒಪ್ಪಂದವನ್ನು ಮುಂಗಡವಾಗಿ ಮಾಡಿಕೊಂಡು, ಬೆಳೆ ಬಂದ ನಂತರ ಹಣ ಪಾವತಿಸಿ ಉತ್ಪನ್ನಗಳನ್ನು ಪಡೆಯಲು ಅವಕಾಶ ನೀಡಿದೆ. ಅಂದರೇ, ಬೆಳೆಯನ್ನು ಬಿತ್ತುವ ಪೂರ್ವವೇ

ಮಾರಾಟ ಮಾಡಿಕೊಳ್ಳಲು ಬೇಕಾದ ವ್ಯವಸ್ಥೆ ಅಥವಾ ಅನುಕೂಲ ಮಾಡಿ ಕೊಡಲಾಗಿದೆ. ಆದರೇ, ಒಪ್ಪಂದ ಮಾಡಿಕೊಂಡ ನಂತರ ರೈತ ಇತರೆಡೆ ಒಪ್ಪಿತ ಬೆಲೆಗಿಂತ ಹೆಚ್ಚಿನ ಬೆಲೆಗಳು ದೊರೆಯುವ ಸಂಭವವಿದ್ದರೂ, ಅಂತಹ ವ್ಯಾಪಾರಿಗೆ ಮಾರಾಟ ಮಾಡುವಂತಿಲ್ಲ.

ಈ ಸುಗ್ರೀವಾಜ್ಞೆಯು, ಕೇವಲ ಕೃಷಿ ಉತ್ಪನ್ನಗಳು ಅಂದರೇ, ಏಕದಳ ಹಾಗೂ ದ್ವಿದಳ ಧಾನ್ಯಗಳು, ಎಣ್ಣೆ ಕಾಳುಗಳು ಮಾತ್ರವೇ ಅಲ್ಲಾ, ತರಕಾರಿ, ಹಣ್ಣುಗಳು, ಕಬ್ಬು, ಮಸಾಲೆ ಪದಾರ್ಥಗಳು, ಗೋಡಂಬಿ, ಬದಾಮಿ ಮುಂತಾದ ನಟ್ಸಗಳು, ಹತ್ತಿ ಬೀಜ, ಕಚ್ಚಾ ಹತ್ತಿ, ಸೆಣಬುಗಳು ಮಾತ್ರವಲ್ಲಾ, ಪಶು ಪಾಲನೆಯಲ್ಲಿ, ಅಂದರೇ, ಹೈನುಗಾರಿಕೆ, ಪಶು ಆಹಾರ ಹಾಗೂ ಹಾಲು ಉತ್ಪನ್ನಗಳು, ಕೋಳಿ, ಕುರಿ, ಹಂದಿ ಸಾಕಾಣೆ ಮೀನುಗಾರಿಕೆ ಗಳಲ್ಲೂ, ಮುಂಗಡ ವ್ಯಾಪಾರದಲ್ಲಿ ತೊಡಗುವುದಕ್ಕೆ ಇವರಿಗೆ ವಿಫುಲ ಅವಕಾಶಗಳನ್ನು ನೀಡುತ್ತದೆ. ಇವುಗಳ ಉತ್ಪಾದನೆಯಲ್ಲಿ ತೊಡಗಿರುವ ಈ ಎಲ್ಲರ ರಕ್ಷಣೆಗೆ ಈ ಸುಗ್ರೀವಾಜ್ಞೆಗಳ ಮೂಲಕ ಕ್ರಮ ವಹಿಸಲಾಗಿದೆ ಎಂದು ಬೀಗುತ್ತದೆ.

ಇದು ಮಾತ್ರವೇ ಅಲ್ಲಾ, ಈ ಒಪ್ಪಂದ ಕೃಷಿಯಲ್ಲಿ ತೊಡಗುವ ರೈತರು ಮತ್ತು ಇತರೆ ಎಲ್ಲರಿಗೂ ಹೂಡಿಕೆಗಳ ಸೇವೆಯನ್ನು, ಅಂದರೇ, ಬೀಜ, ಗೊಬ್ಬರ, ಕ್ರಿಮಿನಾಶಕ, ಕೃಷಿ ಸಂಬಂದಿ ಆಧುನಿಕ ಯಂತ್ರಗಳು, ಆಧುನಿಕ ಕೃಷಿ ತಂತ್ರಜ್ಞಾನಗಳನ್ನು ಈ ಮುಂಗಡ ವ್ಯಾಪಾರಿಗಳು ಒದಗಿಸಲು ಕೂಡಾ ಈ ಸುಗ್ರೀವಾಜ್ಞೆ ಅನುವು ಮಾಡಿದೆ.

ನಾಲ್ಕನೆಯದಾಗಿ, ಸ್ಪರ್ಧಾತ್ಮಕ ಹಾಗೂ ನಿಯಂತ್ರಣ ಮುಕ್ತ ಕೃಷಿ ಉತ್ಪನ್ನಗಳ ವ್ಯಾಪಾರವನ್ನು ಮತ್ತಷ್ಟು ಉತ್ತೇಜಿಸಲು ಮತ್ತು ಈ ಕೃಷಿ ವ್ಯಾಪಾರಿ ಸಂಸ್ಥೆಗಳು ಇನ್ನಷ್ಟು ಆಸಕ್ತಿಯಿಂದ ತಮ್ಮನ್ನು ತೊಡಗಿಸಿಕೊಳ್ಳುವ ಸಲುವಾಗಿಯೇ ಅಗತ್ಯ ವಸ್ತುಗಳ ತಿದ್ದುಪಡಿ ಸುಗ್ರಿವಾಜ್ಞೆ – 2020 ನ್ನು ತರಲಾಗಿದೆ.

ಇದು, ಈ ವ್ಯಾಪಾರಿಗಳು, ಕೃಷಿ ಉತ್ಪನ್ನಗಳನ್ನು ಮುಖ್ಯವಾಗಿ, ಏಕದಳ, ದ್ವಿದಳ ಆಹಾರಧಾನ್ಯಗಳು, ಆಲುಗಡ್ಡೆ, ಈರುಳ್ಳಿ, ಎಣ್ಣೆ ಬೀಜಗಳು, ಎಣ್ಣೆ ಮುಂತಾದವುಗಳನ್ನು ಎಷ್ಟು ಬೇಕಾದರೂ ಖರೀಧಿಸಿ, ದಾಸ್ತಾನು ಮಾಡಲು ಅಂದರೇ, ಸಂಗ್ರಹಿಸಿಟ್ಟುಕೊಳ್ಳಲು ನೆರವು ನೀಡುತ್ತದೆ. ಅದಕ್ಕಾಗಿ ದಾಸ್ತಾನು ಮಾಡುವುದರ ಪ್ರಮಾಣದ ಮೇಲಿದ್ದ ನಿರ್ಬಂಧಗಳನ್ನು, ಕೆಲ ವಿಶೇಷ ಸಂದರ್ಭಗಳಾದ ಯುದ್ಧ, ಭೀಕರ ಕ್ಷಾಮ, ಬೆಲೆಗಳಲ್ಲಿನ ಭಾರಿ ಏರಿಕೆ, ಅತ್ಯಂತ ಗಹನವಾದ ಪ್ರಾಕೃತಿಕ ವಿಕೋಪ ಇಂತಹ ಸಂದರ್ಭಗಳನ್ನು ಹೊರತು ಪಡಿಸಿ, ಉಳಿದ ಅವಧಿಗಳಿಗೆ ಸಡಿಲಿಸಿದೆ.

ಹೀಗಾಗಿ, ಬೆಳೆಯನ್ನು ಅಥವಾ ಅವರ ಕೃಷಿ ಉತ್ಪನ್ನಗಳನ್ನು ಖರೀಧಿಸಲು, ರೈತರ ಬಳಿಗೆ ವ್ಯಾಪಾರಿಗಳ ದೊಡ್ಡ ದಂಡೇ ಬರುವುದರಿಂದ ಸಹಜವಾಗಿಯೇ ಅವರ ನಡುವೆ ಕೃಷಿ ಉತ್ಪನ್ನಗಳಿಗಾಗಿ ಸ್ಪರ್ಧೆ ಏರ್ಪಡುತ್ತದೆ ಮತ್ತು ಅದರಿಂದಾಗಿ, ಕೃಷಿ ಉತ್ಪನ್ನಗಳ ಬೆಲೆಗಳು ಲಾಭದಾಯಕವಾಗಿ ಏರುತ್ತವೆ. ಪರಿಣಾಮವಾಗಿ, ಈಗ ನಷ್ಟದಲ್ಲಿರುವ ರೈತನಿಗೆ ಲಾಭವಾಗುತ್ತದೆ. ಮತ್ತು ಆತನ ಆದಾಯ ಹೆಚ್ಚಳವಾಗುತ್ತದೆ. ಮಾತ್ರವಲ್ಲಾ, ಈ ಮುಂಚೆ ಅಗತ್ಯ ಹೂಡಿಕೆಗಳಿಗಾಗಿ ಪರದಾಡುತ್ತಿದ್ದ ರೈತನಿಗೆ, ಮನೆ ಬಾಗಿಲಿಗೆ ಬಂದು, ಆತನ ಕೃಷಿಗೆ ಬೇಕಾದ ಹೂಡಿಕೆ ಲಾಗುವಾಡುಗಳನ್ನು ಮುಂಗಡ ವ್ಯಾಪಾರಿ ನೀಡುತ್ತಾನೆ. ಇಷ್ಟೊಂದು ಅನುಕೂಲಗಳನ್ನು ಇವು ರೈತರಿಗೆ ಮಾಡಿಕೊಡಲಿವೆ ಎಂದು ಹೆಮ್ಮೆಯಿಂದ ಹೇಳಲಾಗುತ್ತದೆ.

ಒಟ್ಟಾರೇ, ಈ ಎಲ್ಲದರ ಪರಿಣಾಮವಾಗಿ, ರೈತನ ಮತ್ತು ವ್ಯವಸಾಯದ ಸಂಕಷ್ಟ ನಿವಾರಣೆಯಾಗುತ್ತದೆ ಮತ್ತು ರೈತ ಸಂತೋಷದಿಂದಿರುತ್ತಾನೆ. ಇದು ಈ ಸುಗ್ರೀವಾಜ್ಞೆಗಳ ಸತ್ವ ವೆಂದು ವಾದಿಸಲಾಗುತ್ತದೆ.

ಹೀಗಾಗಿ, ಇವುಗಳನ್ನು ವಿರೋಧಿಸುವವರು ಕುರುಡಾಗಿ, ವಿರೋಧಕ್ಕಾಗಿಯೇ ವಿರೋಧಿಸುವವ ರೆಂದು ಮತ್ತು ಅವರಿಗೆ ದೂಷಿಸುವುದು ಬಿಟ್ಟರೇ, ಜನಪರವಾದ ಕೆಲಸಗಳನ್ನು ಬೆಂಬಲಿಸುವುದು ಗೊತ್ತಿಲ್ಲವೆಂದು ವಿರೋಧಿಗಳನ್ನು ಆ ಮೂಲಕ ದೂಷಿಸಲಾಗುತ್ತಿದೆ.

ಹಾಗಾದರೇ, ಈ ಸುಗ್ರೀವಾಜ್ಞೆಗಳು ನಿಜವಾಗಲೂ ರೈತರ ಪರವಲ್ಲವೇ? ಅಥವಾ ಇವು ಕಾರ್ಪೊರೇಟ್ ಕಂಪನಿಗಳ ಪರ ಮಾತ್ರವೇ? ಅದನ್ನು ತಿಳಿಯಲು ಈಗ ಇನ್ನೊಂದು ದೃಷ್ಠಿಯಿಂದ ಅವುಗಳನ್ನು ವಿಶ್ಲೇಷಿಸೋಣ.

ರೈತರ ವಿರೋಧ ಏಕೆ?

ಮೊದಲಿಗೆ, ಕೃಷಿ ಉತ್ಪನ್ನ ಮಾರಾಟ ಮತ್ತು ವಾಣಿಜ್ಯ (ಉತ್ತೇಜನ ಮತ್ತು ಬೆಂಬಲ) ಸುಗ್ರೀವಾಜ್ಞೆ

ಪುಟ 10 ಕ್ಕೆ

ಕೇಂದ್ರ ಸರಕಾರದ ಮೂರು ಸುಗ್ರೀವಾಜ್ಞೆಗಳು ರೈತಪರವೋ – ಕಾರ್ಪೊರೇಟ್ ಪರವೊ?...........

ಪುಟ 9 ರಿಂದ

– 2020 ರಿಂದ ಆರಂಭಿಸೋಣ, ನಿಜಾ, ಇದು ಕೃಷಿ ಮಾರುಕಟ್ಟೆಯ ಪ್ರಾಂಗಣದಾಚೆಗಿನ ಕೃಷಿ ಉತ್ಪನ್ನಗಳ ಮಾರಾಟ ಮತ್ತು ಖರೀಧಿಗಳನ್ನು ನಿಯಂತ್ರಣ ಮುಕ್ತಗೊಳಿಸಿರುವುದರಿಂದ ವ್ಯಾಪಾರಸ್ಥರು ರೈತರ ಬಳಿ ತೆರಳಿ ನೇರ ಖರೀದಿಯಲ್ಲಿ ತೊಡಗಲು ಉತ್ತೇಜನ ನೀಡುತ್ತದೆ. ಅದು ರೈತರ ಉತ್ಪನ್ನಗಳಿಗಾಗಿ ವ್ಯಾಪಾರಸ್ಥರ ನಡುವೆ ಸ್ಪರ್ಧೆಯನ್ನು ಹೆಚ್ಚಿಸಲಿದೆ. ಆದರೇ ಈ ಎಲ್ಲ ವ್ಯಾಪಾರಿಗಳು ರೈತರ ಜೊತೆ ನೇರ ವ್ಯಾಪಾರ ಮಾಡಲು ಸಾಧ್ಯವಾಗುತ್ತದೆಯೇ? ಮುಂದೆ ನೋಡೋಣ.

ಆದರೇ, ಇದರಿಂದ ಹಾಲಿ ಸಾರ್ವಜನಿಕ ಮಾರುಕಟ್ಟೆಯ ಪ್ರಾಂಗಣದಲ್ಲಿನ ವ್ಯವಹಾರ ದ ಮೇಲೆ ಬಹಳ ಗಂಭೀರ ಪರಿಣಾಮ ಉಂಟಾಗುತ್ತದೆಂಬುದನ್ನು ಇಲ್ಲಿ ಗಮನಿಸ ಬೇಕಾಗುತ್ತದೆ. ಮೊದಲನೆಯದಾಗಿ, ಮಾರುಕಟ್ಟೆಯ ಪ್ರಾಂಗಣದಲ್ಲಿನ ಕೃಷಿ ಉತ್ಪನ್ನಗಳ ವ್ಯವಹಾರ ಬಹುತೇಕ ನಿಂತು ಹೋಗುತ್ತದೆ. ಯಾಕೆಂದರೇ, ಇಲ್ಲಿ ವ್ಯವಹರಿಸುವುದರಿಂದ ವ್ಯಾಪಾರಿಗಳು ಮಾರುಕಟ್ಟೆ ಸಮಿತಿಯ ನಿರ್ಬಂಧಗಳಿ ಗೊಳಗಾಗಬೇಕಾಗುತ್ತದೆ ಮತ್ತು ವ್ಯವಹಾರದ ಒಟ್ಟು ಮೊತ್ತದಲ್ಲಿ ಶೇ 2 ರಷ್ಟು ಹಣವನ್ನು ಮಾರುಕಟ್ಟೆ ಸಮಿತಿಗೆ ಫೀ ಯಾಗಿ ಪಾವತಿಸ ಬೇಕಾಗುತ್ತದೆ. ಆದ್ದರಿಂದ, ವ್ಯಾಪಾರಿಗಳು ಸಹಜವಾಗಿಯೇ, ಲಾಭದಾಸೆಯಿಂದ ಮಾರುಕಟ್ಟೆಯಾಚೆಯ ವ್ಯಾಪಾರಕ್ಕೆ ಹೊರ ನಡೆಯುತ್ತಾರೆ! ಮಾರುಕಟ್ಟೆ ಪ್ರಾಂಗಣದಲ್ಲಿಯೇ ಉಳಿದು ಯಾರು ತಾನೆ ವ್ಯವಹಾರದಲ್ಲಿ ನಷ್ಟ ಮಾಡಿಕೊಳ್ಳಲು ಇಷ್ಟ ಪಡುತ್ತಾರೆ ಹೇಳಿ?!

ಅದೇ ರೀತಿ, ಮನೆಯ ಮುಂದುಗಡೆಯೇ ಕೃಷಿ ಉತ್ಪನ್ನಗಳ ಖರೀದಿಗೆ ವ್ಯಾಪಾರಿಗಳು ಸಾಲುಗಟ್ಟಿ ನಿಲ್ಲುವಾಗ, ಅದನ್ನು ಧಿಕ್ಕರಿಸಿ ಯಾವ ರೈತ ತಾನೆ ಮಾರುಕಟ್ಟೆ ಪ್ರಾಂಗಣಕ್ಕೆ ಕೃಷಿ ಉತ್ಪನ್ನಗಳನ್ನು ಸಾರಿಗೆ ವೆಚ್ಚ ಭರಿಸಿ, ಕೊಂಡೊಯ್ಯಲು ತಯಾರಾಗುತ್ತಾನೆ? ಅದರಿಂದ ಅವನಿಗೂ, ಮಾರುಕಟ್ಟೆಗೆ ಸಾಗಾಟ ಮಾಡುವ ವೆಚ್ಚ ಉಳಿತಾಯ ವಾಗುತ್ತದೆ.

ಭಾರೀ ಪ್ರಮಾಣದಲ್ಲಿ ಉದ್ಯೋಗ ನಷ್ಟ

ಒಟ್ಟಾರೇ, ಇವುಗಳ ಪರಿಣಾಮವು ಸಾರ್ವ ಜನಿಕ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಮೇಲಾಗುತ್ತದೆ. ಪ್ರಾಂಗಣದೊಳಗೆ ವ್ಯವಹಾರವಿಲ್ಲದೇ ಮತ್ತು ಅದರಿಂದಾಗಿ ಮಾರುಕಟ್ಟೆ ಸಮಿತಿಗೆ ಆದಾಯವಿಲ್ಲದೇ ಅವುಗಳು ಮುಚ್ಚಲ್ಪಡುವಂತಾಗುತ್ತದೆ. ಇದರಿಂದಾಗಿ, ದೇಶದಾದ್ಯಂತ ಈ ಸಾರ್ವಜನಿಕ ಮಾರುಕಟ್ಟೆಯಲ್ಲಿ ಕಾರ್ಯ ನಿರ್ವಹಿಸುವ ಲಕ್ಷಾಂತರ ನೌಕರರು ಹಾಗೂ ದಶ ಲಕ್ಷಾಂತರ ದಲ್ಲಾಲರು, ಪ್ರಾಂಗಣಗಳಲ್ಲಿ ಕಾರ್ಯ ನಿರ್ವಹಿಸುವ ಕೋಟ್ಯಾಂತರ ಹಮಾಲಿ ಮತ್ತಿತರೇ ಕಾರ್ಮಿಕರು ಹಾಗೂ ದಶ ಲಕ್ಷಾಂತರ ಮಾರುಕಟ್ಟೆಯನ್ನಧಾರಿಸಿರುವ ಸಣ್ಣ ವ್ಯಾಪಾರಿಗಳು, ಹೋಟೆಲ್ ಮಾಲೀಕರು ತಮ್ಮ ಉದ್ಯೋಗಗಳನ್ನು ಭಾರೀ ಸಂಖ್ಯೆಗಳಲ್ಲಿ ಕಳೆದುಕೊಳ್ಳಲಿದ್ದಾರೆ. ಲಕ್ಷಾಂತರ ಕೋಟಿ ಬೆಲೆ ಬಾಳುವ ಸಾರ್ವಜನಿಕ ಮಾರುಕಟ್ಟೆ ಸಮಿತಿ ಗಳಿಗೆ ಸೇರಿದ ಕೋಟ್ಯಾಂತರ ಕಟ್ಟಡಗಳು, ದಶಲಕ್ಷಾಂತರ ಹೆಕ್ಟಾರ್ ಭೂಮಿಗಳು, ಇತರೆ ಆಸ್ತಿಗಳು, ಪಾಳು ಬೀಳಲಿವೆ.ಇಲ್ಲವೇ ಮುಂದೆ ಈ ಸಾರ್ವಜನಿಕ ಆಸ್ತಿ ಅಗ್ಗದ ದರಕ್ಕೆ ದೊಡ್ಡ ವ್ಯಾಪಾರಿ ಸಂಸ್ಥೆಗಳ ತೆಕ್ಕೆಗೆ ವರ್ಗಾವಣೆಯಾಗಲಿವೆ.

ಅದೇ ರೀತಿ, ಗ್ರಾಮೀಣ ಭಾರತದ ಭೂಮಾಲಕ ಬಂಡವಾಳದಾರರ ದಬ್ಬಾಳಿಕೆ ಮತ್ತು ಶೋಷಣೆಯಿಂದ ಹಾಗೂ ಅವರ ಏಕ ಸ್ವಾಮ್ಯ ವ್ಯಾಪಾರದ ಹಿಡಿತದಿಂದ ಹೊರ ಬರಲು ಪ್ರಯತ್ನಿಸಿ ಸ್ವಾವಲಂಬಿಗಳಾಗಲು ಬಯಸುತ್ತಿದ್ದ ಬಡ ರೈತರು ದಲಿತ ಹಾಗೂ ಮಹಿಳಾ ರೈತರಿಗೆ ಈ ಸಾರ್ವಜನಿಕ ಮಾರುಕಟ್ಟೆಗಳು ನೆರವಾಗುತ್ತಿದ್ದವು. ಇಂತಹ ಘನ ಉದ್ದೇಶಗಳಿಂದಲೇ ಅವುಗಳನ್ನು ಸಾರ್ವಜನಿಕ ರಂಗದಲ್ಲಿ ತೆರೆಯಲಾಗಿತ್ತು. ಆದರೆ ಇನ್ನು ಮುಂದೆ ಅವುಗಳು ಇಲ್ಲದಂತಾಗುವುದರಿಂದ ಈ ಎಲ್ಲರೂ ಕೂಡಾ ಇಂತಹ ನೆರವಿನಿಂದ ವಂಚಿತರಾಗಲಿದ್ದಾರೆ.

ಎರಡನೆಯದಾಗಿ, ದೊಡ್ಡ ಬಂಡವಾಳದಾರರು, ಕಾರ್ಪೊರೇಟ್ ಕಂಪನಿಗಳು ಮುಂಗಡ ವ್ಯಾಪಾರದಲ್ಲಿ ತೊಡಗುವುದರಿಂದ,

(ಅ) ಇದುವರೆಗೆ, ದೇಶದ ಎಲ್ಲಾ ಕೃಷಿಕರಿಗೆ, ಪಶುಪಾಲಕರಿಗೆ ಅವರು ಉತ್ಪಾದನೆಯಲ್ಲಿ ತೊಡಗಲು ಬೇಕಾದ ಅಗತ್ಯ ಹೂಡಿಕೆಗಳಾದ ಬೀಜ, ಗೊಬ್ಬರ, ಕ್ರಿಮಿನಾಶಕ ಮತ್ತು ಸಾಲ ಒದಗಿಸುತ್ತಿದ್ದ ಮತ್ತು ಕೃಷಿ ಯಂತ್ರಗಳನ್ನಿಟ್ಟುಕೊಂಡು ಬದುಕುತ್ತಿದ್ದ, ದೇಶದಾದ್ಯಂತ ಇರುವ ಕೊಟ್ಯಾಂತರ ಸಣ್ಣ ಮತ್ತು ಮಧ್ಯಮ ವ್ಯಾಪಾರಿಗಳು ಹಾಗೂ ಇತರರು ಉದ್ಯೋಗ ಹೀನರಾಗಲಿದ್ದಾರೆ.

ಆ) ಬೀಜ, ಗೊಬ್ಬರ ಹಾಗೂ ಕ್ರಿಮಿನಾಶಕ, ಯಂತ್ರ ತಯಾರಿಸುತ್ತಿದ್ದ ಕೈಗಾರಿಕೆಗಳು ಮತ್ತು ಸಂಸ್ಥೆಗಳು ಈ ಕಾರ್ಪೊರೇಟ್ ಕಂಪನಿಗಳ ಸ್ಪರ್ಧೆಗೆ ತುತ್ತಾಗಲಿವೆ. ಅದರಿಂದಲೂ ಲಕ್ಷಾಂತರ ಉದ್ಯೋಗಗಳು ಕಳೆದು ಹೋಗಲಿವೆ.

ಇ) ಸಾರ್ವಜನಿಕ ಮಾರುಕಟ್ಟೆಗಳಲ್ಲಿ ವ್ಯಾಪಾರದಲ್ಲಿ ತೊಡಗಿದ್ದ ಕೋಟ್ಯಾಂತರ ಸಣ್ಣ ಮತ್ತು ಮಧ್ಯಮ ವರ್ತಕ ಸಮುದಾಯ ಯಾರ ಬಳಿ ಹೋಗಿ ಕೃಷಿ ಉತ್ಪನ್ನಗಳನ್ನು ಖರೀದಿಸುವುದು. ಅದಾಗಲೇ ಕೃಷಿ ಹಾಗೂ ಉಪಕಸುಬುಗಳ ಉತ್ಪನ್ನಗಳೆಲ್ಲಾ ಮುಂಗಡ ವ್ಯಾಪಾರದಲ್ಲಾಗಲೇ ಮಾರಾಟವಾಗಿರುವಾಗ, ಇವರು ಏನನ್ನು ಖರೀಧಿಸುವುದು! ಹೀಗಾಗಿ ಇವರಿಗೆ ಒಂದೆಡೆ ಸಾರ್ವಜನಿಕ ಮಾರುಕಟ್ಟೆಯೂ ಇಲ್ಲಾ, ಇನ್ನೊಂದೆಡೆ ನೇರ ಖರೀದಿಗೂ ಅವಕಾಶಗಳಿಲ್ಲಾ, ಈ ಎಲ್ಲರೂ ಕೂಡಾ, ತಮ್ಮಉದ್ಯೋಗಗಳನ್ನು ಕಳೆದು ಕೊಳ್ಳಲಿದ್ದಾರೆ.

ಈ) ಕೃಷಿ ಉತ್ಪನ್ನಗಳ ಆಧಾರಿತ ಸಣ್ಣ ಹಾಗೂ ಮದ್ಯಮ ಕೈಗಾರಿಕೆಗಳು ಮತ್ತು ಸಂಸ್ಕರಣ ಘಟಕಗಳು, ಅಲ್ಲಿ ದುಡಿಯುವ ಕಾರ್ಮಿಕರು ಈ ಮುಂಗಡ ವ್ಯಾಪಾರದಿಂದಾಗಿ, ಅವುಗಳಿಗೆ ಬೇಕಾದ ಕಚ್ಚಾ ಮಾಲು ಸಿಗದೇ ಮುಚ್ಚಲೇ ಬೇಕಾಗುತ್ತದೆ. ಇವುಗಳ ಸಂಖ್ಯೆ ಅದೆಷ್ಟು?

ಉ) ಒಪ್ಪಂದ ಕೃಷಿ ಅಥವಾ ಮುಂಗಡ ವ್ಯಾಪಾರದ ಕಾರ್ಪೊರೇಟ್ ಕೃಷಿಯಲ್ಲಿ ದೇಶದ ಕೃಷಿಕೂಲಿಕಾರರಿಗೆ ಹಾಗೂ ಕೃಷಿ ಆಧಾರಿತ ಕಸುಬುದಾರರಿಗೆ ಇಲ್ಲಿ ಕೆಲಸವೆಲ್ಲಿಹುದು ?

ಕಾಳಸಂತೆಗೆ ಅವಕಾಶ

ಇನ್ನು ಅಗತ್ಯ ವಸ್ತುಗಳ ತಿದ್ದುಪಡಿ ಸುಗ್ರೀವಾಜ್ಞೆ – 2020 ಆಹಾರ ಧಾನ್ಯಗಳನ್ನು ದೊಡ್ಡ ಪ್ರಮಾಣದಲ್ಲಿ ದಾಸ್ತಾನು ಮಾಡಲಿದ್ದ ಹಿಂದಿನ ನಿರ್ಬಂಧಗಳನ್ನು ಸಡಿಲಿಸಿ ಎಷ್ಟು ಬೇಕಾದರೂ ದಾಸ್ತಾನು ಮಾಡಿಕೊಳ್ಳಲು ಅವಕಾಶ ನೀಡುತ್ತದೆ ಮತ್ತು ಆ ಮೂಲಕ ಕೃತಕ ಅಭಾವ ಸೃಷ್ಟಿಸಿ ಕಾಳ ಸಂತೆಯಲ್ಲಿ ವ್ಯಾಪಕವಾಗಿ ಬೆಲೆ ಏರಿಸಿ ದೇಶದ ಎಲ್ಲ ಗ್ರಾಹಕರನ್ನು ಕೊಳ್ಳೆ ಹೊಡೆಯಲು ಮುಂಗಡ ವ್ಯಾಪಾರದಲ್ಲಿ ತೊಡಗಿದ ದೈತ್ಯ ಕಾರ್ಪೊರೇಟ್ ಕಂಪನಿಗಳಿಗೆ ಅವಕಾಶ ನೀಡುತ್ತದೆ. ಮುಂದುವರೆದು ದೇಶದಾದ್ಯಂತ ಚಿಲ್ಲರೆ ವ್ಯಾಪಾರದಲ್ಲಿ ತೊಡಗಿರುವ ಕೋಟ್ಯಾಂತರ ಸಣ್ಣ ವ್ಯಾಪಾರಿಗಳನ್ನು ನಾಶ ಮಾಡುತ್ತದೆ. ಈಗ ಇರುವ ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಅದಾಗಲೇ ದುರ್ಬಲಗೊಳಿಸುವ ಪ್ರಯತ್ನಗಳು ಕೇಂದ್ರ ಸರಕಾರದಿಂದ ನಡೆದಿವೆ. ನ್ಯಾಯ ಬೆಲೆ ಅಂಗಡಿಗಳಲ್ಲಿ ಪಡಿತರ ವಿತರಣೆಯ ಬದಲಿಗೆ ಬ್ಯಾಂಕ್ ಖಾತೆಗೆ ಸಹಾಯಧನ ಹಾಕುವ ನೀತಿ ಜಾರಿಗೊಂಡರೇ, ಈ ಕಾಳ ಸಂತೆಯು ಹಸಿರು ಕ್ಷಾಮಕ್ಕೆ ದೇಶವನ್ನು ತಳ್ಳಲಿದೆ.ಜನತೆ ಬಹಳ ದೊಡ್ಡ ಪ್ರಮಾಣದಲ್ಲಿ ಹಸಿವಿನ ಹಾಗೂ ಅಪೌಷ್ಠಿಕತೆಯ ಸಾವುಗಳಿಗೀಡಾಗುವುದನ್ನು ಕಾಣ ಬೇಕಾಗುತ್ತದೆ. ದೇಶವು ಆಹಾರದ ಮೇಲಿನ ತನ್ನ ಸ್ವಾವಲಂಬನೆಯನ್ನು ಕಳೆದುಕೊಂಡು ಕಾರ್ಪೊರೇಟ್ ಕಂಪನಿಗಳ ಮೇಲೆ ಅವಲಂಬಿಸಬೇಕಾಗುತ್ತದೆ.

ಈ ಪರಿಸ್ಥಿತಿಯು, ದೇಶದ ಸ್ವಾತಂತ್ರ ಹಾಗೂ ಸಾರ್ವಭೌಮತೆಗೆ ಧಕ್ಕೆ ಉಂಟು ಮಾಡಲಿದೆ.

ಕಾರ್ಪೊರೇಟ್‌ಗಳಿಗೆ ಪಾರುಗುಂಡಿಗಳು

ಮುಂಗಡ ವ್ಯಾಪರಕ್ಕೆ ಅವಕಾಶ ನೀಡುವ ಸುಗ್ರೀವಾಜ್ಞೆ ಯು, ರೈತರೊಂದಿಗೆ ಮಾಡಿಕೊಂಡ ಒಪ್ಪಂದಗಳು ತನಗೆ ಲಾಭಕರವೆನಿಸದೇ ಹೋದ ಎಲ್ಲಾ ಸಂದರ್ಭಗಳಲ್ಲು ಒಪ್ಪಂದಗಳನ್ನು ಉಲ್ಲಂಘಿಸಲು ಪಾರು ಗುಂಡಿಗಳನ್ನು ತೆರೆದಿದೆ.

ಒಪ್ಪಂದದಲ್ಲಿರುವಂತೆ ರೈತನು ಗುಣ ಮಟ್ಟದ ಕೃಷಿ ಉತ್ಪನ್ನಗಳನ್ನು ಒದಗಿಸಿದರೆ ಮಾತ್ರವೇ, ಒಪ್ಪಿತ ಬೆಲೆಗಳನ್ನು ಪಡೆಯಲು ಸಾದ್ಯ ! ರೈತ ಕೃಷಿ ಉತ್ಪನ್ನಗಳು ತನ್ನ ಕೈಗೆ ಬಂದ ಕೂಡಲೇ ಮುಂಗಡ ವ್ಯಾಪಾರಿ ಕಂಪನಿಗೆ ವರ್ಗಾಯಿಸಬೇಕು. ಕಂಪನಿಯು ಆ ಕೂಡಲೇ ಒಪ್ಪಿತ ಬೆಲೆಯ ಮೂರನೇ ಎರಡರಷ್ಟು ಹಣವನ್ನು ಪಾವತಿಸಬೇಕು ಎಂದಿದೆ. ರೈತನು ತನ್ನ ಕೃಷಿ ಉತ್ಪನ್ನಗಳ ಗುಣ ಮಟ್ಟಕ್ಕೆ ಒಪ್ಪಂದದಲ್ಲಿರುವಂತಹ ಗುಣ ಮಟ್ಟದ ಉತ್ಪನ್ನಗಳೆಂದು ಪ್ರಮಾಣಪತ್ರ (ಸರ್ಟಿ ಫಿಕೇಟ್) ಮೂರನೆ ಪಾರ್ಟಿ ಅಥವಾ ಸಂಸ್ಥೆಯಿಂದ ತಂದು ಕೊಡ ಬೇಕು ಮತ್ತು ಅದನ್ನು ಮುಂಗಡ ವ್ಯಾಪಾರಿ ಕಂಪನಿ ಒಪ್ಪಿದಲ್ಲಿ ಮಾತ್ರವೇ ಬಾಕಿ ಇರುವ ಹಣವನ್ನು ರೈತನು ಪಡೆಯುವಂತೆ ಹೇಳುತ್ತದೆ. ಒಂದು ವೇಳೆ ಇಂತಹ ಕಂಪನಿಗಳ ಮರ್ಜಿಗೊಳಗಾಗಿ ಪ್ರಮಾಣ ಪತ್ರ ನೀಡುವ ಸಂಸ್ಥೆಯು ಸರಿಯಾದ ಪ್ರಮಾಣ ಪತ್ರ ನೀಡದಿದ್ದಲ್ಲಿ ರೈತ ಮೂರನೆ ಒಂದು ಭಾಗದಷ್ಟು ಒಪ್ಪಂದ ದ ಬೆಲೆನಷ್ಟವನ್ನು ಅನುಭವಿಸಬೇಕಾಗುತ್ತದೆ. ಅಂದರೇ ಒಪ್ಪಿತ ಬೆಲೆಯ ಶೇ 34 ರಷ್ಟು ಕಡಿಮೆ ಬೆಲೆ ಪಡೆಯುವಂತಾಗುತ್ತದೆ. ತುಂಬಾ ಪ್ರಯತ್ನ ಮಾಡಿ ಪ್ರಮಾಣ ಪತ್ರ ತಂದುಕೊಟ್ಟರೂ, ಅದನ್ನು ಕಂಪನಿ ಒಪ್ಪದಿದ್ದಲ್ಲಿ ಆಗ ರೈತನು ನ್ಯಾಯಕ್ಕಾಗಿ ಏಸಿ ಕೋರ್ಟ್ ನಲ್ಲಿ ವ್ಯಾಜ್ಯ ನಡೆಸಬೇಕಾಗುತ್ತದೆ. ದೈತ್ಯ ಕಂಪನಿಗಳಿಗೆ ಸರಕಾರಗಳೇ ತಲೆ ಭಾಗುತ್ತಿರುವಾಗ, ಪಾಪದ ಅಧಿಕಾರಿಗಳು, ಈ ಸಣಕಲು ರೈತನಿಗೆ ಏನು ನ್ಯಾಯ ಕೊಟ್ಟಾರು ?

ಇದು ಮಾತ್ರವೇ ಅಲ್ಲಾ, ಕಂಪನಿಗಳಿಗೆ ಕೃಷಿ ಉತ್ಪನ್ನಗಳು ತಮಗೆ ಬೇಡವೆನಿಸಿದಾಗ ರೈತನ ಮೇಲೆ ಹಲವು ಒತ್ತಡಗಳನ್ನು ಹೇರಿ ಒಪ್ಪಂದ ಮುರಿದುಕೊಂಡು ರೈತನಿಗೆ ನಷ್ಟ ಉಂಟು ಮಾಡಲು ಅವಕಾಶ ಮಾಡಲಾಗಿದೆ.

'ರೈತ' ಪದದ ಕಾರ್ಪೊರೇಟ್–ಪರ ವ್ಯಾಖ್ಯಾನ

ಇದಲ್ಲದೇ, ಈ ಸುಗ್ರೀವಾಜ್ಞೆಗಳು ರೈತ ಪದದ ವ್ಯಾಖ್ಯಾನವನ್ನು ಕಾರ್ಪೊರೇಟ್ ಕಂಪನಿಗಳಿಗೆ ಅನುಕೂಲವಾಗುವಂತೆ ವಿಸ್ತರಿಸಿವೆ. ಯಾರು ಸ್ವತಃ ಕೃಷಿ ಉತ್ಪನ್ನಗಳಲ್ಲಿ ತೊಡಗುವನೋ ಆತನು ರೈತ, ಅದೇ ರೀತಿ, ಇದುವರೆಗೆ,ಯಾರು ಕೃಷಿಕೂಲಿಕಾರರು ಮತ್ತು ಕಾರ್ಮಿಕರನ್ನಿಟ್ಟುಕೊಂಡು ಬೇಸಾಯದಲ್ಲಿ ತೊಡಗುವನೋ, ಆತನು ಕೂಡಾ ರೈತ ಎನ್ನಲಾಗಿತ್ತು. ಆದರೇ, ಈ ತಿದ್ದುಪಡಿಗಳಲ್ಲಿ ರೈತರ ಉತ್ಪಾದಕರ ಸಂಸ್ಥೆಗಳು ಹಾಗೂ ಸಂಘಗಳನ್ನು ರೈತ ವ್ಯಾಖ್ಯಾನದೊಳಗೆ ತಂದಿವೆ. ಈ ಬಹುತೇಕ ಸಂಸ್ಥೆಗಳು ಮತ್ತು ಸಂಘಗಳು ಇಂತಹ ಕಾರ್ಪೊರೇಟ್ ಸಂಸ್ಥೆಗಳ ಮಾರ್ಗದರ್ಶನದಲ್ಲಿ ಮತ್ತು ಅವುಗಳ ನೆರವಿನೊಂದಿಗೆ ಕಾರ್ಯನಿರ್ವಹಿಸುತ್ತವೆ. ಯಾವ ಕ್ಷಣದಲ್ಲಿ ಬೇಕಾದರೂ ಅವುಗಳನ್ನು ತಮ್ಮ ನೇರ ವಶಕ್ಕೆ ತಗೆದು ಕೊಂಡು ಬೇನಾಮಿ ಹೆಸರಿನಲ್ಲಿ ನಡೆಸುವ ಸಂಭವಗಳಿವೆ.

ಅದೇ ರೀತಿ, ವ್ಯಕ್ತಿಯ ಪದದ ವ್ಯಾಖ್ಯಾನಕ್ಕೆ ಏಕ ವ್ಯಕ್ತಿ ಎಂಬುದರ ಜೊತೆ ಕಂಪನಿಗಳನ್ನು ವ್ಯಕ್ತಿ ಯೆಂದು ಸೇರ್ಪಡೆ ಮಾಡಲಾಗಿದೆ. ಈ ಹೊಸ ವ್ಯಾಖ್ಯಾನಗಳು ಕಾರ್ಪೊರೇಟ್ ಕಂಪನಿಗಳ ಕೈಗೆ ನೇರವಾಗಿ ಮತ್ತು ಅಪ್ರತ್ಯಕ್ಷವಾಗಿ ಹತ್ತಾರು ಸಾವಿರ ಎಕರೆ ಜಮೀನುಗಳು ವರ್ಗಾವಣೆಗೊಳ್ಳಲು ಸಹಾಯ ಮಾಡುತ್ತವೆ. ಈ ಹೊಸ ವ್ಯಾಖ್ಯಾನಗಳಂತೆ ಈ ದೈತ್ಯ ಕಂಪನಿಗಳು, ಇವುಗಳ ಮರೆಯಲ್ಲಿ ಸರಕಾರದಿಂದ ನೂರಾರು ಕೋಟಿ ರೂಗಳ ರಿಯಾಯಿತಿ ಮತ್ತು ವಿವಿಧ ರೀತಿಯ ಪ್ರಯೋಜನ ಪಡೆಯಲಿವೆ. ಮಾತ್ರವಲ್ಲಾ,

ಇಂತಹ ಪ್ರತಿಯೊಂದು ಸಂದರ್ಭದಲ್ಲೂ ಸಾವಿರಾರು ರೈತ ಕುಟುಂಬಗಳನ್ನು ವ್ಯವಸಾಯದಾಚೆ ದೂಡಲಿವೆ.

ಇದು ಮಾತ್ರವೇ ಅಲ್ಲಾ, ಅದಾಗಲೇ ಕೇಂದ್ರ ಹಾಗೂ ರಾಜ್ಯ ಸರಕಾರಗಳು, ದೇಶ ಮತ್ತು ರಾಜ್ಯದಾದ್ಯಂತ ಕೋಟ್ಯಾಂತರ ಎಕರೆ ಜಮೀನುಗಳನ್ನು ಇಂತಹ ಕಾರ್ಪೊರೇಟ್ ಕಂಪನಿಗಳಿಗೆ ವರ್ಗಾವಣೆ ಮಾಡಲು ಕ್ರಮ ವಹಿಸಿವೆ. ಉದಾಹರಣೆಗೆ, ಕೇಂದ್ರ ಸರಕಾರ ಅದಾಗಲೇ 6.5 ಕೋಟಿ ಎಕರೆ ಫಲವತ್ತಾದ ಬೀಳು ಭೂಮಿ ಅಭಿವೃದ್ಧಿಯನ್ನು ಕಾರ್ಪೊರೇಟ್ ಕಂಪನಿಗಳ ಮೂಲಕ ಸಾಧಿಸಲು ' ಕೃಷಿ ಭೂಮಿ ಗೇಣಿ ಅಧಿ ನಿಯಮ – 2016 ನ್ನು ಜಾರಿಗೆ ತರುತ್ತಿದೆ.

ಕರ್ನಾಟಕ ಭೂ ಸುಧಾರಣಾ ಕಾಯ್ದೆಗೆ ಈಚೆಗೆ ಮಾಡಲಾದ ತಿದ್ದುಪಡಿಗಳು, ನೇರವಾಗಿ ಮತ್ತು ಬೇನಾಮಿ ಹೆಸರಿನಲ್ಲಿ ಹತ್ತಾರು ಸಾವಿರ ಎಕರೆ ಜಮೀನುಗಳನ್ನು ಪಡೆಯಲು ಅವಕಾಶ ಮಾಡಿವೆ. ಅದು ಮಾತ್ರವೇ ಅಲ್ಲಾ, ದೇಶದಾದ್ಯಂತ ಬಡವರು, ದಲಿತರು, ಮಹಿಳೆಯರು ಸ್ವಂತ ಶ್ರಮ ಮತ್ತು ಬಂಡವಾಳ ಹಾಕಿ ಅಭಿವೃದ್ಧಿ ಪಡಿಸಿರುವ ಸರಕಾರಿ ಜಮೀನುಗಳನ್ನು ಮತ್ತು ನಗರ ವ್ಯಾಪ್ತಿಯ ಇಂತಹ ಜಮೀನುಗಳನ್ನು ಹಾಗೂ ಅರಣ್ಯ ಭೂಮಿಗಳನ್ನು, ಅವರಿಂದ ಕಿತ್ತು ಭೂ ಬ್ಯಾಂಕ್ ಗೆ ಸೇರ್ಪಡೆ ಮಾಡಲಾಗುತ್ತಿದೆ. ಅದನ್ನು ಈ ಕಾರ್ಪೊರೇಟ್ ಕಂಪನಿಗಳಿಗೆ ಮೀಸಲಿರಿಸಲಾಗಿದೆ. ಇಂತಹ ಎಲ್ಲ ಜಮೀನುಗಳಲ್ಲಿ,ಅವರು ಅತ್ಯಂತ ಆದುನಿಕ ತಂತ್ರಜ್ಞಾನ ಬಳಸಿ ಕಾರ್ಪೊರೇಟ್ ಕೃಷಿಗೆ ತೊಡಗಿದಲ್ಲಿ ಇಂತಹ ಕಂಪನಿಗಳ ಜೊತೆ ಈ ಸಣಕಲು ರೈತ ಸ್ಪರ್ಧಿಸಿ ಸ್ವತಂತ್ರವಾಗಿ ನಿಲ್ಲ ಬಲ್ಲನೆಂಬುದು ಕುಹಕವಾಗುತ್ತದೆ.

ಒಂದು ವೇಳೆ, ಮುಂದೆ ತಮಗಾದ ಕಹಿ ಅನುಭವಗಳಿಂದ ರೈತರು ಮುಂಗಡ ವ್ಯಾಪಾರದಿಂದ ಹೊರ ಬಂದು, ಸ್ವತಂತ್ರ ವಾಗಿ ವ್ಯವಸಾಯದಲ್ಲಿ ತೊಡಗಲು ಇಚ್ಛಿಸಿದಲ್ಲಿ ಕೃಷಿಗೆ ಬೇಕಾದ ಹೂಡಿಕೆಗಳಾದ ಲಾಗುವಾಡುಗಳನ್ನು, ಸಾಲವನ್ನು ನೀಡುವವರಾರು ? ಬಹಳ ಕಠಿಣ ಪ್ರಯತ್ನ ಮಾಡಿ ಬೆಳೆಯನ್ನು ಬೆಳೆದರೂ ಅದನ್ನು ಖರೀದಿಸುವವರಾರು ? ಎಂಬ ಪ್ರಶ್ನೆಗಳನ್ನು ಅವರು ಎದುರಿಸಲಿದ್ದಾರೆ. ಅದಾಗಲೇ ಕೃಷಿಯ ಎಲ್ಲಾ ಆಯಾಮಗಳನ್ನು ಆಕ್ರಮಿಸಿಕೊಂಡಿರುವ ಕಾರ್ಪೊರೇಟ್ ಕಂಪನಿಗಳಿಗೆ ಮಂಡಿಯೂರುವುದೊಂದೆ ದಾರಿಯಾಗುತ್ತದೆ.

ಆದ್ದರಿಂದ, ಮೇಲ್ನೋಟಕ್ಕೆ ರೈತರಿಗೆ ಸಹಕಾರಿ ಎಂಬಂತೆ ಈ ಸುಗ್ರೀವಾಜ್ಞೆಗಳು ಕಂಡು ಬಂದರೂ, ಒಳ ನೋಟದಲ್ಲಿ ಅವು ಲೂಟಿಕೋರ ಕಾರ್ಪೊರೇಟ್ ಕಂಪನಿಗಳ ಪರವಾದ ನವ ಉದಾರೀಕರಣದ ನೀತಿಗಳನ್ನು ಜಾರಿಗೆ ತರುವ ಮತ್ತು ದೇಶದ ಕೃಷಿಯನ್ನು ಹಾಗೂ ಗ್ರಾಹಕ ಮಾರುಕಟ್ಟೆಯನ್ನು ಕಾರ್ಪೊರೇಟ್ ಕಂಪನಿಗಳಿಗೆ ವಹಿಸಿಕೊಡುವ ಹುನ್ನಾರ ಹೊಂದಿರುವುದು ಇದರಿಂದ ತಿಳಿಯುತ್ತದೆ.

ಕೇಂದ್ರ ಸರಕಾರ ಹೇಳುತ್ತಿರುವುದು ಬರೀ ಬೊಗಳೆ ಎಂಬುದು ಈ ವಿಶ್ಲೇಷಣೆಯಿಂದ ಸಾಬೀತಾಗುತ್ತದೆ. ಆದ್ದರಿಂದ ಇವುಗಳ ಅಪಾಯಕ್ಕೆ ದೇಶ ಸಿಲುಕದಂತೆ ರೈತರು ಹಾಗೂ ಎಲ್ಲಾ ನಾಗರೀಕರು ಕ್ರಮ ವಹಿಸ ಬೇಕಾಗಿದೆ.

ಅದೇ ರೀತಿ, ಇಡೀ ದೇಶ ಕೋವಿಡ್ – 19 ರ ವಿರುದ್ದದ ಹೋರಾಟದ ಸಂಕಷ್ಟದಲ್ಲಿರುವಾಗ, ವೈರಾಣು ನಿಯಂತ್ರಣಕ್ಕೆ ಬಾರದೇ ದೇಶದಾದ್ಯಂತ ವ್ಯಾಪಕವಾಗಿ ವಿಸ್ತಾರಗೊಳ್ಳುತ್ತಾ ನಗ್ನ ನರ್ತನ ಮಾಡುತ್ತಿರುವಾಗ, ಕೇಂದ್ರ ಸರಕಾರ ಅದರ ಕುರಿತು ವಿಶೇಷ ಗಮನ ಹರಿಸುವ ಬದಲು, ಈ ಸಂಕಷ್ಟದ ಮರೆಯಲ್ಲಿ ಈ ಬಗ್ಗೆ ಕ್ರಮ ವಹಿಸಿರುವುದು ಮತ್ತು ಕೃಷಿಯ ವಿಚಾರವನ್ನು ನಮ್ಮ ಸಂವಿಧಾನವು ರಾಜ್ಯ ಪಟ್ಟಿಯಲ್ಲಿ ಸೇರಿಸಿದ್ದರೂ, ಅವುಗಳನ್ನು ಕೇಳದೇ, ಸಂವಿಧಾನದ ಒಕ್ಕೂಟವಾದಿ ಸ್ವರೂಪವನ್ನು ಉಲ್ಲಂಘಿಸಿ, ಲೋಕ ಸಭೆಯಲ್ಲೂ ಚರ್ಚಿಸದೇ, ಏಕಾಏಕಿ ಸುಗ್ರಿವಾಜ್ಞೆಗಳ ಆದೇಶ ಪ್ರಕಟಿಸಿದಾಗಲೇ ಇವುಗಳ ಔಚಿತ್ಯದ ಕುರಿತು ಅನು ಮಾನ ಪಡುವಂತಾಗಿತ್ತು!

ಈಗ ಹೇಳಿ? ಈ ಸುಗ್ರೀವಾಜ್ಞೆಗಳು ಯಾರ ಪರ?! ●

ಶತಮಾನೋತ್ಸವ ಲೇಖನ ಮಾಲೆ-30

100

1920-2020

ಎರಡನೇ ಮಹಾಧಿವೇಶನ –1948

ಮಹಾಧಿವೇಶನವು ಹಿಂದಿನ ಬಲ ಸುಧಾರಣಾವಾದಿ ಮಾರ್ಗಚ್ಯುತಿಗಳನ್ನು ಸರಿಯಾಗಿಯೇ ನಿರ್ಬಂಧಿಸಿತಾದರೂ, ಅದನ್ನು ತಿದ್ದುವಾಗ, ಅದು ಎಡ–ಪಂಥೀಯವಾದಿ ನುಉವನ್ನು ಅಳವಡಿಸಿತು. ಹೊಸ ಭಾರತೀಯ ಪ್ರಭುತ್ವದ ಗುಣಲಕ್ಷಣಗಳನ್ನು ಮಹಾಧಿವೇಶನವು ಸರಿಯಾಗಿ ಅಂದಾಜು ಮಾಡಲಿಲ್ಲ. ಹಲವಾರು ಧೀರೋದಾತ್ತ ಹೋರಾಟಗಳ ಹೊರತಾಗಿಯೂ, ಎರಡನೇ ಮಹಾಧಿವೇಶನದ ತೀರ್ಮಾನಗಳನ್ನು ಜಾರಿಮಾಡಿದ್ದರ ಪರಿಣಾಮವು ಪಕ್ಷವನ್ನು ಮೂಲೆಗುಂಪಾಗಿಸಿತು ಮತ್ತು ಅನೇಕ ಸ್ಥಳಗಳಲ್ಲಿ ಪಕ್ಷದ ಸಂಘಟನೆಯು ಛಿದ್ರವಾಯಿತು ಕೂಡ. ಅದು ಪಕ್ಷದೊಳಗಡೆ ಬಿಕ್ಕಟ್ಟನ್ನು ಸೃಷ್ಟಿಸಿತು ಮತ್ತು ಪಕ್ಷದೊಳಗಡೆ ದೊಡ್ಡ ಚರ್ಚೆಗೆ ಹಾದಿ ಮಾಡಿತು.

ಕನ್ನಡಕ್ಕೆ: ಟಿ.ಸುರೇಂದ್ರ ರಾವ್

ಭಾರತ ಕಮ್ಯುನಿಸ್ಟ್ ಪಕ್ಷದ ಎರಡನೇ ಮಹಾಧಿವೇಶನವು, ಮೊದಲನೇ ಮಹಾಧಿವೇಶನದ ಐದು ವರ್ಷಗಳ ನಂತರ, ಕಲ್ಕತ್ತಾದಲ್ಲಿ 1948ರ ಫೆಬ್ರವರಿ 28ರಿಂದ ಮಾರ್ಚ್ 6 ರವರೆಗೆ ನಡೆಯಿತು. ಈ ಐದು ವರ್ಷಗಳು ಕಮ್ಯುನಿಸ್ಟ್ ಪಕ್ಷಕ್ಕೆ ಅತ್ಯಂತ ಕಷ್ಟದ ಮತ್ತು ಹೋರಾಟದ ವರ್ಷಗಳಾಗಿದ್ದವು; ಮಿಥ್ಯಾಪವಾದಗಳು ಮತ್ತು ವಿರೋಧಗಳ ಹೊರತಾಗಿಯೂ, ಭೀಕರ ದಬ್ಬಾಳಿಕೆಯಾದಾಗಲೂ, ಭಾರತದಲ್ಲಿನ ಒಂದು ಪ್ರಭಾವಶಾಲಿ ಕ್ರಾಂತಿಕಾರಿ ಶಕ್ತಿಯಾಗಿ ಔನ್ನತ್ಯವನ್ನು ಪಡೆದು ಬೆಳೆದಿತ್ತು ಈ ವರ್ಷಗಳಲ್ಲಿ.

ಭಾರತದಾದ್ಯಂತ ಚದುರಿದ್ದ, ಎಲ್ಲಿ ದೇಶದ ದುಡಿಯುವ ಜನಸಮುದಾಯ ನಿಜವಾದ ಸ್ವಾತಂತ್ರ್ಯ ಮತ್ತು ಪ್ರಜಾಸತ್ತಾತ್ಮಕ ಭಾರತಕ್ಕಾಗಿ ಹೋರಾಟ ಮಾಡುತ್ತಿದ್ದರೋ, ಅಂತಹ ಅನೇಕಾನೇಕ ಹೋರಾಟದ ಕಣಗಳಿಂದ ನೇರವಾಗಿ 632 ಪ್ರತಿನಿಧಿಗಳು ಮಹಾಧಿವೇಶನದಲ್ಲಿ ಭಾಗವಹಿಸಿದ್ದರು. ಭಾರಿ ಮುಷ್ಕರಗಳು ನಡೆಯುತ್ತಿದ್ದ ಕಾರ್ಮಿಕ ವರ್ಗದ ಕೇಂದ್ರಗಳಾದ ಬೊಂಬಾಯಿ, ಕಲ್ಕತ್ತಾ, ಕಾನ್ಪುರ್, ಮಧುರೈ ಮತ್ತು ಕೊಯಮತ್ತೂರಿನಿಂದ ಅವರು ಬಂದಿದ್ದರು; ರೈತ ಹೋರಾಟಗಳ ಕೇಂದ್ರಗಳಾದ ಬಿಹಾರ, ಉತ್ತರ ಪ್ರದೇಶ, ತಮಿಳುನಾಡು, ಆಂಧ್ರಾ ಪ್ರದೇಶ ಮತ್ತು ಮಲಬಾರಿನಿಂದ, ಗುಲಾಮ ಪದ್ಧತಿ ಮತ್ತು ಭೂಮಾಲಕರ ದಬ್ಬಾಳಿಕೆಗಳ ವಿರುದ್ಧ ಧೀರೋದಾತ್ತ ಹೋರಾಟ ಮಾಡುತ್ತಿದ್ದ ವಾರಲೀ ರೈತರು ಮಹಾರಾಷ್ಟ್ರದಿಂದ; ರಾಜಪುತಾನಾ, ಮಧ್ಯ ಭಾರತದ ರಾಜಸಂಸ್ಥಾನಗಳಲ್ಲಿನ ನಿರಂಕುಶಪ್ರಭುತ್ವದ ವಿರುದ್ಧದ ಸಂಗ್ರಾಮದ ರಣಭೂಮಿಯಿಂದ ಮತ್ತು ನಿಜಾಮರ ನಿರಂಕುಶ ಪ್ರಭುತ್ವದ ವಿರುದ್ಧ ಸಶಸ್ತ್ರ ಹೋರಾಟ ಮಾಡಿ ದಂತಕತೆಯಾದ ತೆಲಂಗಾಣ ರೈತರು ಇವರೆಲ್ಲರೂ ಮಹಾಧಿವೇಶನದಲ್ಲಿ ಪಾಲ್ಗೊಂಡಿದ್ದರು. ಆಗ ತಾನೇ ಬೊಂಬಾಯಿ, ಕಲ್ಕತ್ತಾ ಮತ್ತು ಕಾನ್ಪುರದ ವಿದ್ಯಾರ್ಥಿ ಚಳುವಳಿಯಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳು ಅಲ್ಲಿ ಪ್ರತಿನಿಧಿಗಳಾಗಿ ಬಂದಿದ್ದರು; ಮತ್ತು ದೇಶದ ಹಲವಾರು ರಾಜ್ಯಗಳಲ್ಲಿ ಮಹಿಳಾ ಚಳುವಳಿಯನ್ನು ಕಟ್ಟಲು ಕಟಿಬದ್ಧರಾಗಿ ಹೋರಾಡುತ್ತಿದ್ದ 15 ಮಹಿಳೆಯರು ಅಲ್ಲಿ ಪ್ರತಿನಿಧಿಗಳಾಗಿದ್ದರು.

ಇದೇ ವರ್ಷಗಳಲ್ಲಿ, ಕಮ್ಯುನಿಸ್ಟ್ ಪಕ್ಷವು ಮಹಾನ್ ಹೋರಾಟಗಳಿಗೆ ನೇತೃತ್ವ ನೀಡಿತ್ತು, ಮತ್ತು ಅದರ ಪರಿಣಾಮವಾಗಿ ಇಡೀ ದೇಶದಲ್ಲಿ ಕಮ್ಯುನಿಸ್ಟ್ ಪಕ್ಷವು ಬಲಶಾಲಿಯಾಗಿ ಬೆಳೆದಿತ್ತು. ಅದರ ಸದಸ್ಯತ್ವವು 50,000ಕ್ಕೆ ಏರಿತ್ತು. ಅದೇ ರೀತಿಯಲ್ಲಿ ಕಾರ್ಮಿಕರು, ರೈತರು, ವಿದ್ಯಾರ್ಥಿಗಳ ನಡುವೆ ಕೂಡ ಸಂಘಟಿತ ಶಕ್ತಿಯಾಗಿ ಬೆಳೆದಿತ್ತು.

ಬೆಳೆದು ಬರುತ್ತಿದ್ದ ರೈತರ ಮತ್ತು ಕಾರ್ಮಿಕರ ಹೋರಾಟಗಳಲ್ಲಿ, ಹಿಂದೂ–ಮುಸ್ಲಿಂ ಐಕ್ಯತೆಯನ್ನು ಗಟ್ಟಿಗೊಳಿಸುವಲ್ಲಿ, ಮತ್ತು ದುಡಿಯುವ ಜನರಲ್ಲಿದ್ದ ಸ್ಪೃಶ್ಯರು ಮತ್ತು ಅಸ್ಪೃಶ್ಯರ ನಡುವೆ ಸೌಹಾರ್ದತೆ ಸಾಧಿಸುವಲ್ಲಿ ಕಮ್ಯುನಿಸ್ಟ್ ಪಕ್ಷವು ತೊಡಗಿದ್ದಾಗ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗಿನ ಮುಖಂಡರುಗಳು ಸಾಮ್ರಾಜ್ಯಶಾಹಿಗಳ ಜತೆ ಶಾಮೀಲಾಗುವ ದಾರಿ ಹಿಡಿದಿದ್ದರು ಮತ್ತು ಜನರ ಹೋರಾಟಗಳನ್ನು ಅಡ್ಡಿಪಡಿಸುತ್ತಿದ್ದರು, ಆ ದಾರಿ ಕೋಮುವಾದಿ ಹಿಂಸೆಗೆ ದಾರಿ ಮಾಡಿತು ಮತ್ತು ಅಂತಿಮವಾಗಿ ದೇಶವಿಭಜನೆಗೆ ಕಾರಣವಾಯಿತು. ಕೋಮು ಗಲಭೆಗಳನ್ನು ಹುಟ್ಟುಹಾಕುವಲ್ಲಿನ ಸಾಮ್ರಾಜ್ಯಶಾಹಿಗಳ ಪಾತ್ರವನ್ನು ಪಕ್ಷವು ಉಗ್ರವಾಗಿ ಖಂಡಿಸಿದೆ. ಪಂಜಾಬ್ ಮತ್ತು ಬಂಗಾಳದಲ್ಲಿನ ವಿಭಜನೋತ್ತರ ಕೋಮು ಗಲಭೆಗಳ ಮಧ್ಯೆ, ಕೊಲೆಪಾತಕ ಗಲಭೆಕೋರರಿಂದ ಅಲ್ಪಸಂಖ್ಯಾತ ಸಮುದಾಯದವರನ್ನು ರಕ್ಷಿಸಲು ಕಮ್ಯುನಿಸ್ಟ್ ಪಕ್ಷದ



ಸದಸ್ಯರು ಅಪರೂಪದ ಕಲಿತನ ತೋರಿದ್ದಾರೆ. ಕಲ್ಕತ್ತಾ ಮತ್ತು ದೆಹಲಿಯಲ್ಲಿ, ಗಲಭೆಗಳನ್ನು ಹಿಮ್ಮೆಟ್ಟಿಸಲು ಕಮ್ಯುನಿಸ್ಟ್ ಸದಸ್ಯರು ಧೀರೋದಾತ್ತ ಮತಪ್ರದರ್ಶನಗಳನ್ನು ಸಂಘಟಿಸಿದ್ದಾರೆ.

ಕಾರ್ಮಿಕರು, ರೈತರು, ವಿದ್ಯಾರ್ಥಿಗಳ ಹೋರಾಟದ ನಾಯಕತ್ವ ಹಾಗೂ ಮುಂಚೂಣಿ ದಳವಾಗಿದ್ದ ಕಮ್ಯುನಿಸ್ಟ್ ಪಕ್ಷವು, 1946–47ರ ಕಾಲದ ಕಾಂಗ್ರೆಸ್ ಸರ್ಕಾರಗಳ ದಬ್ಬಾಳಿಕೆಯ ಪ್ರಮುಖ ಗುರಿಯಾಗಿತ್ತು. ಕಮ್ಯುನಿಸ್ಟ್ ಕಾರ್ಯಕರ್ತರು ಮತ್ತು ಸಾಮಾನ್ಯ ಸದಸ್ಯರುಗಳು ಪೋಲಿಸರ ಗೋಲಿಬಾರಿನಿಂದ ಜೀವ ಕಳೆದುಕೊಂಡರು ಮತ್ತು ಸಾವಿರಾರು ಜನರನ್ನು ಜೈಲಿಗೆ ಹಾಕಿದರು. ಆದರೆ ಇಂತಹ ತೀವ್ರ ದಾಳಿಗಳ ಎದುರು ಅವರಾಗಲೀ ಅಥವಾ ಕಮ್ಯುನಿಸ್ಟ್ ನಾಯಕತ್ವದಲ್ಲಿದ್ದ ಜನರಾಗಲೀ ಯಾರೂ ವಿಚಲಿತರಾಗಲಿಲ್ಲ ಮತ್ತು ಧೈರ್ಯಗುಂದಲಿಲ್ಲ.

ಈ ಹೋರಾಟಗಳನ್ನು ಪಕ್ಷವೇ ಮುನ್ನಡೆಸುತ್ತಿದ್ದಾಗ್ಯೂ, ತನ್ನ ನೀತಿ ಮತ್ತು ನಿಲುವುಗಳಲ್ಲಿ ಅದರ ಧೋರಣೆಯಲ್ಲಿ ಚಂಚಲತೆ ಮುಂದುವರೆದಿತ್ತು. ಇದು ಮೌಂಟ್‌ಬ್ಯಾಟನ್ ಒಪ್ಪಂದವನ್ನು ಸಾಮ್ರಾಜ್ಯಶಾಹಿಯ ಒಂದು ಹೊಸ ಆಕ್ರಮಣಕಾರಿ ತಂತ್ರವೆಂದು ನೋಡುವಲ್ಲಿನ ವಿಫಲತೆಯಲ್ಲಿ ಕಾಣಬಂತು; ರಾಷ್ಟ್ರೀಯ ಸರ್ಕಾರವನ್ನು ಅದೊಂದು ರಾಷ್ಟ್ರೀಯ ವಿಮೋಚನೆ ಕಡೆಗಿನ ರಣನೀತಿಯ ಅಸ್ತ್ರವೆಂದು ಪರಿಗಣಿಸಿತು. ಸರ್ಕಾರವು ಭಾರತೀಯ ಸ್ವಾತಂತ್ರ್ಯ ಚಳುವಳಿಯ ಗುರಿಯನ್ನೇ ಕಡೆಗಣಿಸಿ ಜನರ ಮೇಲೆ ದಾಳಿ ನಡೆಸುತ್ತಿದ್ದಾಗ, ಆ ಧೋರಣೆಯು ಪಕ್ಷ 'ನೆಹರೂ ಸರ್ಕಾರಕ್ಕೆ ಸಂಪೂರ್ಣ ಬೆಂಬಲ' ಮತ್ತು 'ಸರ್ಕಾರ ಮತ್ತು ಜನರ ನಡುವಿನ ಸಂಯುಕ್ತ ಸರ್ಕಾರ' ಎಂಬ ಘೋಷಣೆ ನೀಡುವಂತೆ ಮಾಡಿತು.

ಜುಲೈ–ಆಗಸ್ಟ್ 1946ರಲ್ಲಿ, ಪಕ್ಷದ ಕೇಂದ್ರ ಸಮಿತಿಯು 'ಕ್ರಾಂತಿಕಾರಿ ಬಂಡಾಯದ ಸ್ಥಿತಿ ಇದೆ' ಎಂದು ಪರಿಗಣಿಸಿ, 'ಪ್ರಜಾಸತ್ತಾತ್ಮಕ ಕ್ರಾಂತಿಯ ಸಾಧನೆಗಾಗಿ ಆಂಶಿಕ ಹೋರಾಟಗಳನ್ನು ಬೆಳಸಬೇಕು ಮತ್ತು ಜನರು ಅಧಿಕಾರವನ್ನು ಹಿಡಿಯಬೇಕು' ಎಂಬ ಘೋಷಣೆಗಳನ್ನು ನೀಡಿತು. ರೈಲ್ವೇ ಮತ್ತು ಜವಳಿ ಉದ್ಯಮಗಳಲ್ಲಿ ಮುಷ್ಕರಕ್ಕೆ ಮುಂದಾಳತ್ವ ನೀಡಿ, ಬಂಗಾಳದ ತೇಭಾಗಾ ರೈತ ಹೋರಾಟಕ್ಕೆ ನಾಯಕತ್ವ ಕೊಡಿ ಮತ್ತು ಉತ್ತರ ಪ್ರದೇಶ ಹಾಗೂ ಬಿಹಾರಗಳಲ್ಲಿ ಇಂತಹ ಹೋರಾಟಗಳನ್ನು ಶುರುಮಾಡಿ ಎಂದು ಕಾರ್ಯಕರ್ತರಿಗೆ ಕರೆ ನೀಡಿತು.

1947ರ ಡಿಸೆಂಬರಿನಲ್ಲಿ, ಕೇಂದ್ರ ಸಮಿತಿ ಸಭೆ ಸೇರಿ ಒಟ್ಟಾರೆ ಪರಿಸ್ಥಿತಿಯನ್ನು ಪರಾಮರ್ಶಿಸಿತು ಮತ್ತು ನೀತಿ ನಿರೂಪಕ ಹೇಳಿಕೆಯನ್ನು ಹಾಗೂ: 'ಬೂರ್ಜ್ವಾ ಮುಖಂಡರ ಶಾಮೀಲುಕೋರ ನೀತಿಯ ವಿರುದ್ಧ ಕ್ರಾಂತಿಕಾರಿ ರಕ್ಷಣೆ, ಪ್ರಜಾಸತ್ತಾತ್ಮಕ ರಂಗ ಕಟ್ಟಲು ಜನಸಮೂಹಗಳ ಹೋರಾಟಗಳನ್ನು ಕ್ರೋಢೀಕರಿಸುವ ನೀತಿ, ಪ್ರಜಾಪ್ರಭುತ್ವ ಕ್ರಾಂತಿ ಮತ್ತು ಜನತಾ ಸರ್ಕಾರದ ಸ್ಥಾಪನೆಯ ಸಾಧನೆಗಾಗಿ' ಧೋರಣೆಯನ್ನು ರೂಪೀಕರಿಸುವ ದಸ್ತಾವೇಜೊಂದನ್ನು ಅಂಗೀಕರಿಸಿತು. ಡಿಸೆಂಬರ್ ಸಭೆಯು ರಾಷ್ಟ್ರೀಯ ಸರ್ಕಾರವನ್ನು 'ಶಾಮೀಲು ಮತ್ತು ಶರಣಾಗತಿಯ ಸರ್ಕಾರ' ಎಂದು ಬಣ್ಣಿಸಿತು. ಪ್ರಜಾಸತ್ತಾತ್ಮಕ ರಂಗದ ಮೂಲಕ ಜನರ ಐಕ್ಯತೆಯನ್ನು ಪುನಃ ಸಂಘಟಿಸಿ ಎಂದು ಕಾರ್ಮಿಕ ವರ್ಗಕ್ಕೆ ಕರೆ ನೀಡಿತು; ಆ ಮೂಲಕ ಲಕ್ಷಾಂತರ ದುಡಿಯುವ ಜನರಿಗೆ ನಿಜವಾದ ಅಧಿಕಾರ ಸಿಕ್ಕ ಹಾಗಾಗುತ್ತದೆ. ರಾಷ್ಟ್ರೀಯ ಬಂಡವಳಿಗರು ವಿರೋಧ ಪಕ್ಷದ ಪಾತ್ರ ನಿರ್ವಹಿಸುವುದನ್ನು ನಿಲ್ಲಿಸಿದ್ದಾರೆ ಮತ್ತು ಕಾಂಗ್ರೆಸ್ ನಾಯಕತ್ವವು ಸಾಮ್ರಾಜ್ಯಶಾಹಿ ಪಾಳೆಯ ಸೇರಿಕೊಂಡಿದೆ. ಕಾಂಗ್ರೆಸ್ ಒಂದು ಸಂಘಟನೆಯಾಗಿ ಪ್ರಜಾಸತ್ತಾತ್ಮಕ ರಂಗದಲ್ಲಿ ಇರುತ್ತದೆ ಎಂಬ ಭ್ರಮೆ ಬೇಡ ಮತ್ತು ನಿಜವಾದ ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವಕ್ಕಾಗಿನ ಹೋರಾಟವನ್ನು ಕಾಂಗ್ರೆಸ್ ನಾಯಕರ ಶಾಮೀಲುಕೋರ ನೀತಿಗೆ ವಿರುದ್ಧವಾಗಿ ನಡೆಸಬೇಕು ಎಂದು ಅದು ಹೇಳಿತು.


ಈ ದಸ್ತಾವೇಜುಗಳನ್ನು ಪಕ್ಷದ ಸಾಮಾನ್ಯ ಕಾರ್ಯಕರ್ತರೆಲ್ಲರಿಗೂ ವಿತರಿಸಲಾಯಿತು, ಅದರ ಆಧಾರದಲ್ಲಿ ಪಕ್ಷದ ಪ್ರಾಂತೀಯ ಸಮ್ಮೇಳನಗಳಲ್ಲಿ ಮತ್ತು ಘಟಕಗಳಲ್ಲಿ ಪಕ್ಷದ ಆ ಸಾಮಾನ್ಯ ನಿಲುವನ್ನು ಚರ್ಚೆಗೆ ಬಿಡಲಾಯಿತು. ಎರಡು ತಿಂಗಳುಗಳ ಕಾಲ ಪಕ್ಷದ ಎಲ್ಲಾ ಸಾಮಾನ್ಯ ಕಾರ್ಯಕರ್ತರೂ ಅದರ ಬಗ್ಗೆ ಚರ್ಚೆ ಮಾಡಿದರು ಮತ್ತು ತಮ್ಮ ಹಿಂದಿನ ಕೆಲಸಕಾರ್ಯಗಳನ್ನು ಹಾಗೂ ತಮ್ಮ ಮೇಲ್ ಸಮಿತಿಗಳ ಕೆಲಸಗಳನ್ನೂ ಪರಿಶೀಲಿಸಿಕೊಂಡರು.

ಮಹಾಧಿವೇಶನದಲ್ಲಿ ಮೂರು ಪ್ರಮುಖ ವರದಿಗಳನ್ನು ಚರ್ಚಿಸಲಾಯಿತು – ಮೊದಲನೆಯದು, ಬಿ.ಟಿ.ರಣದೀವೆಯವರು ಮಂಡಿಸಿದ ರಾಜಕೀಯ ಸಿದ್ಧಾಂತದ ಕರಡು ವರದಿ; ಎರಡನೆಯದು, ಭೊವಾನಿ ಸೆನ್ ಮಂಡಿಸಿದ ಪಾಕಿಸ್ತಾನ ಕುರಿತ ವರದಿ; ಮತ್ತು ಮೂರನೆಯದು, ಬಿ.ಟಿ. ರಣದೀವೆಯವರೇ ಮಂಡಿಸಿದ ಕಳೆದ ಐದು ವರ್ಷಗಳಲ್ಲಿ ಪಕ್ಷವು ಅನುಸರಿಸಿದ ನೀತಿಗಳ ಸ್ವವಿಮರ್ಶಾ ಪರಿಶೀಲನೆ. ಒಂದರ ನಂತರ ಒಂದರಂತೆ ಈ ಮೂರು ವರದಿಗಳನ್ನು ಮಂಡಿಸಲಾಯಿತು ಮತ್ತು ಅದರ ಮೇಲಿನ ಪ್ರತಿನಿಧಿಗಳ ಚರ್ಚೆಯನ್ನು ಕೊನೆಯಲ್ಲಿ ಪ್ರಾರಂಭಿಸಲಾಯಿತು. ಸುಮಾರು ನೂರು ಪ್ರತಿನಿಧಿಗಳು ಈ ವರದಿಗಳ ಮೇಲೆ ಚರ್ಚೆ ಮಾಡಿದರು. ರಾಜಕೀಯ ನಿರ್ಣಯ ಮಂಡಿಸಿದ ರಣದೀವೆಯವರು, ಫ್ಯಾಸಿಸ್ಟ್–ವಿರೋಧಿ ಜನತಾ ಸಮರದಲ್ಲಿನ ಅವಧಿಯಲ್ಲಿ ಪಕ್ಷವು ತೆಗೆದುಕೊಂಡ ನಿಲುವು ಮೂಲತಃ ಸರಿಯಾಗಿತ್ತು ಎಂದು ಹೇಳಿದರು. 'ಫ್ಯಾಸಿಸಂನ ಮಿಲಿಟರಿ ಸೋಲು ತಾನೇತಾನಾಗಿ ಸಾಮ್ರಾಜ್ಯಶಾಹಿಯ ನಾಶಕ್ಕೆ ಮತ್ತು ನಿರ್ಮೂಲನೆಗೆ ಕಾರಣವಾಗುತ್ತದೆ ಮತ್ತು ತನ್ನಷ್ಟಕ್ಕೆ ತಾನೇ ಎಲ್ಲಾ ಜನರ ವಿಮೋಚನೆಯೂ ಆಗುತ್ತದೆ ಎಂಬ ತಪ್ಪು ತಿಳುವಳಿಕೆಯಿಂದ ಆ ಅವಧಿಯಲ್ಲಿ ಪ್ರಮಾದಗಳು ಆದವು. ಈ ಜನತಾ ಸಮರದ ಅವಧಿಯಲ್ಲಿ ಸಾಮ್ರಾಜ್ಯಶಾಹಿ ಪಾತ್ರವನ್ನು ಸಂಪೂರ್ಣವಾಗಿ ಕಡಿಮೆ ಅಂದಾಜು ಮಾಡುವುದರ ಮೂಲಕ ಸಾಮ್ರಾಜ್ಯಶಾಹಿಯನನು ಬಯಲಿಗೆಳೆಯುವ ಮತ್ತು ಫ್ಯಾಸಿಸ್ಟ್–ವಿರೋಧಿ ಸಮರಕ್ಕಾಗಿ ಸಿಕ್ಕ ಬೆಂಬಲದ ಚೌಕಟ್ಟಿನೊಳಗಡೆಯೇ ಅದರ ವಿರುದ್ಧ ಹೋರಾಡುವ ಕೆಲಸವನ್ನು ನಾವು ಮರೆತೆವು.' ಎಂದರು.

ಕೃಷಿ ನೀತಿ ಮತ್ತು ಉತ್ಪಾದನೆಯ ವಿಷಯದಲ್ಲಿ ಪಕ್ಷದ ನಿಲುವುಗಳ ಕುರಿತು ಸ್ವವಿಮರ್ಶಾತ್ಮಕವಾಗಿ ವಿವರಣೆ ನೀಡಿದ ಅವರು "ಹೆಚ್ಚು ಉತ್ಪಾದನೆ ಮಾಡಬೇಕೆಂದು ರೈತರನ್ನು ಸಂಘಟಿಸಿದ ಪ್ರಯತ್ನಗಳು ಸ್ವಲ್ಪ ಮಟ್ಟಿಗೆ ಸರಿಯಾಗಿಯೇ ಇದ್ದವಾದರೂ, ಸಾಮ್ರಾಜ್ಯಶಾಹಿ ಪಾಳೇಗಾರಿ ಸಂರಚನೆಯ ವಿರುದ್ಧದ ಪ್ರಧಾನ ಹೋರಾಟವನ್ನು ಸಡಿಲಗೊಳಿಸಬಾರದೆಂಬುದನ್ನು ಮರೆತು ಬಿಟ್ಟೆವು. ಕಾರ್ಮಿಕ ವರ್ಗದ ಬದುಕಿನ ಸ್ಥಿತಿಗತಿಗಳನ್ನು ರಕ್ಷಿಸುವ ಮಟ್ಟಿಗೆ ಉತ್ಪಾದನೆಗೆ ಧಕ್ಕೆ ಬಾರದಂತೆ ತಡೆಯುವುದು ಮತ್ತು ಮುಷ್ಕರ ಮಾಡದಿರುವುದು ಸರಿಯಾದದ್ದೇ ಆಗಿದೆ, ಆದರೆ ಎಲ್ಲಿಯತನಕ ಉತ್ಪಾದನೆಯು ಲಾಭಕೋರ ಬಂಡವಾಳಗಾರರು ಮತ್ತು ಸಾಮ್ರಾಜ್ಯಶಾಹಿ ಸರ್ಕಾರದ ಕೈಯಲ್ಲಿರುತ್ತದೋ, ಮತ್ತು ಅವರಿಗೆ ಲಾಭವೇ ಮುಖ್ಯವಾಗಿದ್ದು ಫ್ಯಾಸಿಸ್ಟ್–ವಿರೋಧಿ ಸಮರದ ಬಗ್ಗೆ ಆಸಕ್ತಿಯೇ ಇಲ್ಲದಿರುವಾಗ, ಉತ್ಪಾದನೆಯನ್ನು ಹೆಚ್ಚಿಸಲು ಅಥವಾ ಸಂಘಟಿಸಲು ಸಾಧ್ಯವಿಲ್ಲ ಎಂಬುದನ್ನು ನಾವು ಮನಗಾಣಬೇಕಿತ್ತು ಇದು ನಮ್ಮ ಮಾರ್ಗದರ್ಶಿ ಸೂತ್ರವಾಗಬೇಕಿತ್ತು." ಹೇಳಿದರು.

ಈ ವರದಿಯು ಎರಡು ಸುಧಾರಣವಾದಿ ಮಾರ್ಗಚ್ಯುತಿಗಳನ್ನು ಗುರುತಿಸಿದೆ: '1) ಸಾಮ್ರಾಜ್ಯಶಾಹಿಗಳ ವಿರುದ್ಧದ ನಮ್ಮ ಹೋರಾಟದ ತೀಕ್ಷ್ಣತೆಯನ್ನು ತಗ್ಗಿಸಲಾಗಿದೆ ಮತ್ತು 2) ಒಂದು ಸ್ವತಂತ್ರ ನೀತಿಯನ್ನು ಅನುಸರಿಸಿ ಬಂಡವಳಿಗರನ್ನು ಬಯಲಿಗೆಳೆಯುವ ಬದಲು ನಾವು ಅವರನ್ನು ಹಿಂಬಾಲಿಸಲು ಶುರು ಮಾಡಿದೆವು.' ಇದು ಹಿಂದೂ–ಮುಸ್ಲಿಂ ಪ್ರಶ್ನೆಗೆ ರಾಷ್ಟ್ರೀಯತೆಗಳ ಸ್ವಯಂನಿರ್ಧಾರದ ಘೋಷಣೆಯನ್ನು ಅನ್ವಯಿಸುವ ಪ್ರಶ್ನೆಯಲ್ಲಿ ವ್ಯಕ್ತವಾಯಿತು. ಆ ಪ್ರಶ್ನೆ ಪ್ರಧಾನವಾಗಿ ಎದ್ದಿದ್ದು ಏಕೆಂದರೆ ಹಿಂದೂ ಮುಸ್ಲಿಂ ಐಕ್ಯತೆಯನ್ನು ಮತ್ತು ಕಾಂಗ್ರೆಸ್ ಹಾಗೂ ಲೀಗಿನ ಐಕ್ಯತೆಯನ್ನು ಬೂರ್ಜ್ವಾ ನಾಯಕರುಗಳೇ ಸಾಧಿಸಬಹುದೆಂಬ ಭ್ರಮೆ ಪಕ್ಷಕ್ಕೆ

ಪುಟ 15 ನೋಡಿ



ಬಿ.ಟಿ. ರಣದಿವೆ

‘ಬಿಟ್ಟಿ ಕೂಳು’ ಮತ್ತು ಕೋವಿಡ್ ಜಾಡ್ಯ..... ಪುಟ 6 ರಿಂದ

ಪಡೆಯುವ ಬಿಟ್ಟಿ ಶ್ರಮದ ಮೌಲ್ಯರಾಶಿಯಲ್ಲಿ ಅಡಗಿದೆ. ಮಾರ್ಕ್ಸ್ ಹೇಳುವಂತೆ “ಒಂದು ಕೊನೆಯಲ್ಲಿ ಸಂಪತ್ತಿನ ಸಂಗ್ರಹವಾಗುವುದೆಂದರೆ, ಅದೇ ಸಮಯದಲ್ಲಿ, ಅದರ ಮತ್ತೊಂದು ಕೊನೆಯಲ್ಲಿ ‘ದುಃಖ, ಶ್ರಮದ ಯಾತನೆ, ಗುಲಾಮಗಿರಿ, ಅಜ್ಞಾನ, ಕ್ರೌರ್ಯ, ಮಾನಸಿಕ ಅಧಃಪತನಗಳ ಸಂಗ್ರಹವಾಗಿದೆ ಎಂದರ್ಥ”

ಸರಕು ಮತ್ತು ಸೇವೆಗಳ ಉತ್ಪಾದನೆಗಾಗಿ ಬಳಸುವ ಭೂಮಿ, ಕಟ್ಟಡ, ಯಂತ್ರ, ಕಚ್ಚಾ ವಸ್ತುಗಳು, ಹಣ ಶ್ರಮ ಎಲ್ಲವೂ ಉತ್ಪಾದನಾ ಸಾಧನಗಳು. ಆದರೆ ಶ್ರಮವೊಂದನ್ನು ಬಿಟ್ಟು ಉಳಿದೆಲ್ಲವೂ ನಿರ್ಜೀವ ಉತ್ಪಾದನಾ ಸಾಧನಗಳು. ಶ್ರಮವೊಂದೇ ಸಜೀವ ಉತ್ಪಾದನಾ ಸಾಧನ. ಈ ಜೀವಂತ ಸಾಧನವಿಲ್ಲದಿದ್ದರೆ ಉತ್ಪಾದನೆ ಸಾಧ್ಯವಿಲ್ಲ. ಈ ನಿರ್ಜೀವ ಉತ್ಪಾದನಾ ಸಾಧನಗಳು ಸುಧಾರಿಸಿದಂತೆ, ಬದಲಾದಂತೆ, ಯಂತ್ರೋಪಕರಣಗಳಲ್ಲಿ ಹೊಸ ಹೊಸ ಅವಿಷ್ಕಾರಗಳು ನಡೆದಂತೆ, ಉತ್ಪಾದನಾ ವಿಧಾನಗಳೂ ಬದಲಾಗುತ್ತವೆ. ಅವನ್ನು ಅನುಸರಿಸಿ ಬಂಡವಳಿಗ ಮತ್ತು ಶ್ರಮಿಕರ ನಡುವೆ ಇರುವ ಉತ್ಪಾದನಾ ಸಂಬಂಧಗಳೂ ಬದಲಾಗುತ್ತವೆ. ಅವುಗಳೊಂದಿಗೆ ಇಡೀ ಸಮಾಜದ ಸ್ವರೂಪವೇ ಮತ್ತೆ ಮೊದಲಿನಂತಾಗಲು ಸಾಧ್ಯವೇ ಇಲ್ಲದಂತೆ ಬದಲಾಗುತ್ತದೆ.

ಶ್ರಮಿಕರು ಬಂಡವಳಿಗರೊಂದಿಗಿನ ಈ ಘೋರ ಅನ್ಯಾಯದ ವ್ಯವಹಾರಕ್ಕೆ ಏಕೆ ಒಪ್ಪುತ್ತಾರೆ? ಮೊದಲನೆಯ ಕಾರಣ ಉತ್ಪಾದನಾ ಸಾಧನಗಳು ಬಡವರಾದ ಶ್ರಮಿಕರ ಕೈಲಿ ಇರುವುದಿಲ್ಲ. ಕಾಲಕಾಲಕ್ಕೆ ಸುಧಾರಿಸುವ ಯಂತ್ರಗಳನ್ನು, ಅವುಗಳ ಹೊಸ ಹೊಸ ಆವಿಷ್ಕಾರಗಳನ್ನು ಕೊಂಡುಕೊಳ್ಳುವುದು ಬಡವರಾದ ಶ್ರಮಿಕರಿಗೆ ಸಾಧ್ಯವಿಲ್ಲ. ಹೀಗಾಗಿ ತಮ್ಮ ಶ್ರಮವನ್ನು ಬಂಡವಳಿಗರಿಗೆ ಮಾರುವುದನ್ನು ಬಿಟ್ಟು ಅವರಿಗೆ ಬೇರೆ ದಾರಿಯಿಲ್ಲ. ಎರಡನೆಯ ಕಾರಣ ಇದು ಅನ್ಯಾಯವೆಂದು ಮಾರ್ಕ್ಸ್ ‘ಕ್ಯಾಪಿಟಲ್’ ಬರೆದು ವಿವರಿಸುವವರೆಗೂ ಶ್ರಮಿಕರಿಗೆ ಗೊತ್ತಿರಲಿಲ್ಲ. ಬಂಡವಳಿಗರಿಗೂ ಗೊತ್ತಿರಲಿಲ್ಲ. ಈಗಲೂ ಬಹುಮಂದಿ ಶ್ರಮಿಕರಿಗೆ ಗೊತ್ತಿಲ್ಲ.

ಬಹು ಹಿಂದಿನಿಂದಲೂ ಭೂಮಿ ಮತ್ತು ನೈಸರ್ಗಿಕ ಸಂಪನ್ಮೂಲಗಳ ಒಡೆತನವು ಬಲಿಷ್ಠರ ಕೈಲೇ ಇದೆ. ಯಾವುದೋ ಕಾಡಿನಲ್ಲಿ ಹೇಗೋ ಗೆಡ್ಡೆ ಗೆಣಸು ತಿಂದುಕೊಂಡು, ಬೇಟೆಯಾಡಿಕೊಂಡು ಅಥವಾ ನದಿಗಳಲ್ಲಿ ಮೀನು ಹಿಡಿದುಕೊಂಡ ಬದುಕುತ್ತಿದ್ದ ಅರಣ್ಯವಾಸಿಗಳ ಕಾಲವನ್ನು ಬಿಟ್ಟರೆ ಉಳಿದೆಲ್ಲ ಕಾಲಗಳಲ್ಲೂ ಬಲಿಷ್ಠರೇ ಭೂಮಿಯ ಒಡೆತನ ಮತ್ತು ಉತ್ಪಾದನಾ ಸಾಧನಗಳ ಒಡೆತನಗಳ ಮೂಲಕ ಎಲ್ಲವನ್ನೂ ನಿಯಂತ್ರಿಸುತ್ತಾ ಬಂದಿದ್ದಾರೆ. ಯಂತ್ರ, ಖನಿಜ, ಆಹಾರ, ನೀರು, ಗೊಬ್ಬರ, ಬೀಜಗಳು, ಔಷಧಗಳು, ವಸ್ತುಗಳ ತಯಾರಿಕೆ, ತಂತ್ರಜ್ಞಾನ, ಮಾಹಿತಿ, ಸಂಶೋಧನೆ, ವಿನಿಮಯ, ಹಣ, ಅಧಿಕಾರ, ರಕ್ಷಣಾವ್ಯವಸ್ಥೆ, ನ್ಯಾಯವ್ಯವಸ್ಥೆ, ಜೈಲು ಎಲ್ಲವೂ ಬಂಡವಳಿಗರ ಹಿಡಿತದಲ್ಲೇ ಇವೆ.

ಗುಲಾಮರ ಕಾಲದಲ್ಲಿದ್ದ ದುರ್ಬಲರ ಮೇಲಿನ ಬಲಿಷ್ಠರ ಅಮಾನುಷ ಕ್ರೌರ್ಯ, ದಬ್ಬಾಳಿಕೆ ಅನ್ಯಾಯಗಳು ಮತ್ತು ಅನಾಗರಿಕತೆಗಳು ಕಾಲಬದಲಾದಂತೆ, ಅಂದರೆ ಉತ್ಪಾದನಾ ಸಾಧನಗಳು ಬದಲಾದಂತೆ ವೇಷ ಬದಲಿಸುತ್ತಾ ಆಧುನಿಕ ಬಂಡವಾಳವಾದದ ಕಾಲಕ್ಕೆ ಬರುವ ಹೊತ್ತಿಗೆ ಬಂಡವಳಿಗರೇ ರಚಿಸುವ ಕಾನೂನಿನ ರೂಪವನ್ನು ಪಡೆದು ‘ನಾಗರಿಕ’ ನಡವಳಿಕೆ ಎನಿಸಿವೆ.

ನಿಜವಾದ ಅರ್ಥದಲ್ಲಿ ನಾಗರಿಕರಾಗಿ, ನೆಮ್ಮದಿಯಿಂದ ಜೀವಿಸಬೇಕಾದರೆ ಆಹಾರವೇ ಮೊದಲಾದ ಜೀವನಾವಶ್ಯಕ ವಸ್ತುಗಳು ಮತ್ತು ಆರೋಗ್ಯ, ಶಿಕ್ಷಣ, ಸಾರಿಗೆ ಸೌಕರ್ಯ ಮುಂತಾದ ಮೂಲ ಸೌಲಭ್ಯಗಳು ಬೇಕು. ಅವನ್ನು ಪಡೆಯಲು ಹಣಬೇಕು. ಹಣಕ್ಕಾಗಿ ಒಂದಲ್ಲ ಒಂದು ರೀತಿಯಲ್ಲಿ ದುಡಿಯಬೇಕು. ತಾನು ದುಡಿಯದೆಯೇ ಉಳಿದವರ ಕೈಲಿ ದುಡಿಸುತ್ತಾ ಅವರ ಶ್ರಮದ ಫಲವನ್ನು ಸ್ವಾಧೀನಪಡಿಸಿಕೊಂಡು ದುಡಿಯುವವರಿಗಿಂತಲೂ ಹೆಚ್ಚು ಸುಖವಾಗಿ ಜೀವಿಸಿದರೆ ಅದು ಮತ್ತೊಬ್ಬರ ಶ್ರಮದಲ್ಲಿ ಜೀವಿಸಿದಂತೆ. ಬಂಡವಳಿಗರು ಮಾಡುವ ಪ್ರತಿಯೊಂದು ಚಟುವಟಿಕೆಯೂ ದುಡಿಮೆಯೇ ಎನ್ನುತ್ತದೆ ಬಂಡವಳಿರ ಆರ್ಥಿಕ ನೀತಿಸಂಹಿತೆ. ಹಾಗಿದ್ದರೆ, ಅಂಥ ದುಡಿಮೆಯ ಸೌಲಭ್ಯ ಮತ್ತು ಸುಖ–ನೆಮ್ಮದಿಗಳು ಅವರಿಗೆ ಮಾತ್ರ ಸಿಗದೆ ಶ್ರಮಿಕರಿಗೂ, ಎಲ್ಲ ನಾಗರಿಕರಿಗೂ ಸಿಗುವಂಥ ಸಾಮಾಜಿಕ ವ್ಯವಸ್ಥೆ ಏರ್ಪಡುವುದು ನ್ಯಾಯಯುತವಾದದ್ದು. ಹಾಗಿಲ್ಲದಿದ್ದರೆ ಅದು ಅನ್ಯಾಯದ ಅನಾಗರಿಕ ಸಮಾಜ. ಇದು ಅಸಾಧಾರಣ ಬುದ್ಧಿವಂತರೂ, ಅನುಭವಿಗಳೂ ಆದ ಬಂಡವಳಿಗರಿಗೆ ಅರ್ಥವಾಗುವುದಿಲ್ಲವೆ? ಯಾಕಿಲ್ಲ, ಆಗುತ್ತದೆ, ಆದರೆ ಅವರು ಅದನ್ನು ಸರಿ ಎಂದು ಒಪ್ಪುವುದಿಲ್ಲ. ಒಪ್ಪಿದರೆ ಅವರೂ ಉಳಿದವರಂತೆ ದುಡಿಯಬೇಕಾಗುತ್ತದೆ. ಅವರು ಅನುಭವಿಸುತ್ತಿರುವ ವಿಶೇಷ ಸವಲತ್ತುಗಳನ್ನು ಬಿಟ್ಟುಕೊಡಬೇಕಾಗುತ್ತದೆ. ಅವನ್ನು ಎಲ್ಲರೊಂದಿಗೆ ಹಂಚಿಕೊಳ್ಳಬೇಕಾಗುತ್ತದೆ.

ಬಂಡವಳಿಗರು ಯಾವುದೋ ಒಂದು ಹಂತದಲ್ಲಿ, ಇನ್ನು ಸಾಕು ಎಂದು ಶೋಷಣೆಯನ್ನು ನಿಲ್ಲಿಸಬಾರದೇಕೆ? ಎಂಬ ಪ್ರಶ್ನೆಯೂ ಸಂಗತವಾದದ್ದೇ. ಮಾರ್ಕ್ಸ್ ಹೇಳುವಂತೆ, ‘ಬಂಡವಳಿಗರು ಮೂರ್ತೀಕರಿಸಿದ ಬಂಡವಾಳ’ವೇ. ಆದರೆ, ಹಿಂದಿನ ಎಲ್ಲ ವ್ಯವಸ್ಥೆಗಳಿಗಿಂತಲೂ ಉತ್ತಮವೆನಿಸುವಂತೆ, ಕಳೆದ ಸುಮಾರು 400 ವರ್ಷಗಳಲ್ಲಿ ಒಂದು ಬಲಿಷ್ಠ ಸ್ವಯಂಭೂ ವ್ಯವಸ್ಥೆಯಾಗಿ ಬೆಳೆದಿರುವ ಬಂಡವಾಳವಾದವು ಅವರನ್ನು ಹಾಗೆ ಮಾಡಲು ಬಿಡುವುದಿಲ್ಲ. ಹುಲಿಸವಾರಿ ಮಾಡುವ ವ್ಯಕ್ತಿಯು ಹುಲಿಯಿಂದ ಕೆಳಗಿಳಿದರೆ ಹುಲಿಗೆ ಆಹಾರವಾಗುವಂಥ ಸ್ಥಿತಿ ಅದು. ಯಾವುದೂ ಶಾಶ್ವತವಲ್ಲದ ಈ ವಿಶ್ವದಲ್ಲಿ ಬದಲಾವಣೆ ಮಾತ್ರ ಶಾಶ್ವತವೆಂದು ಹೇಳುವ ಬಂಡವಳಿಗರು, ಬಂಡವಾಳವಾದೀ ವ್ಯವಸ್ಥೆಯು ಅದಕ್ಕಿಂತ ಉತ್ತಮವಾದ ಸಮಾಜವಾದೀ ವ್ಯವಸ್ಥೆಗೆ ಬದಲಾಗುವುದನ್ನು ವಿರೋಧಿಸುತ್ತಾರೆ. ಹೀಗಾಗಿ, ಈ ವಿಕೃತಿಯ ರೋಗವನ್ನು ಹೊಟ್ಟೆಯಲ್ಲಿಟ್ಟುಕೊಂಡ ಬಂಡವಾಳವಾದವು, ರೋಗ ಉಲ್ಬಣಿಸಿ ಐಸಿಯುನಲ್ಲಿದ್ದರೂ ಸಾವನ್ನು ಹೇಗಾದರೂ ಮಾಡಿ ಮುಂದೂಡಲು ಒದ್ದಾಡುವ ವಿವಿಐಪಿ ರಾಕ್ಷಸನಂತೆ ವರ್ತಿಸುತ್ತದೆ. ಪದೇಪದೇ ಬಿಕ್ಕಟ್ಟುಗಳೆಂಬ ರೋಗ ಉಲ್ಬಣಗಳಿಂದ ನರಳುವ ಬಂಡವಾಳಶಾಹೀ ವ್ಯವಸ್ಥೆಗೆ ಬಂಡವಾಳವಾದೀ ವೈದ್ಯರು ಯಾವ ಔಷಧಿಯನ್ನು ಕೊಟ್ಟರೂ, ರೋಗ ಕಡಿಮೆಯಾಗುವ ಬದಲು, ಔಷಧಿಯೇ ರೋಗದ ಹೊಸ ಉಲ್ಬಣವಾಗಿ ಪರಿವರ್ತನೆಯಾಗುತ್ತದೆ. ಅಲ್ಲದೆ, ಈ ವ್ಯವಸ್ಥೆಯು ತನ್ನ ರೋಗಕ್ಕೆ ಅದರ ವೈದ್ಯರು ಕೊಡುವ ಯಾವ ಔಷಧಿಯನ್ನೂ ಒಳಸೇರಿಸಿಕೊಳ್ಳಲು ಬಿಡುವುದಿಲ್ಲ. ಹೀಗಾಗಿ ಎಂದಿಗೂ ವಾಸಿಯಾಗದ, ಔಷಧವಿಲ್ಲದ ಕಾಯಿಲೆಯಿಂದ ನರಳುವ ರೋಗಿಷ್ಟ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿ ‘ಸಿರಿಗರ ಬಡಿದ’ ಬಂಡವಳಿಗನಿಗೆ ಆಯ್ಕೆಯ ಸ್ವಾತಂತ್ರ್ಯವಿಲ್ಲ. ವಿವಿಐಪಿ ರಾಕ್ಷಸ ವ್ಯವಸ್ತೆಯು ಸತ್ತಾಗ ಮಾತ್ರ ಬಂಡವಳಿಗನಿಗೆ ಬಿಡುಗಡೆ ಸಾಧ್ಯ.

ಕುಟುಂಬವು ಸಮಾಜದ ಕನಿಷ್ಠತಮ ಘಟಕ. ಸಾಮಾನ್ಯ ತಿಳುವಳಿಕೆಯನ್ನು ಬಳಸಿ ನೋಡಿದರೂ ಒಂದು ಕುಟುಂಬದಲ್ಲಿ ಪ್ರತಿಯೊಬ್ಬರೂ ತಮ್ಮ ಕೈಲಾದಷ್ಟು ದುಡಿದು, ತಮಗೆ ಅಗತ್ಯವಾದಷ್ಟನ್ನು ಪಡೆದು ಸೌಹಾರ್ದದಿಂದ, ನೆಮ್ಮದಿಯಿಂದ ಬದುಕಿದರೆ ಎಲ್ಲರಿಗೂ ಒಳ್ಳೆಯದೆಂದು ಯಾರಿಗಾದರೂ ಅರ್ಥವಾಗುತ್ತದೆ. ಕುಟುಂಬದ ದುಡಿಯದ ಮಜವಾದಿ ಹಿರಿಯನೊಬ್ಬ ದುಡಿಯುವ ಮನೆಜನರ ಮೇಲೆ ಅಧಿಕಾರ ಚಲಾಯಿಸಿ, ಅವರನ್ನು ಅರೆಹೊಟ್ಟೆ ಉಣ್ಣುವಂತೆ ಮಾಡಿ, ತಾನು ಮಾತ್ರ ವಿಲಾಸಮಯ ಜೀವನ ನಡೆಸುವುದು ನ್ಯಾಯಯುತ ಏರ್ಪಾಡೋ ಅಲ್ಲವೋ ಎಂಬುದು ಮನವರಿಕೆಯಾಗುತ್ತದೆ. ಮೊದಲನೆಯ ಏರ್ಪಾಡು ನ್ಯಾಯಯುತ ಮತ್ತು ಅಪೇಕ್ಷಣೀಯ ಎನ್ನುವುದು ಸಮಾಜವಾದ. ತಾನು ದುಡಿಯದೆ, ಇತರರಿಂದ ದುಡಿಸಿಕೊಳ್ಳುತ್ತಾ, ಅವರವರ ಪಾಡು ಅವರಿಗೆ ಎಂದು ತಾನು ಮಜವಾಗಿ ಜೀವಿಸಬಹುದಾದ ಎರಡನೆಯ ಏರ್ಪಾಡೇ ಸರಿಯಾದದ್ದು ಎನ್ನುವುದು ಬಂಡವಾಳವಾದ.



ಭೌತಿಕ ವಾಸ್ತವದ ಎರಡೂ ಮಗ್ಗಲುಗಳನ್ನು ಚಾರಿತ್ರಿಕವಾಗಿ ಅರ್ಥಮಾಡಿಕೊಳ್ಳದೆ, ಕೇವಲ ಬೌದ್ಧಿಕವಾಗಿ, ಅಥವಾ ನೈತಿಕವಾಗಿ ಯೋಚಿಸುವವರು ಹೇಳುವುದೇನೆಂದರೆ, ‘ಬಂಡವಾಳವಾಳಶಾಹಿ ವ್ಯವಸ್ಥೆಯಲ್ಲಿ ಸಮಾನತೆ ಇಲ್ಲ ನಿಜ. ಯಾಕೆಂದರೆ ಅಸಮಾನತೆಯೇ ಪ್ರಕೃತಿಸಹಜವಾದದ್ದು. ಆದರೆ ಎಲ್ಲರಿಗೂ ಸ್ವಾತಂತ್ರ್ಯವಿದೆ. ಯಾರು ಬೇಕಾದರೂ ಕಷ್ಟಪಟ್ಟರೆ ಕೋಟ್ಯಾಧಿಪತಿಯಾಗಬಹುದು. ಬೇಡದಿದ್ದರೆ ಭಿಕ್ಷುಕರಾಗೂ ಇರಬಹುದು. ಅದು ಅವರವರ ಸಾಮರ್ಥ್ಯ ಮತ್ತು ಆಯ್ಕೆಗಳನ್ನು ಅವಲಂಬಿಸಿದೆ. ಸಮಾಜವಾದೀ ವ್ಯವಸ್ಥೆಯಲ್ಲಿ ಮೂಲತಹ ಸ್ವಾತಂತ್ರ್ಯವೇ ಇಲ್ಲ, ಇನ್ನು ಅಸಹಜವಾದ ಸಮಾನತೆ ಹೇಗೆ ಸಾಧ್ಯ? ಆದ್ದರಿಂದ ಬಂಡವಾಳವಾದೀ ವ್ಯವಸ್ಥೆಯ ಕೊರತೆಗಳನ್ನು ನಿವಾರಿಸಿಕೊಂಡು ಎಲ್ಲ ಸಿದ್ಧಾಂತಗಳಿಗೂ ಅತೀತವಾದ ರಾಜಕೀಯ ವ್ಯವಸ್ಥೆಯನ್ನು ಕಟ್ಟಿಕೊಂಡರೆ ನಮ್ಮ ಎಲ್ಲ ಸಮಸ್ಯೆಗಳೂ ಬಗೆಹರಿಯುತ್ತವೆ’.

ಸ್ವಾತಂತ್ರ್ಯವೆಂದರೆ ಆಯ್ಕೆಯ ಸ್ವಾತಂತ್ರ್ಯವೇ. ಸಾಮಾಜಿಕ ಸಂಬಂಧಕಾಲದಲ್ಲಿ ಸಾಮಾಜಿಕ ವ್ಯಕ್ತಿಗಳಾಗಿ ಬದುಕುವ ಜನರು ಆರ್ಥಿಕ ತಳಹದಿಯ ತಮ್ಮ ಬದುಕುವ ವಿಧಾನಗಳನ್ನು, ಎಲ್ಲರನ್ನೂ ಒಳಗೊಳ್ಳುವ ನ್ಯಾಯ–ನೆಮ್ಮದಿಗಳನ್ನು ಆರಿಸಿಕೊಳ್ಳುವ ಆಯ್ಕೆ ಇರಬೇಕು. ಅದಕ್ಕಾಗಿ ರಾಜಕೀಯವು ಆರ್ಥಿಕತೆಯನ್ನು ನಿರ್ಧರಿಸಬೇಕೇ ಹೊರತು ಆರ್ಥಿಕತೆಯೇ ರಾಜಕೀಯವನ್ನು ಆಳಬಾರದು. ಬಂಡವಾಳಶಾಹೀ ವ್ಯವಸ್ಥೆಯಲ್ಲಿ ಆರ್ಥಿಕತೆಯೇ ಬಂಡವಳಿಗರ ರಾಜಕೀಯವನ್ನು ಆಳುತ್ತದೆ ಎಂಬುದನ್ನು ಬಂಡವಾಳವಾದದ ಒಳಗಿದ್ದುಕೊಂಡೇ ಯೋಚಿಸುವವರು ಗಮನಿಸುವುದಿಲ್ಲ. ಬಂಡವಳಿಗರ ನಡುವಿನ ಸ್ಪರ್ಧೆ ಮತ್ತು ಶ್ರಮಿಕರ ಶೋಷಣೆಯಿಂದ ಮುಕ್ತರಾಗುವ ಆಯ್ಕೆಯೇ ಇಲ್ಲದ ಬಂಡವಳಿಗರಿಗೆ, ಅದರಲ್ಲಿ ಸ್ವಾತಂತ್ರ್ಯ ಎಂಬುದು ಎಲ್ಲಿ ಸಾಧ್ಯ? ಬಂಡವಾಳವಾದದಲ್ಲಿರುವುದು ಡಾರ್ವಿನ್ ಹೇಳುವ ಪ್ರಾಣಿಲೋಕದ ನಿಯಮವಾದ ‘ಬಲಿಷ್ಠರಿಗೆ ಮಾತ್ರ ಬದುಕುವ ಅವಕಾಶ’ ಎಂಬ ನೀತಿ. ಸಮಾಜವಾದದಲ್ಲಿ ಆರ್ಥಿಕತೆಯನ್ನು ಜನರ ರಾಜಕೀಯವು ನಿರ್ಧರಿಸುತ್ತದೆ. ಹೀಗಾಗಿ ನಿಜವಾಗಿ ಆಯ್ಕೆಯ ಸ್ವಾತಂತ್ರ್ಯವು ಸಮಾಜವಾದದಲ್ಲಿದೆ. ಇದರಲ್ಲಿ ಶ್ರಮದ ಆರ್ಥಿಕತೆ, ಆಳುವ ರಾಜಕೀಯ, ಸಮಾನತೆ ಮತ್ತು ಮಾನವೀಯ ನ್ಯಾಯ, ಮೂರೂ ಒಟ್ಟಿಗೆ ಬೆಸೆದುಕೊಂಡಿವೆ.

ಕೋವಿಡ್ ಜಾಡ್ಯದ ಭಯವು ಬಂಡವಾಳಶಾಹಿಯ ಕೊಳಕು ಕೊಳದೊಳಕ್ಕೆ ಕಲ್ಲೆಸೆದಿದೆ. ಮೇಲುನೋಟಕ್ಕೆ ತಿಳಿಗೊಳದಂತೆ ಕಾಣಿಸುತ್ತಿದ್ದ ಕೊಳದ ಕಸ, ಕೊಳಕು ರಾಡಿಯೆಲ್ಲಾ ಮೇಲಕ್ಕೆ ಬಂದಿವೆ. ಅವನ್ನು ಕಣ್ತೆರೆದು ನೋಡದೆ, ‘ರಾಜಕೀಯ ಸಿದ್ಧಾಂತಗಳ ಚರ್ಚೆಗೆ ಇದು ಕಾಲವಲ್ಲ. ಸರಿಯಾಗಿ ನಿರ್ವಹಿಸಿದರೆ ಈಗಿರುವ ವ್ಯವಸ್ಥೆಯಲ್ಲೇ ದೇಶದ ಆರ್ಥಿಕತೆಯನ್ನು ಸರಿಪಡಿಸಿ ಕೋವಿಡೋತ್ತರ ಸಮಾಜದಲ್ಲಿ ಕೊರೋನಾ ಜಾಡ್ಯದೊಂದಿಗೆ ಸಹಜೀವನ ನಡೆಸಬಹುದು’ ಎಂದು ಅನೇಕರು ನಂಬಿದ್ದಾರೆ.

ಸದ್ಯಕ್ಕೆ ನಮ್ಮ ನಿರುದ್ಯೋಗಿ ಯುವಕ–ಯುವತಿಯರಿಗೆ ನಿರುದ್ಯೋಗ ಭತ್ಯೆಯಾಗಿ 500 ರಿಂದ 1000ದ ವರೆಗೆ ಕೆಲವು ತಿಂಗಳಾದರೂ ಕೊಟ್ಟರೆ ಆರ್ಥಿಕತೆಯನ್ನು ಸುಸ್ಥಿತಿಗೆ ತರಬಹುದೆಂದು ಸಲಹೆ ಕೊಡುತ್ತಾರೆ. ವಿದೇಶಗಳಲ್ಲಿ ಎಷ್ಟೋ ಕಡೆ ಸಾಧಾರಣ ಸನ್ನಿವೇಶದಲ್ಲೂ ನಿರುದ್ಯೋಗೀ ಯುವಕ ಯುವತಿಯರಿಗೆ ನಿರುದ್ಯೋಗ ಭತ್ಯೆಯನ್ನು ಕೊಡುತ್ತಾರೆಂದು ವಿವರಿಸುತ್ತಾರೆ. ಎಲ್ಲಾ ಬಡಜನರ ಬ್ಯಾಂಕ್ ಖಾತೆಗಳಿಗೆ ಕಡೇಪಕ್ಷ 5000 ವನ್ನಾದರೂ ಹಾಕಬೇಕೆಂದು ‘ಬಡವರ ಪರ’ವಾಗಿರುವ ಆರ್ಥಿಕ ತಜ್ಞರು ಅಭಿಪ್ರಾಯಪಡುತ್ತಾರೆ.

ಮತ್ತೊಂದು ಕಡೆ, ‘ನಮ್ಮ ಯುವಜನರು ಯಾವುದೋ ಒಂದು ಕೆಲಸ ಹುಡುಕಿಕೊಂಡು ಹಣ ಸಂಪಾದಿಸದೆ, ಸರ್ಕಾರದ ಭಿಕ್ಷೆಗೆ ಯಾಕೆ ಕೈಯೊಡ್ಡಬೇಕು’ಎಂದು ಅನೇಕ ಸಜ್ಜನರು ಮುಗ್ಧವಾಗಿ ಕೇಳುತ್ತಾರೆ.

ಯಾವುದೋ ಕುಗ್ರಾಮದಲ್ಲಿ ಒಬ್ಬ ಗೃಹಿಣಿ ತಾನೇ ತರಕಾರಿ ಬೆಳೆದು ಹಣಸಂಪಾದಿಸುತ್ತಿರುವ ಕತೆಯನ್ನು ಪತ್ರಿಕಾ ವರದಿಗಾರನೊಬ್ಬ ಚಿತ್ರಗಳ ಸಮೇತ ಪ್ರಕಟಿಸಿ ಮುಗ್ಧ ಗೃಹಿಣಿಯರ ಮೆಚ್ಚುಗೆ ಗಳಿಸುತ್ತಾನೆ.

ಮುಖಗವುಸುಗಳನ್ನು ಹೊಲಿದು ಹಣದ ಕೊರತೆಯನ್ನು ನೀಗಿಕೊಂಡ ಬುಡಕಟ್ಟು ಮಹಿಳೆಯರನ್ನು ಈ ದೇಶದ ಪ್ರಧಾನಿ ಕೊಂಡಾಡುತ್ತಾರೆ.

ಇವುಗಳ ನಡುವೆಯೇ, ಗಮನಿಸಬೇಕಾದ ಮುಖ್ಯ ಸಂಗತಿಗಳು, ಕೇಳಬೇಕಾದ ಪ್ರಶ್ನೆಗಳು ಯಾವುವೆಂದು ಬುದ್ಧಿಪೂರ್ವಕವಾಗಿ ಹುಡುಕಬೇಕಾದ ಕಾಲ ಇದು.


ಜನರು ಭಯ, ಆತಂಕ, ನಿರೀಕ್ಷೆ ಅಸಹಾಯಕತೆಗಳಲ್ಲಿ ಮುಳುಗಿರುವಾಗ ಕಾರ್ಮಿಕರ ಹಿತಕ್ಕೆ ಘಾತಕವಾದ ಕಾನೂನು ತಿದ್ದುಪಡಿಗಳು, ಭೂಮಿ ಒಡೆತನದ ಕಾನೂನುಗಳು, ಬಂಡವಳಿಗರಿಗೆ ಅನುಕೂಲಕರವಾದ ಕಾನೂನುಗಳು, ಸಾಮಾನ್ಯ ಜನರ ಜೀವನವನ್ನು ಮತ್ತಷ್ಟು ಕಷ್ಟಕ್ಕೀಡುಮಾಡುವ ಕಾನೂನುಗಳು, ಸದ್ದಿಲ್ಲದೆ ಜಾರಿಯಾಗುತ್ತವೆ.

ಭಾರತದ 132 ಕೋಟಿ ಜನರಲ್ಲಿ ಲಕ್ಷಾಂತರ ಜನರು ಕೋವಿಡ್ ಜಾಡ್ಯದಿಂದಾಗಿ ನರಳುತ್ತಿರುವಾಗಲೂ ಉದ್ಯೋಗ ಕಳೆದುಕೊಂಡು, ಕೋವಿಡ್‌ನ ಭಯವನ್ನೂ ಲೆಕ್ಕಿಸದೆ, ದೂರದ ಊರುಗಳನ್ನು ಸೇರಿಕೊಳ್ಳಲು ಪುನರ್ವಲಸೆ ಕೈಗೊಂಡ ಲಕ್ಷಾಂತರ ವಲಸೆ ಕಾರ್ಮಿಕರನ್ನು ಬಾಧಿಸುತ್ತಿರುವ ಜಾಡ್ಯ ಯಾವುದು? ವಲಸೆ ಕಾರ್ಮಿಕರು ಸಾವಿರಾರು ಮೈಲಿ ದೂರವಿರುವ ತಮ್ಮ ಊರುಗಳಿಂದ ಮನೆಜನರಿಂದ ದೂರವಾಗಿ ಎಲ್ಲೆಲ್ಲೋ ಉದ್ಯೋಗಗಳನ್ನು ಅರಸಿ ಯಾಕೆ ಬಂದರು? ಅವರು ಹಾಗೆ ಮಾಡಲು ಕಾರಣವಾದ ಜಾಡ್ಯ ಯಾವುದು?

‘ಜೀವವಿದ್ದರೆ ಜೀವನ’ ಎಂದು ಪ್ರಧಾನಿ ಹೇಳಿದ ಮಾತಿನ ಅರ್ಥ ‘ಕೋವಿಡ್‌ಗೆ ಬಲಿಯಾಗದೆ ಉಳಿದುಕೊಂಡರೆ ಮಾತ್ರ ಜೀವನ’ ಎಂದು ನಂಬುವ ಜನರಿಗೆ, ಕೋವಿಡ್ ನಿಜವಾದ ಸಮಸ್ಯೆ ಅಲ್ಲವೆಂಬುದು ಅರ್ಥವಾಗಬೇಕು. ಆಗ, ಜನರ ಕಷ್ಟಗಳ ಪರಿಹಾರಕ್ಕಾಗಿ ಸಮಾಜವಾದೀ ಆರ್ಥಿಕತೆ ಮತ್ತು ಅಭಿವೃದ್ಧಿ ಮಾದರಿಗಳನ್ನು ಅನುಸರಿಸದೆ ಅನ್ಯ ಮಾರ್ಗವಿಲ್ಲ, ಎಂದು ಕೂಗಿ ಹೇಳುತ್ತಿರುವ ಕಮ್ಯೂನಿಸ್ಟರ ಮಾತು ವ್ಯರ್ಥಪ್ರಲಾಪವಾಗಿ ಕೇಳಿಸುವುದಿಲ್ಲ.

ಕ್ಷಾಮ–ಡಾಮರಗಳು, ಕೋವಿಡ್‌ನಂಥ ಸಾಂಕ್ರಾಮಿಕ ಜಾಡ್ಯಗಳು ಸಾಮಾನ್ಯ ಜನರು ಅನುಭವಿಸುವ ಕಷ್ಟಗಳನ್ನು ಬಯಲಿಗೆಳೆಯುವ ವಿಶೇಷ ಸಂದರ್ಭಗಳೇ ಹೊರತು ನಿಜವಾದ ಕಾರಣಗಳು ಅಲ್ಲವೆಂದು ಇವರ್‍ಯಾರಿಗೂ ಗೊತ್ತಾಗುವುದೇ ಇಲ್ಲ. ಬಡಜನರ ಕಷ್ಟಗಳಿಗೆ ನಿಜವಾದ ಕಾರಣ ಬಂಡವಾಳವಾದೀ ಆರ್ಥಿಕತೆ ಮತ್ತು ಅಭಿವೃದ್ಧಿ ನೀತಿಗಳೇ ಆಗಿವೆ. ಕೋವಿಡ್ ಜಾಡ್ಯವು ಅವು ಮಧ್ಯಮವರ್ಗದ ಕಣ್ಣಿಗೆಬೀಳದಂತೆ ಅವುಗಳ ಮೇಲೆ ಹೊದಿಸಿದ್ದ ದಪ್ಪಚರ್ಮದ ದುಪ್ಪಟಿಯನ್ನು ಒಂದೆರಡು ಕಡೆ ಹರಿದಿದೆ ಅಷ್ಟೆ. ●

ವಿದೇಶಗಳಿಂದ ತಂದ ಸಾಲಗಳ ಸಮಸ್ಯೆ



ಮೂರನೆಯ ಜಗತ್ತಿನ ಬಹುತೇಕ ದೇಶಗಳು, ಅದರಲ್ಲೂ ತಮ್ಮ ಖರ್ಚು ವೆಚ್ಚಗಳಿಗಾಗಿ ಪ್ರಾಥಮಿಕ ಸರಕುಗಳ ರಫ್ತನ್ನೇ ಸಂಪೂರ್ಣವಾಗಿ ಅವಲಂಬಿವೆ. ಹಾಗಾಗಿ, ಈ ಸರಕುಗಳ ಬೆಲೆ ಕುಸಿತದಿಂದಾಗಿ ಈ ದೇಶಗಳು ತಮ್ಮ ವಿದೇಶಿ ವ್ಯಾಪಾರದ ಬಾಕಿ ಚುಕ್ತಾ ಮಾಡುವುದು ಸಾಧ್ಯವಾಗುತ್ತಿಲ್ಲ. ಈ ಕಾರಣದಿಂದಾಗಿ ಈ ದೇಶಗಳು ಹೆಚ್ಚು ಹೆಚ್ಚಿನ ಬಾಹ್ಯ ಸಾಲ ಪಡೆಯುವ ಅನಿವಾರ್ಯಕ್ಕೆ ಒಳಗಾಗಿವೆ. ಈ ಸಂದರ್ಭದಲ್ಲಿ ಜಿ–20 ಮಾಡಬಹುದಾದಾದ ಏಕೈಕ ವಿವೇಚನಾಶೀಲ ಕೆಲಸವೆಂದರೆ, 77 ಕಡು ಬಡ ದೇಶಗಳ ಬಾಹ್ಯ ಸಾಲವನ್ನು ಸಂಪೂರ್ಣವಾಗಿ ಮನ್ನಾಮಾಡುವುದು. ಜಿ –20 ಗೆ ಇದೊಂದು ಭಾರಿ ಹೊರೆಯೇನಲ್ಲ. ವಾಸ್ತವವಾಗಿ, ಕೆಲವು ವರ್ಷಗಳ ಹಿಂದೆ, ಬ್ರಾಂಟ್ ಆಯೋಗವು ಮುಂದುವರೆದ ದೇಶಗಳು ಪ್ರತಿ ವರ್ಷವೂ ತಮ್ಮ ಜಿಡಿಪಿಯ 1% ರಷ್ಟು ಹಣವನ್ನು ಮೂರನೆಯ ಜಗತ್ತಿನ ದೇಶಗಳ ನೆರವಿಗೆ ಮೀಸಲಿಡುವಂತೆ ಸೂಚಿಸಿತ್ತು.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ. ನಾಗರಾಜ್

ಮೂರನೇ ವಿಶ್ವದ ದೇಶಗಳು ಹೊರದೇಶಗಳಿಂದ ತಂದ ಸಾಲವು ಒಂದು ಬೃಹತ್ ಸಮಸ್ಯೆಯಾಗಿ ಬೆಳೆಯುತ್ತಿದೆ. ಇತ್ತೀಚೆಗೆ ಅರ್ಜೆಂಟೈನಾದಲ್ಲಿ ಉಂಟಾದ ಸಾಲದ ಬಿಕ್ಕಟ್ಟು ಈ ಸಮಸ್ಯೆಯ ಒಂದು ಲಕ್ಷಣವಾಗಿದೆ. ಏಪ್ರಿಲ್ 2011 ರಲ್ಲಿ ಪ್ರಾರಂಭವಾದ ಪ್ರಾಥಮಿಕ ಸರಕುಗಳ ಬೆಲೆಗಳ ಕುಸಿತವು ಸಾಲ ಬಿಕ್ಕಟ್ಟಿಗೆ ಮೂಲವಾಗಿದೆ.

2020ರ ಮಾರ್ಚ್ ಮತ್ತು ಏಪ್ರಿಲ್‌ನಲ್ಲಿ ಈ ಪ್ರಾಥಮಿಕ ಸರಕುಗಳ ಬೆಲೆಗಳು ತೀವ್ರ ಕುಸಿತ ಕಂಡಿವೆ. ಕೋವಿಡ್ ಪೆಡಂಭೂತವು ಕಾಡಿಸುತ್ತಿದ್ದ ಈ ಎರಡು ತಿಂಗಳುಗಳ ಅವಧಿಯಲ್ಲಿ ಆಗಿರುವ ಬೆಲೆಗಳ ಪತನವನ್ನು ಹೊರತುಪಡಿಸಿದರೂ ಸಹ, ಏಪ್ರಿಲ್ 2011 ಮತ್ತು ಡಿಸೆಂಬರ್ 2019 ರ ನಡುವಿನ ಅವಧಿಯಲ್ಲಿ, ಅಂತಾರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಸಿದ್ಧಪಡಿಸಿದ ಎಲ್ಲಾ ಸರಕುಗಳ ಬೆಲೆ ಸೂಚ್ಯಂಕ(ಮೂಲ ವರ್ಷ 2016) ಪ್ರಕಾರ, ಪ್ರಾಥಮಿಕ ಸರಕುಗಳ ಬೆಲೆಗಳು 38% ನಷ್ಟು ಕಡಿದಾದ ಕುಸಿತ ಕಂಡಿವೆ.

ಮೂರನೆಯ ಜಗತ್ತಿನ ಬಹುತೇಕ ದೇಶಗಳು, ಅದರಲ್ಲೂ ವಿಶೇಷವಾಗಿ ಆಫ್ರಿಕಾ ಮತ್ತು ಲ್ಯಾಟಿನ್ ಅಮೇರಿಕಾದ ದೇಶಗಳು ತಮ್ಮ ಖರ್ಚು ವೆಚ್ಚಗಳಿಗಾಗಿ ಪ್ರಾಥಮಿಕ ಸರಕುಗಳ ರಫ್ತನ್ನೇ ಸಂಪೂರ್ಣವಾಗಿ ಅವಲಂಬಿವೆ. ಹಾಗಾಗಿ, ಈ ಸರಕುಗಳ ಬೆಲೆ ಕುಸಿತದಿಂದಾಗಿ ಈ ದೇಶಗಳು ತಮ್ಮ ವಿದೇಶಿ ವ್ಯಾಪಾರದ ಬಾಕಿ (ಪಾವತಿ ಶೇ.) ಚುಕ್ತಾ ಮಾಡುವುದು ಸಾಧ್ಯವಾಗುತ್ತಿಲ್ಲ. ಈ ಕಾರಣದಿಂದಾಗಿ ಈ ದೇಶಗಳು ಹೆಚ್ಚು ಹೆಚ್ಚಿನ ಬಾಹ್ಯ ಸಾಲ ಪಡೆಯುವ ಅನಿವಾರ್ಯಕ್ಕೆ ಒಳಗಾಗಿವೆ.

ಬಾಹ್ಯ ಸಾಲದ ಹೆಚ್ಚಳದ ಜೊತೆಯಲ್ಲಿ, ಮತ್ತು ಅದಕ್ಕೆ ಸಮಾನಾಂತರವಾಗಿ, ಈ ಬಾಹ್ಯ ಸಾಲದ ಅಸಲು ಮತ್ತು ಬಡ್ಡಿಯ ಕಂತು ಕಟ್ಟಲಾಗದ (ಸಾಲ ಮರುಪಾವತಿಯ ಸಮಸ್ಯೆ) ಅಸಹಾಯಕತೆ ಹೆಚ್ಚುತ್ತಿದೆ. ಕೋವಿಡ್ ಪೆಡಂಭೂತ ಮತ್ತು ಅದಕ್ಕೆ ಸಂಬಂಧಿಸಿದ ಲಾಕ್ ಡೌನ್‌ನಿಂದಾಗಿ, ಬಹುತೇಕ ದೇಶಗಳಿಗೆ ಸಾಲ ಮರುಪಾವತಿ ಮಾಡುವುದು ಈಗ ಸಂಪೂರ್ಣವಾಗಿ ಅಸಾಧ್ಯವಾಗಿದೆ.

ಈಗಾಲೇ ಗಮನಿಸಿದಂತೆ, ಇಂತಹ ಲಾಕ್ ಡೌನ್‌ಗಳಿಂದಾಗಿ, ಪ್ರಾಥಮಿಕ ಸರಕುಗಳ ಬೆಲೆಗಳು ಮತ್ತಷ್ಟು ಕುಸಿದಿವೆ. ಇಂತಹ ಲಾಕ್ ಡೌನ್‌ಗಳಿಂದಾಗಿ, ಈ ಸರಕುಗಳ ರಫ್ತಿನ ಒಟ್ಟು ಪ್ರಮಾಣವೂ ಕುಸಿದಿದೆ. ಹಾಗಾಗಿ, ಮೂರನೆಯ ಜಗತ್ತಿನ ಬಹುತೇಕ ದೇಶಗಳ ರಫ್ತಿನ ಒಟ್ಟು ಮೌಲ್ಯವೂ ಸಹ ತೀವ್ರವಾಗಿ ಇಳಿದಿದೆ.

ಇನ್ನೂ ಎರಡು ಅಂಶಗಳು ಈ ದೇಶಗಳ ಆದಾಯಗಳು ಮತ್ತಷ್ಟು ಕ್ಷೀಣಿಸುವಂತೆ ಮಾಡಿವೆ: ಒಂದು, ವಿದೇಶಗಳಲ್ಲಿ ಕೆಲಸ ಮಾಡುವ ಈ ದೇಶಗಳ ಕೆಲಸಗಾರರು ತಮ್ಮ ಆದಾಯದಲ್ಲಿ ಒಂದಿಷ್ಟು ಹಣವನ್ನು ಸ್ವದೇಶಕ್ಕೆ ರವಾನಿಸುತ್ತಿದ್ದರು. ಲಾಕ್ ಡೌನ್‌ಗಳಿಂದಾಗಿ ಅವರ ವರಮಾನಗಳಿಗೆ ಧಕ್ಕೆಯಾದುದರಿಂದ, ಅವರು ರವಾನಿಸುತ್ತಿದ್ದ ಡಾಲರ್ ಹಣವೂ ಬಹಳಷ್ಟು ಕಡಿಮೆಯಾಗಿದೆ. ಇನ್ನೊಂದು ಅಂಶವೆಂದರೆ, ಮೂರನೆಯ ಜಗತ್ತಿನ ದೇಶಗಳಿಂದ ವಿದೇಶಿ ಬಂಡವಾಳವು (ಡಾಲರ್‌ಗಳಲ್ಲಿ) ಹೊರ ಹೋಗುತ್ತಿದೆ. ಈ ವರ್ಷದ ಮಾರ್ಚ್‌ನಲ್ಲಿ ಬಂಡವಾಳದ ಹೊರಹರಿವು ಮೊನಚಾಗಿತ್ತಾದರೂ, ನಂತರದ ಅವಧಿಯಲ್ಲಿ ಸ್ವಲ್ಪಮಟ್ಟಿಗೆ ತಗ್ಗಿದೆ. ಹಾಗಾಗಿ, ಹೂಡಿಕೆಯಾಗಿದ್ದ ವಿದೇಶಿ ಬಂಡವಾಳವು ಹೊರ ಹೋದ ಕಾರಣದಿಂದಾಗಿ, ಮೂರನೆಯ ಜಗತ್ತಿನ ಬಹುತೇಕ ದೇಶಗಳ ವಿದೇಶಿ ವ್ಯಾಪಾರದ ಬಾಕಿ (ಪಾವತಿ ಶೇ.) ಚುಕ್ತಾ ಮಾಡುವ ಸಾಮರ್ಥ್ಯವು ಹೀನ ಸ್ಥಿತಿಯಲ್ಲಿದೆ.

ಮೂರನೆಯ ಜಗತ್ತಿನ ದೇಶಗಳಿಂದ ವಿದೇಶಿ ಬಂಡವಾಳವು ಹೊರ ಹರಿದ ಪರಿಣಾಮವಾಗಿ, ಈ ದೇಶಗಳ ಕರೆನ್ಸಿಗಳ ಮೌಲ್ಯವು ತೀವ್ರವಾಗಿ ಕುಸಿದಿದೆ. ಈ ಇಳಿಕೆಯ ಪರಿಣಾಮವಾಗಿ ಅವರ ಬಾಹ್ಯ ಸಾಲದ ಹೊರೆ ಬಹಳವಾಗಿ ಹೆಚ್ಚುತ್ತದೆ, ಏಕೆಂದರೆ, ಈ ದೇಶಗಳು ಸಾಲವನ್ನು ಡಾಲರ್‌ಗಳಲ್ಲಿ ಪಡೆದಿರುತ್ತವೆ. ಸ್ಥಳೀಯ ಕರೆನ್ಸಿಯ ಮೌಲ್ಯ ಕುಸಿದ ಸಂದರ್ಭದಲ್ಲಿ ಡಾಲರ್‌ನ ಮೌಲ್ಯವು ವೃದ್ಧಿಸಿರುತ್ತದೆ. ಹಾಗಾಗಿ, ವಿದೇಶಿ ಸಾಲಗಳ ಮರು ಪಾವತಿಯ ಹೊರೆ ಬಹಳವಾಗಿ ಹೆಚ್ಚುತ್ತದೆ.

ವಿದೇಶಿ ಸಾಲಗಳ ಮರು ಪಾವತಿಯ ಈ ಬಿಕ್ಕಟ್ಟು ಸಾರ್ವಜನಿಕ ಹಣಕಾಸಿನ ವಿಳಯದೊಂದಿಗೆ ತಗಲುಹಾಕಿಕೊಂಡಿದೆ. ಈ ದೇಶಗಳಲ್ಲಿ ಸರ್ಕಾರಗಳ ಆದಾಯದಲ್ಲಿ ಸಾಕಷ್ಟು ಪ್ರಮಾಣವು ರಫ್ತುಗಳ ಮೇಲೆ ತೆರಿಗೆ ವಿಧಿಸುವ ಮೂಲಕ ಬರುತ್ತದೆ. ಕೋವಿಡ್ ಪೆಡಂಭೂತವು ಪೀಡಿಸುವ ಮುಂಚೆಯೇ ರಫ್ತುಗಳ ಮೂಲಕ ಗಳಿಸುವ ಆದಾಯವು ಕ್ಷೀಣಿಸಿತ್ತು. ಪೆಡಂಭೂತ ಕಾಡಲು ಆರಂಭಿಸಿದ ನಂತರ ಈ ರಫ್ತು ಗಳಿಕೆಯು ಇನ್ನಷ್ಟು ಕ್ಷೀಣಿಸಿತು. ಹಾಗಾಗಿ, ಸರ್ಕಾರದ ಆದಾಯಗಳು ಭಾರೀ ಹೊಡೆತ ತಿಂದಿವೆ. ಕೋವಿಡ್ ಸೋಂಕು ಬಾಧಿತ ವ್ಯಕ್ತಿಗಳಿಗೆ ತುರ್ತಾಗಿ ಬೇಕಾಗಿರುವ ಪರಿಹಾರವನ್ನು ಒದಗಿಸಲು ಸರ್ಕಾರವು ಆರೋಗ್ಯದ ಬಾಬ್ತು ಹೆಚ್ಚು ಹೆಚ್ಚು ಹಣವನ್ನು ಖರ್ಚುಮಾಡಬೇಕಾದ ಕಾರಣದಿಂದಾಗಿ, ಹೊರಗಿನ ಸಾಲಗಳನ್ನು ತೀರಿಸುವ ಕಾರ್ಯವು ಹೆಚ್ಚು ಕಷ್ಟಕರವಾಗುತ್ತದೆ.

ಆದರೆ, ಸರ್ಕಾರಗಳು ತಮ್ಮ ವಿತ್ತೀಯ ಕೊರತೆಯನ್ನು ಹೆಚ್ಚಿಸಿಕೊಳ್ಳುವ ಮೂಲಕ ಇಂತಹ ಖರ್ಚುಗಳಿಗೆ ಬೇಕಾಗುವ ಹಣ ಹೊಂದಿಸಿಕೊಳ್ಳುವುದು ಸಾಧ್ಯವಿದೆ. ವಿತ್ತೀಯ ಕೊರತೆಯನ್ನು ಹೆಚ್ಚಿಸಿಕೊಳ್ಳುವ ಕ್ರಮದಿಂದಾಗಿ ಉಂಟಾಗಬಹುದಾದ ಹಣದುಬ್ಬರವನ್ನು ಪೂರೈಕೆ–ಮತ್ತು–ವಿತರಣೆಗಳ ಸೂಕ್ತ ನಿರ್ವಹಣೆಯ ಮೂಲಕ ತಡೆಗಟ್ಟಬಹುದು. ಆದರೆ, ಈ ಅರ್ಥವ್ಯವಸ್ಥೆಗಳು ಜಾಗತಿಕ ಹಣಕಾಸು ಬಂಡವಾಳಕ್ಕೆ ಅಡಿಯಾಳಾಗಿರುವುದರಿಂದ ಅವರು ತಮ್ಮ ವಿತ್ತೀಯ ಕೊರತೆಯನ್ನು ಹೆಚ್ಚಿಸಿಕೊಳ್ಳಲು ಹೊರಟ ಕೂಡಲೇ ವಿದೇಶಿ ಬಂಡವಾಳದ ಹೊರ ಹರಿವು ಪುನರಾರಂಭವಾಗುತ್ತದೆ. ಇಂತಹ ಹೊರ ಹರಿವಿನಿಂದಾಗಿ ಈ ದೇಶಗಳ ಸಮಸ್ಯೆಗಳು ಇನ್ನೂ ಹೆಚ್ಚು ಜಟಿಲಗೊಳ್ಳುತ್ತವೆ. ಹಾಗಾಗಿ, ಕೋವಿಡ್ ಪೆಡಂಭೂತದ ಸಂದರ್ಭದಲ್ಲಿ ಅಗತ್ಯವಿರುವ ಆರೋಗ್ಯದ ವೆಚ್ಚಗಳಿಗೂ ಹಣ ಹೊಂದಿಸಿಕೊಳ್ಳುವುದೂ ಸಹ ವಿದೇಶಿ ಸಾಲದ ಕಾರಣದಿಂದಾಗಿ ಕಷ್ಟಕರವಾಗುತ್ತದೆ.

ಇಂತಹ ಒಂದು ಸನ್ನಿವೇಶದಲ್ಲಿ ಮೂರನೆಯ ಜಗತ್ತಿನ ದೇಶಗಳು ತಮ್ಮ ಬಾಹ್ಯ ಸಾಲದ ಬಗ್ಗೆ ರಿಯಾಯ್ತಿ ಕೇಳುತ್ತಿವೆ. ಜಿ–20 (ಮುಂದುವರೆದ ದೇಶಗಳ ಒಂದು ಗುಂಪು) ಈಗ "ಪರಿಹಾರ" ಒದಗಿಸುವ ಒಂದು ಕಾರ್ಯಕ್ರಮದೊಂದಿಗೆ ಮುಂದೆ ಬಂದಿವೆ. ಈ ಒಪ್ಪಂದ/ಕಾರ್ಯಕ್ರಮ ಯಾವ ರೀತಿ ಇದೆ ಎಂದರೆ, ಮೂರನೆಯ ಜಗತ್ತಿನ 77 ಕಡು ಬಡ ದೇಶಗಳು ಈ ಜಿ–20 ದೇಶಗಳ ಸರ್ಕಾರಗಳಿಂದ ಪಡೆದ ಎಲ್ಲ ದ್ವಿಪಕ್ಷೀಯ ಸಾಲಗಳನ್ನು ಮೇ 1 ಮತ್ತು ಡಿಸೆಂಬರ್ 31, 2020 ರ ನಡುವೆ ತೀರಿಸಲು ನಿಗದಿಯಾಗಿದ್ದ ಕಾಲಾವಧಿಯನ್ನು ಎಂಟು ತಿಂಗಳ ವರೆಗೆ ಮುಂದೂಡಲಾಗುವುದು. ಆದರೆ, ಈ ದೇಶಗಳು ಐಎಂಎಫ್ ಮತ್ತು ವಿಶ್ವಬ್ಯಾಂಕ್ ಗಳಿಗೆ ತೀರಿಸಬೇಕಾಗಿದ್ದ ಸಾಲಗಳನ್ನು ನಿಗದಿತ ವೇಳೆಯ ಪ್ರಕಾರವೇ ತೀರಿಸಬೇಕಾಗಿದೆ (ಈ ಸಂಸ್ಥೆಗಳು ಪ್ರತ್ಯೇಕವಾಗಿ ಯಾವುದೇ ರಿಯಾಯಿತಿಗಳನ್ನು ಅನುಮತಿಸದ ಹೊರತು), ಮತ್ತು ಖಾಸಗಿ ಸಾಲದಾತರಿಗೆ ಕೂಡ (ಈ ಖಾಸಗಿ ಸಾಲದಾತರು ಸ್ವಯಂಪ್ರೇರಿತವಾಗಿ ಮರು ಪಾವತಿಗೆ ಸಮಯಾವಕಾಶ ನೀಡದ ಹೊರತು) ನಗದಿತ ವೇಳೆಯ ಪ್ರಕಾರವೇ ಸಾಲ ತೀರಿಸಬೇಕಾಗುತ್ತದೆ.

ಸರ್ಕಾರ–ಸರ್ಕಾರಗಳ ನಡುವಿನ ಯಾವ ಸಾಲಗಳು 2020 ರಲ್ಲಿ ಬಾಕಿ ಇವೆಯೊ ಅಂತಹ ಸಾಲಗಳ ಮರುಪಾವತಿಯನ್ನು 2022ರವರೆಗೆ ಮುಂದೂಡಿದ ನಂತರ ಅದನ್ನು ಮೂರು ವರ್ಷ, ಅಂದರೆ, 2022, 2023 ಮತ್ತು 2024 ರ ವರೆಗೆ ವಿಸ್ತರಿಸಬಹುದು.

ಏಪ್ರಿಲ್ 16, 2020 ರಂದು ಪ್ರಕಟಪಡಿಸಿದ ಈ ಒಪ್ಪಂದವನ್ನು ಒಂದು ಬಹು ದೊಡ್ಡ ಕೊಡುಗೆ ಎಂದು ಕೆಲವು ವಲಯಗಳು ಶ್ಲಾಘಿಸಿರುವುದು ಆಶ್ಚರ್ಯವೇನಲ್ಲ. ಆದರೆ, ವಾಸ್ತವವಾಗಿ ಹೇಳುವುದಾದರೆ, ಇದು, ಜಾಗತಿಕ ಹಣಕಾಸು ಬಂಡವಾಳದ ಮತ್ತು ಮುಂದುವರೆದ ದೇಶಗಳ ಸರ್ಕಾರಗಳ ಹಠಮಾರಿತನದ ಒಂದು ಪ್ರದರ್ಶನವಾಗಿದೆ.

ಮೊಟ್ಟ ಮೊದಲಿಗೆ, ಈ ಇಡೀ ಒಪ್ಪಂದವು ಕೇವಲ ದೇಶ–ದೇಶಗಳ ಸರ್ಕಾರಗಳ ನಡುವಿನ ಸಾಲಗಳನ್ನು ಮಾತ್ರ ಒಳಗೊಳ್ಳುತ್ತದೆ. ಇದು ಖಾಸಗಿ ಸಾಲದಾತರನ್ನು ಒಳಗೊಳ್ಳುವುದಿಲ್ಲ ಮತ್ತು ರಿಯಾಯಿತಿ ಕೊಡುವುದು ಅವರಿಗೆ ಬಿಟ್ಟ ವಿಷಯ. ಎರಡನೆಯದಾಗಿ, ಈ ಒಪ್ಪಂದವು ಕೇವಲ ಸಾಲದ ಮತ್ತು ಸಾಲ ಮರು ಪಾವತಿಯ ಅವಧಿಯನ್ನು ಮುಂದೂಡುವ ಉದ್ದೇಶ ಹೊಂದಿದೆ. ಇದರಲ್ಲಿ ದೇಶ–ದೇಶಗಳ ಸರ್ಕಾರಗಳ ನಡುವಿನ ಸಾಲಗಳ ಒಂದು ಪೈಸೆಯನ್ನೂ ಮಾಫಿ ಮಾಡಿಲ್ಲ. ಅಂದರೆ, ಇಂದಿನಿಂದ ಒಂದೆರಡು ವರ್ಷಗಳ ನಂತರ ಸಾಲ–ಮರುಪಾವತಿಯ ಸಮಯ ಬಂದಾಗ, ಎಲ್ಲ ಸಾಲಗಳೂ ಒಟ್ಟಾಗಿ ಒಮ್ಮೆಲೇ ಮೈಮೇಲೆ ಬೀಳುತ್ತವೆ.



ತಮ್ಮ ಪ್ರಾಥಮಿಕ ಸರಕುಗಳ ರಫ್ತು ಬೆಲೆಗಳು ಈಗ ಎಷ್ಟು ಮಟ್ಟಿಗೆ ತಗ್ಗಿವೆಯೊ, ಅವುಗಳ ರಫ್ತು ಸಂಪಾದನೆಯೂ ಅಷ್ಟೇ ತಗ್ಗಿದ ಮಟ್ಟದಲ್ಲೇ ಉಳಿಯುವುದರಿಂದ, 2022 ರ ವೇಳೆಗೆ ಈ 77 ಕಡು ಬಡ ದೇಶಗಳ ರಫ್ತಿನ ಪ್ರಮಾಣವು ಅಷ್ಟೇನೂ ಹೆಚ್ಚಾಗಿರುವುದಿಲ್ಲ ಎಂದು ಧಾರಾಳವಾಗಿ ಹೇಳಬಹುದು. ಎರಡು ವರ್ಷಗಳ ನಂತರವೂ ಜಾಗತಿಕ ಅರ್ಥವ್ಯವಸ್ಥೆಯು ಹಿಂಜರಿತದ ಸ್ಥಿತಿಯಲ್ಲೇ ಮುಂದುವರಿಯುವ ಕಾರಣದಿಂದ ಈ ದೇಶಗಳ ಎಲ್ಲ ಸಾಲಗಳನ್ನೂ ಒಟ್ಟಾಗಿ ಒಮ್ಮೆಲೇ ಮರುಪಾವತಿ ಮಾಡಬೇಕಾದಾಗ ಈ ದೇಶಗಳ ಸಾಲಗಳ ಹೊರೆ ಭಯಾನಕವಾಗಿರುತ್ತದೆ. ಅವರು 2022 ರಲ್ಲಿ ತೀರಿಸಬೇಕಿರುವ ಸಾಲದ ಜೊತೆಗೆ, 2020ರಲ್ಲೇ ತೀರಿಸಬೇಕಿದ್ದ ಸಾಲದ ಒಂದು ಭಾಗವನ್ನೂ ಹೆಚ್ಚುವರಿಯಾಗಿ ತಮ್ಮ ಅಲ್ಪ ರಫ್ತು ಸಂಪಾದನೆಯಿಂದಲೇ ತೀರಿಸಬೇಕಾಗುತ್ತದೆ.

ಇದು ಸಾಲ ಬಿಕ್ಕಟ್ಟಿನ ಮುಂದೂಡಿಕೆ ಮಾತ್ರವಲ್ಲ. ಅದೂ ಸಹ ಭಾಗಶಃವೇ. ವಾಸ್ತವವಾಗಿ, ಈ ಮುಂದೂಡುವಿಕೆಯು ಭವಿಷ್ಯದಲ್ಲಿ ಸಾಲದ ಹೊರೆ ಇನ್ನೂ ಹೆಚ್ಚು ಭಾರವಾಗುವಂತೆ ಮಾಡುತ್ತದೆ. ಆದ್ದರಿಂದ ಈ ಪರಿಸ್ಥಿತಿಯನ್ನು ಗಮನದಲ್ಲಿಟ್ಟಕೊಂಡು, ಜಿ–20 ಮಾಡಬಹುದಾದಾದ ಏಕೈಕ ವಿವೇಚನಾಶೀಲ ಕೆಲಸವೆಂದರೆ, 77 ಕಡು ಬಡ ದೇಶಗಳ ಬಾಹ್ಯ ಸಾಲವನ್ನು ಸಂಪೂರ್ಣವಾಗಿ ಮನ್ನಾಮಾಡುವುದು/ ರದ್ದುಪಡಿಸುವುದು. ಜಿ –20 ಗೆ ಇದೊಂದು ಭಾರಿ ಹೊರೆಯೇನಲ್ಲ.

ಜಿ–20 ಕಾರ್ಯಕ್ರಮದಡಿ ಸಾಲ ಮರು ಪಾವತಿಯ ವೇಳೆ ಬದಲಾವಣೆಗೆ ಅರ್ಹವಾಗಿರುವ 77 ದೇಶಗಳ ಒಟ್ಟು ಬಾಹ್ಯ ಸಾಲವು ಸುಮಾರು 750 ಬಿಲಿಯನ್ ಡಾಲರ್‌ಗಳಾಗುತ್ತದೆ ($750,000,000,000). ಜಿ–20 ದೇಶಗಳ ಒಟ್ಟು ಜಿಡಿಪಿಯು 78.286 ಟ್ರಿಲಿಯನ್ ಡಾಲರ್‌ಗಳಷ್ಟಿದೆ ($78,286,000,000,000). ಆದ್ದರಿಂದ, 77 ಕಡು ಬಡ ದೇಶಗಳ ಒಟ್ಟು ಸಾಲವು ಜಿ–20 ಯ ಜಿಡಿಪಿಯ 1% ಗಿಂತ ಕಡಿಮೆ ಮೊತ್ತದಾಗಿದೆ. ತಮ್ಮ ಜಿಡಿಪಿಯ ಶೇ .1 ಕ್ಕಿಂತ ಕಡಿಮೆ ಇರುವ ಸಾಲವನ್ನು ಮನ್ನಾ ಮಾಡುವುದು ಜಿ –20 ದೇಶಗಳಿಗೆ ಪ್ರಯಾಸಕರವಲ್ಲ.

ವಾಸ್ತವವಾಗಿ, ಕೆಲವು ವರ್ಷಗಳ ಹಿಂದೆ, ಬ್ರಾಂಟ್ ಆಯೋಗವು ಮುಂದುವರೆದ ದೇಶಗಳು ಪ್ರತಿ ವರ್ಷವೂ ತಮ್ಮ ಜಿಡಿಪಿಯ 1% ರಷ್ಟು ಹಣವನ್ನು ಮೂರನೆಯ ಜಗತ್ತಿನ ದೇಶಗಳ ನೆರವಿಗೆ ಮೀಸಲಿಡುವಂತೆ ಸೂಚಿಸಿತ್ತು. ಅರ್ಥಾತ್, ಬ್ರಾಂಟ್ ಆಯೋಗವು ಪ್ರತಿ ವರ್ಷವೂ 77 ಕಡು ಬಡ ದೇಶಗಳ ಒಟ್ಟು ಸಾಲಕ್ಕೆ ಸರಿ ಸಮನಾದ ಮೊತ್ತವನ್ನು ಜಗತ್ತಿನ ಉತ್ತರದ ದೇಶಗಳಿಂದ ದಕ್ಷಿಣದ ದೇಶಗಳಿಗೆ ವರ್ಗಾಯಿಸುವ ಸಲಹೆ ಕೊಟ್ಟಿತ್ತು. ಹಾಗಾಗಿ, ಅನೇಕ ಮಂದಿ ಈ ಸಾಲವನ್ನು ಮನ್ನಾ ಮಾಡಬೇಕು ಎಂದು ವಾದಿಸುತ್ತಾರೆ.

ವಿಲ್ಲಿ ಬ್ರಾಂಡ್ಟ್ ಈ ಸಲಹೆ ನೀಡಿದ ಸಮಯದಲ್ಲಿ ಇದೊಂದು ದೊಡ್ಡ ಹೊರೆ ಎಂದು ಯಾರೂ ಅಂದುಕೊಂಡಿರಲಿಲ್ಲ. ಬದಲಾಗಿ, ಈ ಸಲಹೆಗೆ

ಪುಟ 15 ನೋಡಿ



ರೈತಾಪಿ ಬೇಸಾಯದ ಕಾರ್ಪೋರೇಟೀಕರಣ

ಕೃಷಿ–ವ್ಯಾಪಾರಿ ಸಂಸ್ಥೆಗಳಿಗೆ ಸ್ವಾತಂತ್ರ್ಯ, ರೈತಾಪಿ ಜನತೆಗೆ ಗುಲಾಮಗಿರಿ – ಪಿ. ಕೃಷ್ಣಪ್ರಸಾದ್

ಯಾವುದೇ ಶೋಷಣಾ ಭಯವಿಲ್ಲದೇ 'ಸಮತಟ್ಟಾದ ಮೈದಾನ'ದಲ್ಲೇ ಸಂಸ್ಕರಣಾ ಉದ್ದಿಮೆದಾರರು, ಸಗಟು ಪೂರೈಕೆದಾರರು, ಸಗಟು ವರ್ತಕರು, ದೊಡ್ಡ ಚಿಲ್ಲರೆ ವ್ಯಾಪಾರಿಗಳು ಹಾಗೂ ರಫ್ತುದಾರರ ಜೊತೆ ವ್ಯವಹರಿಸುವಂತೆ ರೈತರನ್ನು ಸಶಕ್ತಗೊಳಿಸಿವೆ ಎಂದು ಈ ಸುಗ್ರಿವಾಜ್ಞೆಗಳು ಹೇಳುತ್ತವೆ. ಆದರೆ ತದ್ವಿರುದ್ಧವಾಗಿ ರೈತರನ್ನೇ ನಿರ್ಮೂಲನೆಗೊಳಿಸಲಿದ್ದು, ದೊಡ್ಡ ಭೂಮಾಲೀಕರು, ಕೃಷಿ ವ್ಯಾಪಾರ ಸಂಸ್ಥೆಗಳ ಲಾಭಕ್ಕೆ ತೊತ್ತಾಗುವಂತೆ ಮಾಡಲಿದೆ. ಇದರ ಹಿಂದೆ ಇರುವ ಉದ್ದೇಶ, ಭೂಮಿಯ ಕ್ರೋಢೀಕರಣ ಹಾಗೂ ಒಪ್ಪಂದ (ಕಾಂಟ್ರಾಕ್ಟ್) ಕೃಷಿಯ ಉತ್ತೇಜನದ ಜೊತೆಗೆ, ಕಾರ್ಪೋರೇಟ್ ಕಂಪನಿಗಳು ಭೂಮಿ ಗುತ್ತಿಗೆ ಪಡೆಯುವಂತೆ ಉತ್ತೇಜಿಸುವುದೇ ಆಗಿದೆ.

ಅನು: ಟಿ. ಯಶವಂತ

ಬಿಜೆಪಿ ನೇತೃತ್ವದ ನರೇಂದ್ರ ಮೋದಿ ಸಂಪುಟವು ರೈತರ ಉತ್ಪನ್ನ ಮಾರಾಟ ಹಾಗೂ ವಾಣಿಜ್ಯ (ಉತ್ತೇಜನ ಮತ್ತು ಬೆಂಬಲ)ಸುಗ್ರಿವಾಜ್ಞೆ 2020, ಬೆಲೆ ಭರವಸೆ ಹಾಗೂ ಕೃಷಿ ಸೇವೆಗಳ ಕುರಿತ ರೈತ (ಸಶಕ್ತೀಕರಣ ಮತ್ತು ರಕ್ಷಣೆ) ಒಪ್ಪಂದ ಸುಗ್ರಿವಾಜ್ಞೆ 2020 ಮತ್ತು ಅಗತ್ಯ ವಸ್ತುಗಳ (ತಿದ್ದುಪಡಿ) ಸುಗ್ರಿವಾಜ್ಞೆ 2020 ಈ ಮೂರು ಸುಗ್ರಿವಾಜ್ಞೆಗಳನ್ನು ಅಂಗೀಕರಿಸಿದೆ. ಪ್ರಧಾನ ಮಂತ್ರಿ ರವರು 'ಆತ್ಮನಿರ್ಭರ್ ಭಾರತ್' ಕ್ಕಾಗಿ ಘೋಷಿಸಿದ ಪ್ಯಾಕೇಜ್ ನ ಭಾಗಗಳಿವು. ಎಲ್ಲಾ ಮುಖ್ಯ ವಾಹಿನಿ ಮಾಧ್ಯಮಗಳು "ಯಾವುದೇ ಬೆಲೆಗೆ ಯಾರಿಗಾದರೂ ತಮ್ಮ ಉತ್ಪನ್ನಗಳನ್ನು ಮಾರುವ ರೈತರ 'ಸ್ವಾತಂತ್ರ್ಯ' ಎಂದು ತಲೆಬರಹ ದಡಿ ಪ್ರಕಟಿಸಿವೆ. ಆದರೆ ವಾಸ್ತವವಾಗಿ "ಯಾವುದೇ ರೈತರಿಂದ ಯಾವುದೇ ಬೆಲೆಗೆ ಯಾವುದೇ ಉತ್ಪನ್ನವನ್ನು ಖರೀದಿಸುವ ಕಾರ್ಪೊರೇಟ್ ಗಳ ಸ್ವಾತಂತ್ರ್ಯವಿದು".

'ಕೃಷಿಗೆ ಇಂದು ಐತಿಹಾಸಿಕ ದಿನ. 1947 ರಲ್ಲೇ ದೇಶ ಸ್ವಾತಂತ್ರ್ಯ ಪಡೆದಿದ್ದರೂ ಈ ಸುಗ್ರಿವಾಜ್ಞೆ ಮೂಲಕ ರೈತರಿಗೆ ಸ್ವಾತಂತ್ರ್ಯ ಸಿಕ್ಕಿದೆ'. ಹೀಗೆ 2020 ಜೂನ್ 3 ರ ಪತ್ರಿಕಾಗೋಷ್ಠಿಯಲ್ಲಿ ಕೇಂದ್ರ ಕೃಷಿ ಮಂತ್ರಿ ನರೇಂದ್ರ ತೋಮರ್ ರವರು ಹೇಳಿದ್ದಾರೆಂದು ಎಕಾನಾಮಿಕ್ ಟೈಮ್ಸ್ ವರದಿ ಮಾಡಿದೆ. ಆರ್.ಎಸ್.ಎಸ್ ನೇತೃತ್ವದ ಕೂಟ ಹೇಗೆ ತನ್ನ ಪ್ರಚಾರವನ್ನು ನಡೆಸುತ್ತದೆ ಎಂಬುದಕ್ಕೆ ಇದೊಂದು ಉದಾಹರಣೆ.

'ಭರವಸೆ ಬೆಲೆಯೊಂದಿಗೆ ಉತ್ಪನ್ನಗಳನ್ನು ಮಾರಾಟ ಮಾಡುವ ಸ್ವಾತಂತ್ರ್ಯ'ವನ್ನು ಖಾತರಿ ಪಡಿಸುವ ಅಂಶಗಳನ್ನು ಪರಿಶೀಲಿಸೋಣ. ಬೆಲೆ ಭರವಸೆ ಹಾಗೂ ಕೃಷಿ ಸೇವೆಗಳ ಕುರಿತ ರೈತರ (ಸಶಕ್ತೀಕರಣ ಮತ್ತು ರಕ್ಷಣೆ) ಒಪ್ಪಂದ [F(E&P) APAFS] ದ ಅಧ್ಯಾಯ 2 ರ ಸೆಕ್ಷನ್ 5, ಕೃಷಿ ಉತ್ಪನ್ನಗಳ ಬೆಲೆ ಬಗ್ಗೆ ಚರ್ಚಿಸುತ್ತಾ, 'ಕೃಷಿ ಉತ್ಪನ್ನಗಳಿಗೆ ಖಾತರಿ ಬೆಲೆ'ಯನ್ನು ಸಮರ್ಥಿಸುತ್ತದೆಯಾದರೂ ದರವು ಕನಿಷ್ಠ ಬೆಂಬಲ ಬೆಲೆ (MSP)ಗಿಂತ ಕೆಳಗಿರಬಾರದು ಎಂಬುದನ್ನು ನಿರ್ಬಂಧಿಸಿಲ್ಲ. ಎಪಿಎಂಸಿ ಯಲ್ಲಿ ನೀಡಲಾದ ದರವನ್ನೂ ಸಹ ಇದು ಗ್ಯಾರಂಟಿ ಪಡಿಸುವುದಿಲ್ಲ. ರೈತಾಪಿ ಜನತೆ ಆಗ್ರಹಿಸುತ್ತಿರುವಂತೆ ಮತ್ತು ತನ್ನ 2014 ರ ಚುನಾವಣಾ ಪ್ರಣಾಳಿಕೆಯಲ್ಲಿ ಬಿಜೆಪಿ ಭರವಸೆ ನೀಡಿದಂತೆ ಎಂ.ಎಸ್.ಪಿ ಯನ್ನಾಗಲಿ ಅ2+ ಶೇಕಡಾ 50 ಯನ್ನಾಗಲಿ ಈ ಸುಗ್ರಿವಾಜ್ಞೆಯ ಯಾವ ಭಾಗದಲ್ಲೂ ಪ್ರಸ್ತಾಪಿಸಿಲ್ಲ.

ಒಕ್ಕೂಟ ವ್ಯವಸ್ಥೆ ಮೇಲಿನ ದಾಳಿ

ರಾಜ್ಯ ಸರ್ಕಾರಗಳ ವ್ಯಾಪ್ತಿಯಡಿಯಲ್ಲಿ ಬರುವ ಎಪಿಎಂಸಿ ಕಾಯ್ದೆಗಳು ನಿರ್ಧರಿಸಿದ ಬೆಲೆಗಳು ಕೃಷಿ ವ್ಯಾಪಾರ ಸಂಸ್ಥೆಗಳಿಗೆ ಅನ್ವಯವಾಗುವುದಿಲ್ಲ ಎಂಬ ಪ್ರಸ್ತಾಪವನ್ನು ಈ ಸುಗ್ರಿವಾಜ್ಞೆಗಳು ಒಳಗೊಂಡಿವೆ. ದೇಶದ ಯಾವುದೇ ಮೂಲೆಯಿಂದಾದರೂ ಯಾವುದೇ ರೈತನಿಂದ ನೇರವಾಗಿ ತಮಗಿಚ್ಛಿಸಿದ ಬೆಲೆಯಲ್ಲಿ ಇವರು ಕೊಳ್ಳಬಹುದಾಗಿದೆ. ಆಹಾರ ವಸ್ತುಗಳನ್ನು ಅನಿಯಂತ್ರಿತ ಗೊಳಿಸುವ ಮೂಲಕ ಮಾದರಿ ಒಪ್ಪಂದ ಕೃಷಿ ಕಾಯ್ದೆ ವ್ಯಾಪ್ತಿಯಡಿಯಲ್ಲಿ ಕೃಷಿ ವ್ಯಾಪಾರ ಸಂಸ್ಥೆಗಳು ತಮ್ಮ ಅಗತ್ಯ ಹಾಗೂ ಬೇಡಿಕೆ ಗೆ ಅನುಗುಣವಾಗಿ ಉತ್ಪಾದಿಸುವಂತೆ ರೈತರನ್ನು ಬಲವಂತಕ್ಕೆ ಒಳಪಡಿಸುವುದು ಮತ್ತು ಎಷ್ಟು ಪ್ರಮಾಣದಲ್ಲಿ ಬೇಕಾದರೂ ಖರೀದಿಸಬಹುದೆಂಬ ಕಾರಣದಿಂದ ನೇರವಾಗಿ ರೈತರನ್ನು ಒತ್ತಡಕ್ಕೀಡು ಮಾಡಬಹುದು. ಅಷ್ಟೇ ಅಲ್ಲ ಭೂಬಳಕೆ ಯನ್ನು ಸಹ ದುರ್ಬಲಗೊಳಿಸುತ್ತದೆ. ಕೃಷಿಯು ರಾಜ್ಯ ಪಟ್ಟಿಯಲ್ಲಿ ಬರುವ ವಿಷಯ ವಾಗಿದ್ದರೂ, ಮೋದಿ ಸರ್ಕಾರ ಒಕ್ಕೂಟ ತತ್ವಗಳನ್ನು ಉಲ್ಲಂಘಿಸುವ ಏಕಪಕ್ಷೀಯ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದೆ ಹಾಗೂ ಕೃಷಿ ಉತ್ಪನ್ನಗಳು ಹಾಗೂ ಸಂಪನ್ಮೂಲಗಳ ಮೇಲಿನ ರಾಜ್ಯ ಸರ್ಕಾರಗಳ ಅಭಿಮತ ಮತ್ತು ನಿಯಂತ್ರಣವನ್ನು ಲೆಕ್ಕಿಸದೇ ಅವುಗಳನ್ನು ತನ್ನ ಅಧೀನಕ್ಕೆ ಒಳಪಡಿಸುತ್ತಿದೆ. ಈ ಕ್ರಮಗಳನ್ನು ಖಂಡಿಸಿರುವ ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ರಾಜ್ಯ ಸರ್ಕಾರಗಳು ಸಹ ವಿರೋಧಿಸಬೇಕೆಂದು ಕರೆ ನೀಡಿದೆ.

'ಒಂದು ದೇಶ ಒಂದು ಮಾರುಕಟ್ಟೆ' ಆಹಾರ ಭದ್ರತೆಯ ಅಂತ್ಯ

ಪ್ರಧಾನಮಂತ್ರಿಯವರು 'ಒಂದು ದೇಶ–ಒಂದು ಮಾರುಕಟ್ಟೆ' ಮತ್ತು 'ಅಡೆತಡೆ ಇಲ್ಲದ ಮುಕ್ತ ಅಂತರರಾಜ್ಯ ಕೃಷಿ ಉತ್ಪನ್ನಗಳ ಇ–ಮಾರಾಟ' ದ ಘೋಷಣೆ ನೀಡಿದ್ದಾರೆ. ಅಗತ್ಯ ಸೇವೆಗಳ ಕಾಯ್ದೆ (ECA) ಯ ತಿದ್ದುಪಡಿ, ಖಾಸಗಿ ಭಾಗಿದಾರರ ಮತ್ತು ಕೃಷಿ ವ್ಯಾಪಾರ ಸಂಸ್ಥೆಗಳ ಮೇಲಿನ ಎಲ್ಲಾ ನಿರ್ಬಂಧಗಳನ್ನು ಅಥವಾ ನಿಯಂತ್ರಣಗಳನ್ನು ಕಿತ್ತೊಗೆಯಲಿದೆ. ರೈತರಿಗಿಂತ ಹೆಚ್ಚಾಗಿ ವಿಶಾಲವಾದ ಸಾಮಾನ್ಯ ಜನತೆಯ ಹಿತರಕ್ಷಣೆ ಮಾಡುವ ಉದ್ದೇಶವನ್ನು ಅಗತ್ಯ ಸೇವೆಗಳ ಕಾಯ್ದೆ ಒಳಗೊಂಡಿತ್ತು. ಅಗತ್ಯ ವಸ್ತುಗಳ ಕಾಯ್ದೆಯ ಅಗತ್ಯ ಪಟ್ಟಿಯಿಂದ ಆಹಾರ ಧಾನ್ಯಗಳು, ದ್ವಿದಳ ಧಾನ್ಯಗಳು, ಎಣ್ಣೆ ಬೀಜಗಳು, ಖಾದ್ಯತೈಲಗಳು, ಈರುಳ್ಳಿ ಹಾಗೂ ಆಲೂಗಡ್ಡೆ ಯಂತಹ ಸರಕುಗಳನ್ನು ಕಿತ್ತುಹಾಕಿರುವುದು ಆಹಾರ ಭದ್ರತೆ ಗೆ ದೊಡ್ಡ ಕಂಟಕವಾಗಲಿದೆ. ಈ ಅಗತ್ಯ ವಸ್ತುಗಳ ದಾಸ್ತಾನು ಮತ್ತು ಇವುಗಳ ಭವಿಷ್ಯ ಮಾರಾಟವನ್ನು ತಡೆಯುವ ಏಕೈಕ ಅತಿ ಮುಖ್ಯ ಕಾನೂನು ಇದ್ದುದ್ದು ಇದೊಂದೇ. ಈಗ ಸಂಸ್ಕರಣಾ ಉದ್ದಿಮೆದಾರರು, ಸಗಟು ಪೂರೈಕೆದಾರರು ಹಾಗೂ ದೊಡ್ಡ ಖರೀದಿದಾರರು ಎಷ್ಟೇ ಪ್ರಮಾಣದ ಬೆಳೆಗಳನ್ನು ಖರೀದಿಸಬಹುದು, ದಾಸ್ತಾನಿಟ್ಟು ನವ ಉದಾರವಾದಿ ಮಾರುಕಟ್ಟೆಯ ಮರ್ಜಿಗೆ ಒಳಪಟ್ಟು ಮಾರಬಹುದು. ಅಂದರೆ ಕೃಷಿಯನ್ನು ಕಳ್ಳ ದಾಸ್ತಾನು, ಕಾಳಧಂದೆ ಹಾಗೂ ಕೊನೆಯಿಲ್ಲದ ಖಾಸಗಿ ಲಾಭಕೋರತನಕ್ಕೆ ತೆರೆಯುವುದು ಎಂದರ್ಥ. ಹಾಗಾಗಿ ಸ್ವಾತಂತ್ರ್ಯವು ದೊಡ್ಡ ಖರೀದಿದಾರರಿಗೆ ಹೊರತು ಪ್ರಧಾನಮಂತ್ರಿ ಗಳು ಮತ್ತವರ ಚಮಚಾಗಳು ಹೇಳುವಂತೆ ರೈತರಿಗಲ್ಲ.

ಪ್ರಶ್ನಾತೀತ ಸ್ವಾತಂತ್ರ್ಯ–ನ್ಯಾಯಾಂಗದ ನಿರಾಕರಣೆ

ರೈತರ ಉತ್ಪನ್ನ ಮಾರಾಟ ಹಾಗೂ ವಾಣಿಜ್ಯ (ಉತ್ತೇಜನ ಮತ್ತು ಬೆಂಬಲ) [ಈಕಖಿಅ(ಕ&ಈ)] ಸುಗ್ರಿವಾಜ್ಞೆಯು ತನ್ನ ಅಧ್ಯಾಯ 5 ರ ಸೆಕ್ಷನ್ 15 ರಲ್ಲಿ, ಈ ಸಂಬಂಧ "ಯಾವುದೇ ಸಿವಿಲ್ ನ್ಯಾಯಾಲಯವು ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಕರಣದಲ್ಲಿ ಅಥವಾ ವಿಚಾರಣೆಯಲ್ಲಿ ಪ್ರವೇಶಿಸುವ ಯಾವುದೇ ಕಾರ್ಯವ್ಯಾಪ್ತಿಯನ್ನು ಹೊಂದಿರುವುದಿಲ್ಲ" ಎಂದು ಹೇಳಿದೆ. ಅಂದರೆ ರೈತ ಮತ್ತು ದೊಡ್ಡ ಖರೀದಿದಾರನ ನಡುವೆ ವಿವಾದ ಬಂದರೆ, ರೈತ ಯಾವುದೇ ನ್ಯಾಯಾಲಯದ ಬಾಗಿಲು ಬಡಿಯುವಂತಿಲ್ಲ. ಭಾರತದ ಸಂವಿಧಾನದ ಅಡಿಯಲ್ಲಿ ಕಾನೂನು ರಚಿಸಬಹುದೇ ಹೊರತು ನ್ಯಾಯಾಂಗ ಪ್ರಕ್ರಿಯೆಯನ್ನೇ ನಿರಾಕರಿಸುವಂತಿಲ್ಲವಾದ್ದರಿಂದ ಈ ಸುಗ್ರಿವಾಜ್ಞೆ ಕಾನೂನು ಬಾಹಿರ. ಇಂತಹ ರೈತ–ವಿರೋಧಿ ಸ್ವರೂಪದ ಕ್ರಮಗಳನ್ನು ರೈತ ಸಂಘಟನೆಗಳು, ಸಂಸತ್ತು ಅಥವಾ ರಾಜ್ಯ ಸರ್ಕಾರಗಳ ಜೊತೆ ಯಾವುದೇ ಚರ್ಚೆ ಇಲ್ಲದೇ ತರಾತುರಿಯಲ್ಲಿ ಸುಗ್ರಿವಾಜ್ಞೆ ಹಾದಿಯ ಮೂಲಕ ತರುವುದನ್ನು ಸಾರ್ವಜನಿಕವಾಗಿ ಖಂಡಿಸಿ ವ್ಯಾಪಕವಾಗಿ ತಿಳಿಸಬೇಕು ಮತ್ತು ನ್ಯಾಯಾಲಯದದಲ್ಲಿ ಪ್ರಶ್ನಿಸಬೇಕು.

ರೈತರು ಸಂಕಷ್ಟಕ್ಕೆ ಗುರಿಯಾಗಿರುವುದು ಮಾರುಕಟ್ಟೆಯಲ್ಲಿನ ನಿರ್ಬಂಧಗಳಿಂದಲ್ಲ; ಬದಲಾಗಿ ಲಾಭದಾಯಕ ಬೆಲೆಗಳೇ ಇರದ ಪರಿಸ್ಥಿತಿ ರೈತರನ್ನು ಸಂಕಷ್ಟಕ್ಕೆ ದೂಡಿದೆ. ಕನಿಷ್ಠ ಬೆಂಬಲ ಬೆಲೆಯನ್ನು ಖಾತರಿಗೊಳಿಸುವ ಬದಲು ಮೋದಿ ಸರ್ಕಾರ, ಕೃಷಿ ವ್ಯಾಪಾರ ಸಂಸ್ಥೆಗಳ ಖರೀದಿ ಸ್ವಾತಂತ್ರ್ಯಕ್ಕೆ ಹಾಗೂ ರೈತಾಪಿ ಬೇಸಾಯದ ಕಂಪನೀಕರಣಕ್ಕೆ ಉತ್ಸಾಹ ತೋರುತ್ತಿದೆ. ಈ ಮೂರು ಸುಗ್ರಿವಾಜ್ಞೆಗಳು ರೈತ ಉತ್ಪನ್ನಗಳ ಮಾರಾಟವನ್ನು ಅನಿಯಂತ್ರಿತಗೊಳಿಸಲಿವೆ. ಇದು ಆಹಾರ ಭದ್ರತೆ ಹಾಗೂ ಏಕಸ್ವಾಮ್ಯ ಕಾರ್ಪೋರೇಟ್ ಶಕ್ತಿಗಳು ಗ್ರಾಮೀಣ ಕೃಷಿ ಮಾರುಕಟ್ಟೆಯನ್ನು ನೇರವಾಗಿ ಆಕ್ರಮಿಸುವುದರ ವಿರುದ್ಧ ಇದ್ದ ಕಾನೂನು ಬದ್ಧ ರಕ್ಷಣೆಯನ್ನು ನಾಶಪಡಿಸಲಿದೆ.

ರೈತಾಪಿ ಬೇಸಾಯದ ಕಾರ್ಪೋರೇಟೀಕರಣ

ಯಾವುದೇ ಶೋಷಣಾ ಭಯವಿಲ್ಲದೇ 'ಸಮತಟ್ಟಾದ ಮೈದಾನ'ದಲ್ಲೇ ಸಂಸ್ಕರಣಾ ಉದ್ದಿಮೆದಾರರು, ಸಗಟು ಪೂರೈಕೆದಾರರು, ಸಗಟು ವರ್ತಕರು, ದೊಡ್ಡ ಚಿಲ್ಲರೆ ವ್ಯಾಪಾರಿಗಳು ಹಾಗೂ ರಫ್ತುದಾರರ ಜೊತೆ ವ್ಯವಹರಿಸುವಂತೆ ರೈತರನ್ನು ಸಶಕ್ತಗೊಳಿಸಿವೆ ಎಂದು ಈ ಸುಗ್ರಿವಾಜ್ಞೆಗಳು ಹೇಳುತ್ತವೆ. ಆದರೆ ತದ್ವಿರುದ್ಧವಾಗಿ ರೈತರನ್ನೇ ನಿರ್ಮೂಲನೆಗೊಳಿಸಲಿದ್ದು, ದೊಡ್ಡ ಭೂಮಾಲೀಕರು, ಕೃಷಿ ವ್ಯಾಪಾರ ಸಂಸ್ಥೆಗಳ ಲಾಭಕ್ಕೆ ತೊತ್ತಾಗುವಂತೆ ಮಾಡಲಿದೆ. ಇದರ ಹಿಂದೆ ಇರುವ ಉದ್ದೇಶ ಭೂಮಿ ಕ್ರೋಢೀಕರಣ ಹಾಗೂ ಒಪ್ಪಂದ (ಕಾಂಟ್ರಾಕ್ಟ್) ಕೃಷಿಯ ಉತ್ತೇಜನದ ಜೊತೆಗೆ ಕಾರ್ಪೋರೇಟ್ ಕಂಪನಿಗಳು ಭೂಮಿ ಗುತ್ತಿಗೆ ಪಡೆಯುವಂತೆ ಉತ್ತೇಜಿಸುವುದೇ ಆಗಿದೆ. ಮಾರುಕಟ್ಟೆಯ ಅಸ್ಥಿರತೆಯ ಭಾರವು ರೈತನಿಂದ ಪ್ರಾಯೋಜಕನಿಗೆ ವರ್ಗಾವಣೆ ಆಗಲಿದೆ ಎನ್ನುವ ವಾದವು ಸ್ಪಷ್ಟವಾಗಿ ಬಲಾಢ್ಯ ಕೃಷಿ ವ್ಯಾಪಾರ ಸಂಸ್ಥೆಗಳು ಹಾಗೂ ಕಾರ್ಪೋರೇಟ್ ಶಕ್ತಿಗಳು ರೈತರನ್ನು ಒಕ್ಕಲೆಬ್ಬಿಸಿ, ಕೃಷಿಯನ್ನು ವಶಕ್ಕೆ ತೆಗೆದುಕೊಳ್ಳುವುದನ್ನು ಸೂಚಿಸುತ್ತದೆ ಮತ್ತು ರೈತಾಪಿ ಬೇಸಾಯದ ಕಾರ್ಪೋರೇಟೀಕರಣವನ್ನು ದೃಢವಾಗಿ ಖಾತರಿ ಪಡಿಸುತ್ತದೆ. ಶೇಖರಣೆ, ಶೀತ ಉಷ್ಣಾಂಶ ಉಳ್ಳ ಗೊಡೌನ್, ಸಂಗ್ರಹಣೆ ಹಾಗೂ ಸಾಗಾಣಿಕೆ ಮೂಲ ಸೌಕರ್ಯಗಳನ್ನು ಕೃಷಿ ವ್ಯಾಪಾರದ ಬಯಲು ದ್ವಾರ ಹಾಗೂ ಸಗಟು ಪೂರೈಕೆ ಸ್ಥಳಗಳು ಜೋಡಣೆಯಾಗುವಂತೆ ಅಭಿವೃದ್ಧಿ ಪಡಿಸುವ ಒಂದು ಲಕ್ಷ ಕೋಟಿ ರೂ ನ 'ಕೃಷಿ ಮೂಲ ಸೌಕರ್ಯ ನಿಧಿ' ಪ್ಯಾಕೇಜ್, ಕಾರ್ಪೋರೇಟ್ ಶಕ್ತಿಗಳ ವೃದ್ಧಿಗೆ ಪೂರಕವಾದ ಕೃಷಿ ವ್ಯಾಪಾರ ಅಗಾಧವಾಗಿ ಬೆಳೆಯಲು ನೀಡುತ್ತಿರುವ ನೆರವಾಗಿದೆ.

ಕಾರ್ಮಿಕ–ರೈತರ ಮೈತ್ರಿ ಬೆಳೆಸುವ ಹೋರಾಟಗಳನ್ನು ತೀವ್ರಗೊಳಿಸಿ

ಎಂತಹದ್ದೇ ಬೆಲೆ ತೆತ್ತಾದರೂ ಸರಿ ಈ ಸುಗ್ರಿವಾಜ್ಞೆಗಳನ್ನು ಪ್ರತಿರೋಧಿಸಿ ಕೃಷಿಯ ಕಾರ್ಪೋರೇಟೀಕರಣ ತಡೆಯಲು ಎಐಕೆಎಸ್ ನಿರ್ಧರಿಸಿದೆ. ಸಾಧ್ಯವಾದಷ್ಟೂ ವಿಶಾಲ ರೈತಾಪಿ ಚಳುವಳಿ ಈಗಿನ ಅಗತ್ಯವಾಗಿದೆ. ಇದೇ ಸಮಯದಲ್ಲಿ ಲಾಕ್ ಡೌನ್ ಹಾಗೂ ಜನರ ಓಡಾಟದ ಮೇಲಿನ ನಿರ್ಬಂಧದ ಅನುಕೂಲ ಪಡೆದು ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಸಂಪೂರ್ಣ ಖಾಸಗೀಕರಣ, ಕಾರ್ಮಿಕ ಕಾನೂನು ಕಿತ್ತು ಕೊಳ್ಳುತ್ತಿರುವುದು ಮತ್ತಿತರೆ ಮೋದಿ ಸರ್ಕಾರದ ದುಡಿಯುವ ವರ್ಗದ ಮೇಲಿನ ಒಟ್ಟಾರೆ ಧಾಳಿಯ ಹಿನ್ನೆಲೆಯಲ್ಲಿ ಜನರ ಜಂಟಿ ಹೋರಾಟವನ್ನು ಬೆಳೆಸುವುದು ಸಹ ಹೆಚ್ಚಿನ ಮಹತ್ವವನ್ನು ಹೊಂದಿದೆ. ರೈತಾಪಿ ಸಂಘಟನೆಗಳು ಹಾಗೂ ಕಾರ್ಮಿಕ ಸಂಘಗಳ ಜಂಟಿ ಹೋರಾಟಗಳೇ ಕಾರ್ಮಿಕ–ರೈತಾಪಿ ಮೈತ್ರಿಯ ಆಧಾರವಾಗಲಿದೆ. ಸಿಐಟಿಯು, ಎಐಕೆಎಸ್ ಹಾಗೂ ಎ.ಐ.ಎ.ಡಬ್ಲ್ಯೂ ಒಟ್ಟಾರೆ ಈ ದಿಕ್ಕಿನಲ್ಲಿ ಜಂಟಿ ಹೋರಾಟಗಳನ್ನು ಕೈಗೆತ್ತಿಕೊಳ್ಳಲಿದೆ.

ರಾಷ್ಟ್ರ ವಿರೋಧಿ ಆರ್.ಎಸ್.ಎಸ್ ಪಾತ್ರವನ್ನು ಬಯಲುಗೊಳಿಸಿ

ಈ ಪರಿಸ್ಥಿತಿಯು ಆಳುವ ವರ್ಗಗಳನ್ನು ಬಯಲುಗೊಳಿಸುವ ಹಿಂದೆಂದೂ ಇಲ್ಲದಷ್ಟು ಅವಕಾಶವನ್ನು ಸಹ ನೀಡಿದೆ. ಅಮೆರಿಕಾ ಸಾಮ್ರಾಜ್ಯಶಾಹಿ ಎದುರು ಆರ್.ಎಸ್.ಎಸ್ ಶರಣಾಗತಿಯು ಸ್ಪಷ್ಟವಾಗಿ ಗೋಚರಿಸುತ್ತಿದೆ. ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಹಿಂದೆ ವಕಾಲತ್ತು ವಹಿಸುತ್ತಿದ್ದ 'ಸ್ವದೇಶಿ' ಅಭಿವೃದ್ಧಿ ಮಾದರಿ ಕುರಿತು ಆರ್.ಎಸ್.ಎಸ್ ಮೌನವಾಗಿದೆ. ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ದೇಶಗಳೂ ಸಹ ಆರೋಗ್ಯ ಮತ್ತು ಸಾರಿಗೆಯಂತಹ ವಲಯಗಳಲ್ಲಿ ರಾಷ್ಟ್ರೀಕರಣಕ್ಕೆ ಹೋಗುತ್ತಿರುವ ಸಂದರ್ಭದಲ್ಲೂ ನವ ಉದಾರವಾದ ಕ್ಕೆ ಆರ್.ಎಸ್.ಎಸ್–ಬಿಜೆಪಿ ನೇತೃತ್ವದ ಮೋದಿ ಸರ್ಕಾರದ ಅಸಹ್ಯ ಶರಣಾಗತಿ ಆತ್ಮಹತ್ಯೆಕಾರಕವಾಗಿದೆ. ಕಾರ್ಮಿಕ ವರ್ಗ, ರೈತಾಪಿ ಸಮೂಹ ಮತ್ತು ಇಡೀ ಶೋಷಿತ ಜನತೆಯ ದೃಷ್ಟಿಯಲ್ಲಿ ಇಂದು ಆಳುವ ವರ್ಗಗಳು ತಮ್ಮ ವಿಶ್ವಾಸಾರ್ಹತೆ ಕಳೆದುಕೊಂಡಿವೆ. ಬಂಡವಾಳಶಾಹಿ ವ್ಯವಸ್ಥೆಯ ಅಂತರ್ಗತ ಬರ್ಬರತೆಯನ್ನು ಹಾಗೂ ಪರ್ಯಾಯದ ಅಗತ್ಯವನ್ನು ಜನತೆಗೆ ವಿವರಿಸಲು ಇದು ಸಕಾಲ.

ಎಡ ಪ್ರಜಾಸತ್ತಾತ್ಮಕ ರಂಗ ಸರ್ಕಾರದ ಮಹತ್ವ

ಕೇರಳದ ಎಲ್.ಡಿ.ಎಫ್ ಸರ್ಕಾರ, ಕರೋನಾ–19 ಸಾಂಕ್ರಾಮಿಕ ನಿಭಾಯಿಸುವ ಹಾಗೂ ಪರಿಣಾಮಕಾರಿಯಾಗಿ ರಾಜ್ಯದ ಜನರ ಮೇಲೆ ಅದರ ಪ್ರಭಾವವನ್ನು ಕಡಿಮೆ ಮಾಡುವಂತಹ ಸಮಗ್ರ ಧೋರಣಾ ಜಾಲವನ್ನೇ ಅಭಿವೃದ್ಧಿ ಪಡಿಸಿ ಅತ್ಯಂತ ಅಭಿನಂದನಾರ್ಹ ಕೆಲಸ ಮಾಡಿದೆ. ಸಿಪಿಐಎಂ ನೇತೃತ್ವದ ಎಲ್.ಡಿ.ಎಫ್ ಸರ್ಕಾರ 20 ಸಾವಿರ ಕೋಟಿಯಷ್ಟು ಸಮಗ್ರ ಪ್ಯಾಕೇಜ್ ಅನ್ನು ಘೋಷಿಸಿದ ಮೊದಲ ರಾಜ್ಯ ಸರ್ಕಾರವಾಗಿದೆ ಹಾಗೂ ಆಹಾರ ವಸ್ತುಗಳ ಉತ್ಪಾದನೆಯಲ್ಲಿ ಕೇರಳದ ಸ್ವಾವಲಂಬನೆ ಖಾತರಿಪಡಿಸುವ ಉದ್ದೇಶಿತ ಯೋಜನೆಯಾದ 'ಸುಭಿಕ್ಷ ಕೇರಳಂ' ಯೋಜನೆಯನ್ನು ರಾಜ್ಯದ ಸಂಪದ್ಭರಿತ ಸಹಕಾರಿ ವಲಯದ ನೆರವಿನೊಂದಿಗೆ ಪ್ರಕಟಿಸಿದೆ. (ಶೇಕಡಾ 82 ರಷ್ಟು ಕೃಷಿ ಉತ್ಪನ್ನಗಳು ವಾಣಿಜ್ಯ ಬೆಳೆಗಳು) ಈ ಹಿನ್ನೆಲೆಯಲ್ಲಿ ಎಲ್.ಡಿ.ಎಫ್ ಸರ್ಕಾರ ಎಲ್ಲಾ ಬೆಳೆಗಳ ಮೌಲ್ಯವರ್ದನೆ ಖಾತರಿಪಡಿಸುವ, ಪ್ರಾಥಮಿಕ ಉತ್ಪಾದಕರ ಜೊತೆ ಹೆಚ್ಚುವರಿ ದರ ಹಾಗೂ ಹೆಚ್ಚುವರಿ ವೇತನದ ಮೂಲಕ ಮಿಗುತಾಯ ಹಂಚಿಕೊಳ್ಳುವ ಸಹಕಾರಿ ಕೃಷಿ (ಉತ್ಪಾದನೆ, ಕೈಗಾರಿಕಾ ಸಂಸ್ಕರಣೆ, ಹಾಗೂ ಮಾರ್ಕೆಟಿಂಗ್) ಕಾಯ್ದೆಯನ್ನು ಅಂಗೀಕರಿಸಿರುವುದು ಸಕಾಲಿಕ ಕ್ರಮವಾಗಲಿದ್ದು ಪರ್ಯಾಯದ ಕಡೆಗೆ

ಎರಡನೇ ಮಹಾಧಿವೇಶನ–1948

ಪುಟ 11 ರಿಂದ

ಇತ್ತು.

ರಣದೀವೆಯವರು ತಮ್ಮ ನಾಲ್ಕೂವರೆ ಗಂಟೆಗಳ ಭಾಷಣದಲ್ಲಿ, ಜೋಷಿ(ಪಕ್ಷದ ಪ್ರಧಾನ ಕಾರ್ಯದರ್ಶಿ) ಯವರನ್ನು ಮಾತ್ರವಲ್ಲದೇ ತಮ್ಮನ್ನೂ ಒಳಗೊಂಡಂತೆ ಪ್ರತಿಯೊಬ್ಬ ಪೊಲಿಟ್ ಬ್ಯೂರೋ ಮತ್ತು ಕೇಂದ್ರ ಸಮಿತಿ ಸದಸ್ಯರನ್ನು ಸುಧಾರಣಾವಾದಿ ಮಾರ್ಗಚ್ಯುತಿಗಳ ಬಗ್ಗೆ ಟೀಕಿಸಿದರು. ರಣದೀವೆಯವರ ಭಾಷಣ ಮುಗಿದ ಕೂಡಲೇ ಜೋಷಿಯವರು ಮಾತನಾಡಿದರು. ಅವರು ವರದಿಯನ್ನು ಸಂಪೂರ್ಣವಾಗಿ ಒಪ್ಪಿಕೊಂಡರು ಮತ್ತು ಸ್ವವಿಮರ್ಶಾತ್ಮಕವಾಗಿ ತಮ್ಮ ತಪ್ಪುಗಳನ್ನೂ ಒಪ್ಪಿಕೊಂಡರು. 34 ಪ್ರತಿನಿಧಿಗಳು ಈ ಚರ್ಚೆಯಲ್ಲಿ ಭಾಗವಹಿಸಿದ್ದರು. ಇಡೀ ಚರ್ಚೆಯ ಸಾರಾಂಶವನ್ನು ರಣದೀವೆಯವರು ನೀಡಿದರು.

ಪಾಕಿಸ್ತಾನದಲ್ಲಿ ಕಮ್ಯುನಿಸ್ಟ್ ಪಕ್ಷದ ಸಂಘಟನೆಯನ್ನು ರಚಿಸಬೇಕು, ಅದು ಪಾಕಿಸ್ತಾನದಲ್ಲಿನ ಹೋರಾಟವನ್ನು ಮುಂದುವರಿಸುವ ಮತ್ತು ನೀತಿನಿಯಮಗಳನ್ನು ರೂಪಿಸುವ ಹೊಣೆ ಹೊರಬೇಕು ಎಂದು ಮಹಾಧಿವೇಶನ ತೀರ್ಮಾನಿಸಿತು.

ಹಳೆಯ ಕೇಂದ್ರ ಸಮಿತಿಯ ಬಹುತೇಕ ಸದಸ್ಯರನ್ನು ಒಳಗೊಂಡಿದ್ದ ಹೊಸ ಕೇಂದ್ರ ಸಮಿತಿಯನ್ನು ಆಯ್ಕೆಮಾಡುವ ಪಟ್ಟಿಯ ವಿಚಾರವಾಗಿ ಉತ್ಸಾಹಪೂರ್ಣ ಚರ್ಚೆ ನಡೆಯಿತು. ಆ ಪಟ್ಟಿಯನ್ನು, 31 ಜನ ಕೇಂದ್ರ ಸಮಿತಿ ಸದಸ್ಯರನ್ನು ಆಯ್ಕೆ ಮಾಡಲು ಮಹಾಧಿವೇಶನವು ಮತಕ್ಕೆ ಹಾಕಲು ತೀರ್ಮಾನಿಸಿತು. ಈ ಮತದಾನದಲ್ಲಿ ಕೇಂದ್ರ ಸಮಿತಿ ಪ್ರಸ್ತಾಪ ಮಾಡಿದ್ದ ಇಡೀ ಪಟ್ಟಿಯಲ್ಲಿನ ಎಲ್ಲರೂ, ಜೋಷಿಯವರನ್ನು ಹೊರತುಪಡಿಸಿ, ಚುನಾಯಿಸಲ್ಪಟ್ಟರು. ಬಿ.ಟಿ.ರಣದೀವೆಯವರು ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು.

ಮಹಾಧಿವೇಶನವು ಹಿಂದಿನ ಬಲ ಸುಧಾರಣಾವಾದಿ ಮಾರ್ಗಚ್ಯುತಿಗಳನ್ನು ಸರಿಯಾಗಿಯೇ ನಿರ್ಬಂಧಿಸಿತಾದರೂ, ಅದನ್ನು ತಿದ್ದುವಾಗ, ಅದು ಎಡ–ಪಂಥೀಯವಾದಿ ನಿಲುವನ್ನು ಅಳವಡಿಸಿತು. ಹೊಸ ಭಾರತೀಯ ಪ್ರಭುತ್ವದ ಗುಣಲಕ್ಷಣಗಳನ್ನು ಮಹಾಧಿವೇಶನವು ಸರಿಯಾಗಿ ಅಂದಾಜು ಮಾಡಲಿಲ್ಲ. ಬೆಳೆಯುತ್ತಿದ್ದ ಜನಾಂದೋಲನವನ್ನು ಅತಿ–ಅಂದಾಜು ಮಾಡಿತು ಮತ್ತು ಭಾರತೀಯ ಜನರ ಮೇಲೆ ಕಾಂಗ್ರೆಸ್ಸಿಗಿದ್ದ ಪ್ರಭಾವವನ್ನು ಹಾಗೂ ಭಾರತದ ಸಂಘಕ್ಕೆ ರಾಜರುಗಳನ್ನು ಒಟ್ಟುಗೂಡಿಸಲು ಒತ್ತಡ ಹೇರುವ ಅದರ ಸಾಮರ್ಥ್ಯವನ್ನು ಕಡಿಮೆ–ಅಂದಾಜು ಮಾಡಿತು; ಅಂತರ್‍ರಾಷ್ಟ್ರೀಯವಾಗಿ ಶಕ್ತಿಗಳ ಬಲಾಬಲಗಳಲ್ಲಿ ಆದ ಬದಲಾವಣೆಯನ್ನು – ಫ್ಯಾಸಿಸಂ ಮೇಲಿನ ವಿಜಯ, ಸಮಾಜವಾದಿ ಬಣದ ಉದಯ, ಅದು ಜಗತ್ತಿನಾದ್ಯಂತ ಸಾಮ್ರಾಜ್ಯಶಾಹಿಗೆ ಇದ್ದ ನೇರ ಹಿಡಿತವನ್ನು ಕಡಿದುಹಾಕಿದ್ದು – ಗಮನಿಸುವಲ್ಲಿ ಮಹಾಧಿವೇಶನವು ವಿಫಲವಾಯಿತು. ಸಾಮ್ರಾಜ್ಯಶಾಹಿಗಳ ಎಲ್ಲಾ ತಂತ್ರಗಳ ಹೊರತಾಗಿಯೂ, ಈ ಹೊಸ ಸನ್ನಿವೇಶದಿಂದಾಗಿ ತನ್ನ ಸ್ವಾತಂತ್ರ್ಯವನ್ನು ದೃಢಗೊಳಿಸುವುದು ನಮ್ಮ ದೇಶಕ್ಕೆ ಸಾಧ್ಯವಾಗಿತ್ತು.

ಹಲವಾರು ಧೀರೋದಾತ್ತ ಹೋರಾಟಗಳ ಹೊರತಾಗಿಯೂ, ಎರಡನೇ ಮಹಾಧಿವೇಶನದ ತೀರ್ಮಾನಗಳನ್ನು ಜಾರಿಮಾಡಿದ್ದರ ಪರಿಣಾಮವು ಪಕ್ಷವನ್ನು ಮೂಲೆಗುಂಪಾಗಿಸಿತು ಮತ್ತು ಅನೇಕ ಸ್ಥಳಗಳಲ್ಲಿ ಪಕ್ಷದ ಸಂಘಟನೆಯು ಛಿದ್ರವಾಯಿತು ಕೂಡ. ಅದು ಪಕ್ಷದೊಳಗಡೆ ಬಿಕ್ಕಟ್ಟನ್ನು ಸೃಷ್ಟಿಸಿತು ಮತ್ತು ಪಕ್ಷದೊಳಗಡೆ ದೊಡ್ಡ ಚರ್ಚೆಗೆ ಹಾದಿ ಮಾಡಿತು.

ಕರೋನಾ ಫ್ರಂಟ್ ಲೈನ್ ವಾರಿಯರ್ಸ್ ಗಳ ನಿಜ ಕಥೆ–ವ್ಯಥೆ......

ಪುಟ 8 ಕ್ಕೆ

ಎದೆನೋವಿನಿಂದ, ಅದೇ ತಾಲ್ಲೂಕಿನ ತಿಮ್ಮರಾಯಪ್ಪ ಕಸ ತುಂಬುವಾಗ ಕುಮಾರ್ ಮತ್ತು ಚಿಕ್ಕ ತಿಮ್ಮಯ್ಯ ರವರು ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿಯೇ ಮೃತರಾಗಿದ್ದಾರೆ. ಹಾಗೆಯೇ ಹುಬ್ಬಳ್ಳಿಯಲ್ಲಿ ಅಶೋಕ ರಾಣಾ ರವರು ಮೃತರಾಗಿದ್ದಾರೆ. ಆದರೆ ಗ್ರಾಮ ಪಂಚಾಯ್ತಿ ನೌಕರರನ್ನೊಳಗೊಂಡಂತೆ ಇವರ್‍ಯಾರಿಗೂ ಕರೋನಾದಿಂದ ಬರಬೇಕಾದ ಪರಿಹಾರ ಇದುವರೆಗೂ ಸಿಕ್ಕಿಲ್ಲ. ಮತ್ತು ಇವರೆಲ್ಲರೂ ಮಾರ್ಚ ಕೊನೆ ಮತ್ತು ಏಪ್ರಿಲ್ ಮೊದಲನೇ ವಾರದಲ್ಲಿ ಸಾವನಪ್ಪಿರುವುದರಿಂದ ಆವಾಗ ಯಾವುದೇ ಆದೇಶಗಳು ಇರಲಿಲ್ಲ. ನಂತರ ಬಂದ ಆದೇಶದಲ್ಲಿಯೂ ಇಂತಹ ಸಾವುಗಳಿಗೆ ಪರಿಹಾರವಿಲ್ಲ.

ಬೆಳಗಾವಿಯಲ್ಲಿ ಅಂಗನವಾಡಿ ನೌಕರರ ಸಂಘದ ನಾಯಕಿಯಾದ ಮಂದಾ ಮತ್ತು ಆಶಾ ಕಾರ್ಯಕರ್ತೆಯರನ್ನು ಪಾನಮತ್ತರಾದ ಯುವಕರ ತಂಡ ಹಲ್ಲೆ ನಡೆಸಿದೆ. 108 ಅಂಬ್ಯುಲೆನ್ಸ್ ನೌಕರರಾದ ಉಮೇಶ್ ಹಡಗೇಲಿ ಯವರು ನರಗುಂದ ತಾಲ್ಲೂಕಿನ ಕೋಬ್ಣರೂ ಲೋಕೇಶ್ವರದಲ್ಲಿ ಹಗಲು ಪಾಳಿಯ ಕರ್ತವ್ಯದಲ್ಲಿದ್ದಾಗ ಮೇ 27 ರಂದು ನಿಧನರಾಗಿದ್ದಾರೆ. ಹಾಸನ ಜಿಲ್ಲೆಯ ಕೃಷ್ಣಮೂರ್ತಿ ಏಪ್ರಿಲ್ 4 ರಂದು ಮನೆಯಿಂದ ಕೆಲಸಕ್ಕೆ ಸ್ಕೂಟರಿನಲ್ಲಿ ಹೋಗುವಾಗ ಅಪಘಾತವಾಗಿ ತೀರಿ ಕೊಂಡಿದ್ದಾರೆ. ಆದರೆ ಇವರಿಗೆ 50 ಲಕ್ಷ ವಿಮೆ ಇನ್ನೂ ಬಂದಿಲ್ಲ.

ಕರೋನಾ ಪ್ರಂಟ್ ಲೈನ್ ವಾರಿಯರ್ಸ ಎಂದರೆ ಯಾರು?

ಕರೋನಾ ಸಾಂಕ್ರಾಮಿಕ ರೋಗ ಜನವರಿಯಲ್ಲಿಯೇ ವಿಶ್ವದಲ್ಲಿ ಕಾಣಿಸಿಕೊಂಡ ತಕ್ಷಣವೇ ವಿಶ್ವ ಆರೋಗ್ಯ ಸಂಸ್ಥೆ ಇದೊಂದು ಮಹಾಸಾಂಕ್ರಾಮಿಕ ರೋಗ, ಸೊಂಕು ಬಹಳ ಬೇಗನೇ ಹರಡುತ್ತದೆ. 217 ದೇಶಗಳಲ್ಲಿ ಈ ರೋಗ ಕಾಣಿಸಿಕೊಂಡ ನಂತರ, ಕೂಡಲೇ ಎಲ್ಲಾ ದೇಶಗಳು ಎಚ್ಚೆತ್ತು ಕೊಳ್ಳಬೇಕೆಂದು ನಿರ್ದೇಶನ ನೀಡಿತು. ಮಾರ್ಚ 22 ರಂದು ಇದನ್ನು ಮಹಾಮಾರಿ ಎಂದು ಘಉಊಔ ಘೋಷಿಸಿತು. ಆದರೆ ಭಾರತದಂತಹ ದೇಶಗಳು ನಿಧಾನವಾಗಿ ಎಚ್ಚೆತ್ತುಕೊಂಡು ಜನರೇ ಇದರ ಜವಾಬ್ದಾರಿಯನ್ನು ಹೊತ್ತು ಕೊಳ್ಳಬೇಕೆಂಬ ಉದ್ದೇಶದಿಂದ ಯಾವುದೇ ಮುನ್ಸೂಚನೆಯೂ ಇಲ್ಲದೆ, ಮುಂದೆ ಸಂಭವಿಸಬಹುದಾದ ಪರಿಸ್ಥಿತಿಗಳ ಬಗ್ಗೆ ತಲೆಕೆಡಿಸಿಕೊಳ್ಳದೇ ಮಾರ್ಚ 22 ಕ್ಕೆ ಕರ್ಫ್ಯೂ ಎಂದು ಘೋಷಿಸಿ 24 ರಿಂದ ಮೊದಲನೇ ಹಂತದ ಲಾಕ್‌ಡೌನ್‌ನ್ನು ಘೋಷಿಸಿತು.

ಲಾಕ್‌ಡೌನ್ ಘೋಷಣೆಯಾಗಿ ಅಗತ್ಯ ಮತ್ತು ತುರ್ತುಸೇವೆಗಳಿಗೆ ಮಾತ್ರ ಅವಕಾಶ ಕೊಡಲಾಯಿತು. ತುರ್ತು ಸೇವೆಗಳನ್ನು ಮಾಡುವವರು ಅಂದರೆ ಆರೋಗ್ಯ ಇಲಾಖೆ, ಪೋಲಿಸ್ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಮಹಿಳಾ ಮತ್ತು



ಮಕ್ಕಳ ಅಭಿವೃದ್ಧಿ ಇಲಾಖೆ, ಹಾಲಿನ ಡೈರಿಗಳು, ಇಂಧನ ಇಲಾಖೆ, ೦ಕಒಅ ಗಳ ಯಡಿಯಲ್ಲಿರುವ ಹಣ್ಣು, ತರಕಾರಿ, ದಿನಸಿ ಅಂಗಡಿಗಳು, ಔಷಧಿ ಅಂಗಡಿಗಳು ಮತ್ತು ಮಾಧ್ಯಮಗಳು ಮಾತ್ರ ಕಾರ್ಯಾಚರಣೆಯಲ್ಲಿದ್ದವು.

ಕರೋನಾ ಸಾಂಕ್ರಾಮಿಕ ರೋಗ ಹರಡದಂತೆ ಜನರಲ್ಲಿ ಜಾಗ್ರತಿ ಮಾಡಿಸುವುದು, ಅವರಿಗೆ ಮನವೊಲಿಸಿ ಕ್ವಾರೈಂಟನ್ ಮಾಡಿಸುವುದು. ಚಿಕಿತ್ಸೆ ಕೊಡಿಸುವುದು, ಕರೋನಾ ರೋಗದಿಂದ ಗುಣಮುಖರಾದ ಮೇಲೆ ಅವರು ಮಾಮೂಲಿಯಾಗಿ ಜನರೊಟ್ಟಿಗೆ ಬೇರೆಯುವಂತೆ ಅಥವಾ ಸಾಮಾನ್ಯ ಜನ ಅವರನ್ನು ಸ್ವೀಕರಿಸುವಂತೆ ಮಾಡುವ ಕೆಲಸ ಹೆಚ್ಚು ಕಡಿಮೆ ಸಮರೋಪಾದಿಯಲ್ಲಿ ನಡೆಯಬೇಕಿತ್ತು. ತಕ್ಷಣವೇ ಕರೋನ ಎಂಬಾ ವೈರಾಣು ಎಂಬ ಶತ್ರುವನ್ನು ದಮನಿಸುವ ಯುದ್ಧಕ್ಕೆ ತಯಾರಾದ ಸೈನಿಕರೇ 'ಕರೋನಾ ಫ್ರಂಟ್ ಲೈನ್ ವಾರಿಯರ್ಸ್'.

ಆರೋಗ್ಯ ಇಲಾಖೆಯ ವೈದ್ಯರು, ಶುಶ್ರೂಷಕಿಯರು, ಪ್ರಯೋಗಾಲಯಗಳ ತಂತ್ರಜ್ಞರು, ರಾಷ್ಟ್ರೀಯ ಗ್ರಾಮೀಣಾ ಆರೋಗ್ಯ ಮಿಷನ್ (NRHM) ಯೋಜನೆಯ ಗುತ್ತಿಗೆಯಲ್ಲಿ ದುಡಿಯುವ ವೈದ್ಯರು, ಶ್ರುಶೂಷಕಿಯರು, ಪ್ಯಾರಾ ಮೆಡಿಕಲ್ ಸಿಬ್ಬಂದಿಗಳು, ಕಿರಿಯ ಆರೋಗ್ಯ ಸಹಾಯಕಿಯರು, TOT ಗಳು ಮತ್ತು 108 ಅಂಬ್ಯುಲೆನ್ಸ್ ಚಾಲಕರು ಮತ್ತು ನರ್ಸಿಂಗ್ ಬ್ರದರ್ಸ್, ಡಿ ಗ್ರೂಪ್ ಹುದ್ದೆಗಳಲ್ಲಿ ದುಡಿಯುವವರು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು, ಪೋಲೀಸ್ ಸಿಬ್ಬಂದಿ, ಗೃಹ ರಕ್ಷದ ದಳದ ಸಿಬ್ಬಂದಿ, ಹೋಮ್ ಗಾರ್ಡ್ಸ್, ಪೌರ ರಕ್ಷಣದಳ, ಅಗ್ನಿ ಶಾಮಕದಳ, ಪೌರ ಕಾರ್ಮಿಕರು, ಸಾನಿಟೈಸರ್ ಕೆಲಸಗಾರರು, ಮತ್ತು ಕಸ ಎತ್ತುವ ಗಾಡಿಗಳ ಚಾಲಕರು ಮತ್ತು ಲೋಡರ್ ಗಳು ಮತ್ತು ಗ್ರಾಮ ಪಂಚಾಯ್ತಿ ನೌಕರರು – ಇವರು ನೇರವಾಗಿ ಕರೋನಾ ಸಂಬಂಧಿತ ಮುಂಚೂಣಿ ಕೆಲಸಗಳಲ್ಲಿ ತೊಡಗಿಕೊಂಡ ಕರೋನಾ ಪ್ರಂಟ್ ಲೈನ್ ವಾರಿಯರ್ಸ್ ಗಳು.

ಇವರನ್ನೊಳಗೊಂಡಂತೆ ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾಧಿಕಾರದ ಕಾರ್ಯಕಾರಿ ಸಮಿತಿ ಅಧ್ಯಕ್ಷರು, ರಾಜ್ಯ ಸರ್ಕಾರ ಮುಖ್ಯ ಕಾರ್ಯದರ್ಶಿಗಳಾದ ವಿಜಯಭಾಸ್ಕರ್ ರವರು. ಇದರಡಿಯಲ್ಲಿ 425 ಕಾರ್ಯಪಡೆ (ಟಾಸ್ಕ್‌ಫೋರ್ಸ್) ಸಮಿತಿಗಳನ್ನು ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ರಚಿಸಲಾಗಿದೆ. ಗ್ರಾಮೀಣ ಕಾರ್ಯಪಡೆಯ ಪ್ರಮುಖ ಕೆಲಸ ಗ್ರಾಮಗಳಲ್ಲಿ ಯಾರು ಹೊರ ಬರುತ್ತಾರೆ, ಯಾರು ಹೊರಗಡೆ ಹೋಗಿ ಬರುತ್ತಾರೆ, ಎಂಬುದನ್ನು ಗಮನಿಸುವುದಷ್ಟೆ ಅಲ್ಲದೆ ಕರೋನಾ ಲಾಕ್ ಡೌನ್ ಸಂದರ್ಭದಲ್ಲಿ ಜನರು ಅಡ್ಡಾಡದಂತೆ ಕಾಯುವುದು, ಕರೋನಾ ಸೋಂಕು ತಗುಲಿದ ಪ್ರದೇಶಗಳನ್ನು ಸೀಲ್ ಡೌನ್ ಮಾಡುವುದು, ಜನರು ಮಾಸ್ಕ್ ಬಳಸುವಂತೆ ತಿಳುವಳಿಕೆ ಮೂಡಿಸುವುದು. ಇವಷ್ಟೇ ಅಲ್ಲದೆ ಸರ್ಕಾರದಿಂದ ಬರುವ ಎಲ್ಲಾ ನಿರ್ದೇಶನಗಳನ್ನು ಪಾಲಿಸಲಾಗುವಂತೆ ನೋಡಿಕೊಳ್ಳುವುದು ಇವರ ಜವಾಬ್ದಾರಿ.

ವಿದೇಶಗಳಿಂದ ತಂದ ಸಾಲಗಳ ಸಮಸ್ಯೆ

ಪುಟ 13 ರಿಂದ

ಒಂದು ಉತ್ಸಾಹಭರಿತ ಅನುಮೋದನೆಯೇ ಸಿಕ್ಕಿತ್ತು. ಆದರೆ, ಆಗ, ಜಿ–20 ಯ ಯಾವ ದೇಶವೂ ಒಂದು ಬಿಡಿಗಾಸಿನ ನೆರವನ್ನೂ ಈ ದೇಶಗಳಿಗೆ ಕೊಡಲಿಲ್ಲ. ಅದೇನೇ ಇರಲಿ, ಈಗ ವಿಷಯವೇನೆಂದರೆ, ತಮ್ಮ ಜಿಡಿಪಿಯ ಶೇ.1 ರಷ್ಟು ಹಣವನ್ನು ಬಡ ದೇಶಗಳ ಸಾಲ ಮನ್ನಾಕ್ಕಾಗಿ ಪ್ರತಿ ವರ್ಷವೂ ತೆಗೆದಿಡಲು/ಮೀಸಲಿಡಲು ಒಪ್ಪಿದ್ದ ಜಿ–20 ದೇಶಗಳಿಗೆ, ಈಗ ಒಂದೇ ಒಂದು ಸಲ, ಪ್ರತಿ ವರ್ಷ ಅಲ್ಲ, ತಮ್ಮ ಜಿಡಿಪಿಯ ಶೇ.1 ರಷ್ಟು ಹಣವನ್ನು ವಿನಿಯೋಗಿಸಿ ಈ ದೇಶಗಳ ಸಾಲ ಮನ್ನಾ ಮಾಡುವುದು, ಯಾವ ರೀತಿಯಲ್ಲಿ ನೋಡಿದರೂ ಒಂದು ದೊಡ್ಡ ವಿಷಯವೇ ಅಲ್ಲ. ಆದರೆ, ಜಿ–20ಯ ಈಗಿನ ಒಪ್ಪಂದವು ಶೇ.1ಕ್ಕಿಂತ ಕಡಿಮೆ ಇದೆ.

ಈ ಸಾಲದ ಬಿಕ್ಕಟ್ಟು ಕೇವಲ ಮೂರನೇ ಜಗತ್ತಿನ ದೇಶಗಳಿಗೆ ಮಾತ್ರ ಸೀಮಿತವಾದ ವಿದ್ಯಮಾನವಲ್ಲ. ಗ್ರೀಸ್, ಸ್ಪೇನ್ ಮತ್ತು ಇಟಲಿಯಂತಹ ಅನೇಕ ಯೂರೋಪಿಯನ್ ಒಕ್ಕೂಟದ ದೇಶಗಳೂ ಸಹ ಸಾಲದ ಬಿಕ್ಕಟ್ಟಿನಿಂದ ನರಳುತ್ತಿವೆ. ಹಾಗಾಗಿ, ಬರುವ ದಿನಗಳಲ್ಲಿ ಅವರ ಗೋಳಾಟದ ಬಗ್ಗೆ ಹೆಚ್ಚು ಕೇಳಲಿದ್ದೇವೆ. ಕೆಲವು ವರ್ಷಗಳ ಹಿಂದೆ ಸಾಲ ಮರು ಪಾವತಿ ಮಾಡಲು ಗ್ರೀಸ್ ಅಸಮರ್ಥವಾಗಿದ್ದ ಪರಿಸ್ಥಿತಿಯಲ್ಲಿ ಜರ್ಮನ್ ಬ್ಯಾಂಕ್‌ಗಳು ಗ್ರೀಸ್‌ನ ಅರ್ಥವ್ಯವಸ್ಥೆಯ ಮೇಲೆ ನಡೆಸಿದ ಹಲ್ಲೆಯು, ಇತರ ಸಾಲಗಾರ ಯೂರೋಪಿಯನ್ ದೇಶಗಳಲ್ಲಿ ಅಥವಾ ಮೂರನೇ ಜಗತ್ತಿನ ಬಡ ದೇಶಗಳಲ್ಲಿ ಮರುಕಳಿಸಬಾರದು ಎಂದಾದರೆ, ಆಗ, ಬಡ ದೇಶಗಳ ಸಾಲವನ್ನು ಸಂಪೂರ್ಣವಾಗಿಯೂ ಮತ್ತು ಸಂಕಷ್ಟದಲ್ಲಿರುವ ಯೂರೋಪಿಯನ್ ದೇಶಗಳ ಸಾಲವನ್ನು ಭಾಗಶಃವಾಗಿಯೂ ಮನ್ನಾ ಮಾಡಬೇಕಾಗುತ್ತದೆ.

ಸಾಲ ಮನ್ನಾ ಕೈಗೂಡದಿದ್ದರೆ, ಮತ್ತು ಹಣಕಾಸು ಬಂಡವಾಳವು ತನ್ನ ರಕ್ತಪಿಪಾಸಿತನದ ಮನೋಭಾವನ್ನು ತೋರಿಸುತ್ತಲೇ ಹೋದರೆ, ಆಗ, ಸಾಲ ಬಾಧೆಯಿಂದ ಸಂತ್ರಸ್ತರಾದ ದೇಶಗಳು ಸಾಲ ಮನ್ನಾ ಮಾಡಲೇಬೇಕೆಂದು ಒತ್ತಾಯಿಸುವ ಪ್ರಬಲ ಚಳುವಳಿಯಲ್ಲಿ ತೊಡಗುತ್ತಾರೆ. ಈ ವಿಷಯವನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಹಣಕಾಸು ಬಂಡವಾಳವು ಸಾಲ ಮನ್ನಾ ಮಾಡಲು ಸ್ವಯಂಪ್ರೇರಿತವಾಗಿ ಒಪ್ಪಿಕೊಳ್ಳದಿದ್ದರೆ, ಅದನ್ನು ಮಾಡಲೇಬೇಕು ಎಂಬ ಒತ್ತಾಯಪೂರ್ವಕ ಜನ ಚಳುವಳಿಗಳು ಹೆಚ್ಚುತ್ತವೆ. ಕೋವಿಡ್ ಪೆಡಂಭೂತದ ಹಾವಳಿ ಮುಗಿದ ಕೂಡಲೇ, ತನ್ನ ಯಜಮಾನಿಕೆಯನ್ನು ದೇಶ ದೇಶಗಳು ಪ್ರಶ್ನಾತೀತವಾಗಿ ಹಿಂದಿನಂತೆಯೇ ಒಪ್ಪಿಕೊಳ್ಳುತ್ತವೆ, ತನಗೆ ಹಿಂದಿನಂತೆಯೇ ಡೊಗ್ಗು ಸಲಾಮು ಹೊಡೆಯುತ್ತವೆ ಮತ್ತು ತನ್ನ ಹುಕುಂಗಳನ್ನು ಹಿಂದಿನಂತೆಯೇ ಪಾಲಿಸುತ್ತವೆ ಎಂದು ಹಣಕಾಸು ಬಂಡವಾಳವು ಊಹಿಸಿಕೊಂಡರೆ ಅದು ಹುಚ್ಚು ಸಾಹಸವಾಗುತ್ತದೆ.

ಇಡೀ ದೇಶದ ರೈತಾಪಿ ಸಮುದಾಯವನ್ನು ಆಕರ್ಷಿಸಲಿದೆ.

ಜೂನ್ 10, 2020 ರಂದು ಸುಗ್ರಿವಾಜ್ಞೆ ಪ್ರತಿಗಳನ್ನು ಸುಟ್ಟು ಪ್ರತಿಭಟನೆ

ರೈತಾಪಿ ಬೇಸಾಯವನ್ನು ಕಾರ್ಪೊರೇಟೀಕರಣದ ಪರವಾಗಿರುವ ಈ ಮೂರು ರೈತ ವಿರೋಧಿ ಪ್ರತಿಗಳನ್ನು ಸುಟ್ಟು ದೇಶದಾದ್ಯಂತ ಪ್ರತಿಭಟಿಸುವಂತೆ ಎಐಕೆಎಸ್ ಕರೆ ನೀಡಿದೆ. ಇದೇ ರೀತಿ ಜನವರಿ 30, 2015 ರಂದು ಮೋದಿ–1 ಎನ್ ಡಿ ಎ ಸರ್ಕಾರದ ಭೂಸ್ವಾಧೀನ ಸುಗ್ರಿವಾಜ್ಞೆ ವಿರೋಧಿಸಿ ಪ್ರತಿಭಟಿಸಿದ್ದು ಸ್ಮರಣಾರ್ಹವಾದುದ್ದು. ಎಐಕೆಎಸ್, ಎಐಕೆಎಸ್ (ಅಜಯ್ ಭವನ್)ಜೊತೆ ಸೇರಿ ಜಂಟಿಯಾಗಿ ಕರೆ ನೀಡಿತ್ತು ಆ ನಂತರದಲ್ಲಿ ಭೂಮಿ ಅಧಿಕಾರ್ ಆಂದೋಲನ ಎಂದು ವಿಶಾಲ ವೇದಿಕೆ ಸ್ವರೂಪ ಪಡೆಯಿತು. ರೈತರ ಆಕ್ರೋಶವು ಬಿಜೆಪಿ ಚುನಾವಣಾ ಸೋಲಿನಲ್ಲೂ ಪ್ರತಿಫಲಿಸಿ, ಕುಖ್ಯಾತ ಭೂಮಿ ಸುಗ್ರಿವಾಜ್ಞೆ ವಾಪಸ್ಸು ಆಗುವಂತಾಯಿತು. ಆ ಕ್ಷಣ ಕಿಸಾನ್ ಚಳುವಳಿಯಲ್ಲೇ ಒಂದು ನೂತನ ಆರಂಭಕ್ಕೆ ನಾಂದಿಯಾಯಿತು. ಮತ್ತೇ 2020 ರ ಜೂನ್ 10 ರ ಸುಗ್ರಿವಾಜ್ಞೆ ಪ್ರತಿ ಸುಡುವ ಲಕ್ಷಾಂತರ ಸಂಖ್ಯೆಯ ಪ್ರತಿಭಟನೆ ಆಧುನಿಕ ಭಾರತದ ಹಣೆಬರಹ ನಿರ್ಧರಿಸುವಲ್ಲಿ ಸಮರ್ಥವಾಗಬಹುದಾದ ಒಂದು ಹೊಸ ಚಳುವಳಿಯ ಜ್ವಾಲೆಗೆ ಕಾರಣವಾಗಲಿದೆ.

ಕಾರ್ಮಿಕ ವರ್ಗ ಮತ್ತು ರೈತಾಪಿ ವರ್ಗ ಎಲ್ಲಾ ಪ್ರಜಾಸತ್ತಾತ್ಮಕ ಜಾತ್ಯಾತೀತ ಜನ ವಿಭಾಗಗಳ ಜೊತೆ ಕೈ ಜೋಡಿಸಿ ಮುಂಬರುವ ಚಳುವಳಿಗಳಲ್ಲಿ ಕೇಂದ್ರ ಪಾತ್ರವನ್ನು ನಿರ್ವಹಿಸಬೇಕಿದೆ.

JANASHAKTHI KANNADA VARA PATRIKE JUNE 15-21, 2020 Price: Rs. 10/- Date of Publication: 12 JUNE 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283





ಜೂನ್ 10, 2020 ರಂದು ಕೆಪಿಆರ್‌ಎಸ್ ಸುಗ್ರಿವಾಜ್ಞೆ ಪ್ರತಿಗಳನ್ನು ಸುಟ್ಟು ರಾಜ್ಯದಾದ್ಯಂತ ಪ್ರತಿಭಟನೆ











ಜನಶಕ್ತಿ ಮೀಡಿಯಾ ಯೂಟ್ಯೂಬ್ ನಲ್ಲಿ

'ಜನಶಕ್ತಿ ಮೀಡಿಯಾ' ಯೂಟ್ಯೂಬ್ ಈಗ ಸಕ್ರಿಯವಾಗಿದ್ದು ಈ ವಾರ 15 ವಿಡಿಯೊಗಳನ್ನು ಅಪ್ ಲೋಡ್ ಮಾಡಲಾಗಿದೆ. ಈ ವಾರ ಅಪ್ ಲೋಡ್ ಮಾಡಲಾದ ಕೆಲವು ಪ್ರಮುಖ ವಿಡಿಯೊಗಳು ಹೀಗಿವೆ :



* ಭೂಸುಧಾರಣೆ ತಿದ್ದುಪಡಿ ಗುಲಾಮಿತನದ ಪ್ರತೀಕ (ಜೂ.12)
* ಶಾಲೆಗಳನ್ನು ಯಾವಾಗ ಆರಂಭಿಸಬೇಕು ? ಹೇಗೆ? (ಜೂ.10)
* ಬೆಂಬಲ ಬೆಲೆ ಹೆಚ್ಚಳ ಶೇ. 50 ಅಥವಾ 5? (ಜೂ.9)
* ರೈತರಿಗೆ ತೂಗುಗತ್ತಿಯಾಗಿರುವ ಸುಗ್ರೀವಾಜ್ಞೆಗಳು (ಜೂ.8)
* ಆದಿವಾಸಿ ವಾರಲೀಯರದಂಗೆ (ಜೂ. 7)
* ಎಚ್.ಎನ್. ಜನ್ಮ ಶತಾಬ್ದಿ ವಿಶೇಷ (ಜೂ.6)
* ಒಂದು ಪೋಲೀಸ್ ದೌರ್ಜನ್ಯ ಯಾಕೆ ಅಮರಿಕದಲ್ಲಿ ದಂಗೆ ಎಬ್ಬಿಸಿತು? (ಜೂ.5)

ಯೂಟ್ಯೂಬ್ ನಲ್ಲಿ **'Janashakthi Media'** ಎಂದು ಸರ್ಚ್ ಕೊಡಿ.
ನಂತರ ಅಲ್ಲಿ ಕಾಣುವ **'Subscribe'**ನ್ನು ಕ್ಲಿಕ್ ಮಾಡಿ.
ನಂತರದಲ್ಲಿ ಕಾಣುವ **'ಬೆಲ್ ಐ ಕಾನ್ ಬಟನ್'** ಒತ್ತಿ. ನಿರಂತರ ನೋಟೀಫಿಕೇಶನ್ ಬರುತ್ತದೆ.
ಈ ಮೂಲಕ ಜನಶಕ್ತಿ ಮೀಡಿಯಾ ಯೂಟ್ಯೂಬ್ ನ್ನು ಪ್ರೋತ್ಸಾಹಿಸಿ.

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**